UNIVERSAL LIBRARY
OU_198108
UNIVERSAL LIBRARY

# ನಮ್ಮ ಬದುಕು

( ಆರು ಕತೆಗಳು )

**ಆನಂದಕಂದ**

೧೯೩೯

ದಾ ಪ್ರತಿಗೆ ೦-೮-೦ ]                [ ಕ್ಯಾಲಿಕೊ ಪ್ರತಿಗೆ ೧-೧೨-೦

ಪ್ರಕಾಶಕರು :
**ಬೆಟಗೇರಿ ಕೃಷ್ಣಶರ್ಮ**
'ಜಯಂತಿ' **ಕಾರ್ಯಾಲಯ**
ಧಾರವಾಡ

ಇದರ ಎಲ್ಲ ಬಗೆಯ ಅಧಿಕಾರವೂ ಗ್ರಂಥಕರ್ತರದು.

ಮುದ್ರಕರು :
**ಖಂಡೋ ರಾಮಚಂದ್ರ ಭಿಸೆ**
ಕರ್ನಾಟಕ ಪ್ರಿಂಟಿಂಗ್ ವರ್ಕ್ಸ್,
ಧಾರವಾಡ

# ಮೊದಲು ಮಾತು

'ಬಡತನದ ಬಾಳು' 'ಸಂಸಾರಚಿತ್ರ'ಗಳ ತರುವಾಯ ಇದೀಗ ಮೂರನೆಯ ಕಥಾಸಂಗ್ರಹ. ಇದರಲ್ಲಿಯ ಆರು ಕತೆಗಳೂ ಈ ಮೊದಲು ಬೇರೆ ಬೇರೆ ಪತ್ರಿಕೆಗಳಲ್ಲಿ ಅಚ್ಚಾಗಿ, ಅನೇಕ ಕನ್ನಡಿಗರ ಕಣ್ಣಿಗೆ ಈ ಮೊದಲೆ ಬಿದ್ದುವುಗಳಾಗಿವೆ. 'ಮಾಲ್ಕೀ ಹಕ್ಕು' 'ಮಮತೆಯ ಮುಡಿಪು' ಗಳಂತೂ ಹಿಂದೀ ಭಾಷೆಗೆ ಅನುವಾದಿತವಾಗಿ, ಮೊದಲನೆಯುದು 'ಹಂಸ' ಎಂಬ ಮಾಸಪತ್ರಿಕೆಯಲ್ಲಿಯೂ ಎರಡನೆಯುದು ಒಂದು ಕಥಾಸಂಗ್ರಹದಲ್ಲಿಯೂ ಅಚ್ಚಾಗಿವೆ. ಅಲ್ಲಲ್ಲಿ ಚೆದರಿಕೊಂಡಿರುವ ಈ ಕತೆಗಳನ್ನು ಒಂದೆ ಸಂಪುಟದಲ್ಲಿ ಕೂಡಿಸಿಡಬೇಕೆಂಬ ಬಯಕೆಯಿಂದ ಈ ಸಂಗ್ರಹವನ್ನು ಪ್ರಕಟಿಸಲಾಗಿದೆ. 'ಕಾಣದ ಕೈ' ಎಂಬ ಕತೆಯು ಇದರಲ್ಲಿ ಅಚ್ಚಾದುದು ನಾಲ್ಕನೆಯ ಸಲವಾದರೂ, ಈ ಮೊದಲಿನ ನನ್ನ ಯಾವ ಕಥಾಸಂಗ್ರಹದಲ್ಲಿಯೂ ಸೇರಿರಲಿಲ್ಲವಾದುದರಿಂದ ಅದನ್ನೂ—ಭಾಷೆಯ ದೃಷ್ಟಿಯಿಂದ ಅಲ್ಪಸ್ವಲ್ಪ ತಿದ್ದಿ—ಈ ಸಂಗ್ರಹದಲ್ಲಿ ಸೇರಿಸಲಾಗಿದೆ.

ಇದರಲ್ಲಿಯ ಯಾವ ಕತೆಯೂ ಆಕಾಶಕುಸುಮಕ್ಕೆ ಕೈಯೊಡ್ಡಿ ಹೊರಟುದಲ್ಲ; ಬಿಸಿಲುಗುದುರೆಯ ಬೆನ್ನುಹತ್ತಿ ನಡೆದುದಲ್ಲ. ಎಲ್ಲ ಕತೆಯಲ್ಲಿಯೂ ಬರುವ ಜನರು ನಮ್ಮ ನಿಮ್ಮಂತಹ ಸಾಮಾನ್ಯಜನರು. ಅವರು ತಮ್ಮ ಬಾಳಿನಲ್ಲಿ ಯಾವುಯಾವುವೊ—ಸಕಾರಣವೊ ನಿಷ್ಕಾರಣವೊ—ಕಷ್ಟ-ಸುಖಗಳ ಸುಳಿಗಳಲ್ಲಿ ತಮ್ಮ ಮನದ ಹೊಯ್ದಾಟದ ಮೂಲಕವಾಗಿಯೆ ಹೇಗೆ ಸಿಲುಕುವರು; ತಂತಮ್ಮ ಆಶೆ-ಆಕಾಂಕ್ಷೆಗಳ ಫಲಪ್ರಾಪ್ತಿಗೆ ಹೇಗೆ ಎರವಾಗುವರು,- ಹೇಗೆ ನೆರವಾಗುವರು; ಸಮಾಜದಲ್ಲಿಯ ಬಹುಜನರ ಅಜ್ಞಾನವೆ ವ್ಯಕ್ತಿಗಳ ಬಾಳಿನ ಕಷ್ಟ-ನಷ್ಟಗಳಿಗೂ ಬಡತನದ ಬವಣೆಗಳಿಗೂ ಹೇಗೆ ಕಾರಣವಾಗುವುದು.. ಇತ್ಯಾದಿ ಮಾತುಗಳನ್ನೆಲ್ಲ ವರ್ತಮಾನ ಲೋಕದ ವಾಸ್ತವಜೀವನದಿಂದೆತ್ತಿ ಈ ಕತೆಗಳಲ್ಲಿ ಚಿತ್ರಿಸಲಾಗಿದೆ; ಆದುದರಿಂದಲೆ ಈ ಸಂಗ್ರಹಕ್ಕೆ 'ನಮ್ಮ ಬದುಕು' ಎಂದು ಹೆಸರನ್ನಿಡಲಾಗಿದೆ.

ಘಟನಾಪ್ರಧಾನವಾದ ಕತೆಗಳನ್ನು ಬರೆಯುವವರು ನಮ್ಮಲ್ಲಿ ತುಂಬ ಜನರಿರುವರು. ವ್ಯಕ್ತಿಗಳ ಸ್ವಭಾವಗಳನ್ನರಳಿಸಿ ತೋರಿಸುವ ಕತೆಗಾರರು ತೀರ ಕಡಿಮೆ ಜನರು. ವ್ಯಕ್ತಿಯ ಮನಸ್ಸನ್ನು ವಿಶ್ಲೇಷಿಸಿ, ನಡೆದ ಘಟನೆಗೆ ಇನ್ನಾವುದೂ ಕಾರಣವಲ್ಲದೆ ಆ ಮನಸ್ಸಿನ ವಿವಿಧವಾದ ವಿಕ್ಷೇಪಕಶಕ್ತಿಯೆ ಕಾರಣವೆಂಬುದನ್ನು ತೋರಿಸುವ ಸೂಕ್ಷ್ಮ ಮನೋವಿಜ್ಞಾನಿಗಳಂತೂ ನಮ್ಮ ಕತೆಗಾರರಲ್ಲಿ ಬೆರಳಿನಿಂದ ಎಣಿಸುವಷ್ಟು ಜನರು. ಹಾಗೆ ಮನಸ್ಸನ್ನು ಹಿಂಜಿ ತೋರಿಸಿದವರ ಹೆಚ್ಚಿನ ಕೃತಿಗಳೂ ಒಂದೆ ಒಂದು 'ರತಿ' ಭಾವವನ್ನು ವಿಶ್ಲೇಷಿಸಲು ಹೊರಟುವುಗಳಾಗಿವೆ. ಪ್ರಸಿದ್ಧ ಮನೋವಿಜ್ಞಾನಿಯಾದ ಫ್ರಾಯಿಡ್ ಎಂಬವನು, ಜಗತ್ತಿನ ಎಲ್ಲ ಹೋದೆಯಾಟಕ್ಕೂ ಮೂಲಕಾರಣ ಕಾಮವೊಂದೇ ಒಂದು ಹೇಳಿರುವನು. ಅವನ ಕಾಮುವೇನೋ ಕೇವಲ ಲೈಂಗಿಕಕಾಮವೆಂಬ ಅರ್ಥವನ್ನೆ ಹೆಚ್ಚಾಗಿ ಸ್ಪಷ್ಟೀಕರಿಸುತ್ತದೆ. ಆದರೆ ಮನುಷ್ಯನಿಗೆ ಮುಖ್ಯವಾಗಿ ಬೇಕಾದುವು ಎರಡು. ನಿಸರ್ಗವು ಆ ಎರಡು ಬಗೆಯ ಕಾಮುಗಳನ್ನು ಹುಟ್ಟಿಸೊಡನೆಯೆ ಆತನ ಮನದ ಬೆನ್ನಿಗೆ ಅಂಟಿಸಿರುತ್ತದೆ. ಆ ಕಾಮುಗಳಲ್ಲಿ ಮೊದಲನೆಯುದು ವ್ಯಕ್ತಿ ತಾನು ಬದುಕಲಿಕ್ಕೆ ಅವಶ್ಯಕವಾದ ಆಹಾರೇಚ್ಛೆ; ಎರಡನೆಯುದು ಸೃಷ್ಟಿಯ ಮುಂದುವರಿತಕ್ಕೆ ಆವಶ್ಯಕವಾದ ಲೈಂಗಿಕಕಾಮನೆ. ಜಗತ್ತಿನಲ್ಲಿಯ ಯಾವ ಜೀವನಕಲಹದ ಹಿಂದೆಯೂ ಇವೆರಡೇ ಎರಡರ ಕೈಚಳಕಗಳು ನಮಗೆ ನೋಡಲು ಸಿಕ್ಕುವುವು. ಈ ನೈಸರ್ಗಿಕ ಸತ್ಯದರ್ಶನವೆ ಈ ಕತೆಗಳಿಗೆ ವಸ್ತುಗಳನ್ನಾಯ್ದುಕೊಂಡಿದೆ; ತಕ್ಕ ಮಾತಿನಲ್ಲಿ ಅವುಗಳನ್ನು ಅರಳಿಸಿ ತೋರಿಸಲಿಕ್ಕೆ ಹವಣಿಸಿದೆ. ಅದರ ಹವಣಿಕೆಯ ಸಾರ್ಥಕತೆ–ವೈಯರ್ಥಕತೆಗಳನ್ನು ನಿರ್ಣಯಿಸಲು ರಸಿಕ ವಿಮರ್ಶಕರು ಸಮರ್ಥರಿದ್ದೇ ಇರುವರು.

ಇಲ್ಲಿಯ ಕತೆಗಳ ಭಾಷೆ ಎಲ್ಲ ಕಡೆಯ ಕನ್ನಡಿಗರಿಗೆ ತಿಳಿಯಬಹುದಾದರೂ ಕೆಲಕೆಲವು ಪಾತ್ರಗಳಾಡುವ ಭಾಷೆ ಉತ್ತರಕರ್ಣಾಟಕದ ದೇಸಿನುಡಿಯನ್ನು ಅನುಸರಿಸಿದೆ. ಕಥಾಸಂದರ್ಭಗಳಿಂದ ಅಲ್ಲಲ್ಲಿಯ ದೇಸಿನುಡಿಗಳ ಅರ್ಥವೂ ಎಲ್ಲರಿಗೂ ಆಗುವಂತಿದೆ; ಆದರೂ ಸ್ವಲ್ಪ ತೊಂದರೆಯೆನಿಸಬಹುದು

ಧಾರವಾಡ
ಶ್ರಾವಣದ ಪೌರ್ಣಿಮೆ
ತಾ|| ೨೯–೮–೩೯

**ಆನಂದಕಂದ**

# ನಮ್ಮ ಬದುಕು

## ಕತೆಗಳ ಪರಿವಿಡಿ


| | | |
|---|---|---|
| ೧. | ಮಲ್ಲಮ್ಮನ ಮಹಾಭಾರತ | ೧ |
| ೨. | ಸೋಂಕುರೋಗ | ೨೫ |
| ೩. | ಕಾಣದ ಕೈ | ೪೨ |
| ೪. | ಮಮತೆಯ ಮುಡಿಪು | ೭೬ |
| ೫. | ಮಾಲ್ಕೀ ಹಕ್ಕು | ೮೫ |
| ೬. | ಜಾಡರ ಜಾನಪ್ಪ | ೯೮ |

# ಇದೇ ಲೇಖಕರ ಬೇರೆ ಪುಸ್ತಕಗಳು

## ಅಚ್ಚಾದುವು

★

| | | |
|---|---|---|
| ಮುದ್ದನ ಮಾತು | .. .. .. | ಕವನಸಂಗ್ರಹ |
| *ಅರುಣೋದಯ | .. .. .. | ಕವನಸಂಗ್ರಹ |
| ವಿರಹಿಣಿ | .. .. .. | ಕವನಸಂಗ್ರಹ |
| *ಬಡತನದ ಬಾಳು | .. .. .. | ಕಥಾಸಂಗ್ರಹ |
| ಸಂಸಾರ ಚಿತ್ರ | .. .. .. | ಕಥಾಸಂಗ್ರಹ |
| *ಸುದರ್ಶನ | .. .. | ಸಾಮಾಜಿಕ ಕಾದಂಬರಿ |
| *ರಾಜಯೋಗಿ | .. .. | ಐತಿಹಾಸಿಕ ಕಾದಂಬರಿ |
| *ಅಶಾಂತಿಪರ್ವ | .. .. | ಐತಿಹಾಸಿಕ ಕಾದಂಬರಿ |
| *ಹಳ್ಳಿಗರ ಹಾಡು | .. .. | ಜನಪದ ಸಾ. ವಿಮರ್ಶೆ |
| ಶ್ರೀ ಬಸವಣ್ಣನವರು | .. .. .. | ಮಕ್ಕಳಿಗಾಗಿ ಚರಿತ್ರೆ |
| ಭಾವಗೀತ | .. | ಹರಿದಾಸ-ಶಿವಶರಣರ ಗೀತಸಂಗ್ರಹ |
| ಕರ್ಣಾಟಕ ಜನಜೀವನ | .. | ಸಂಸ್ಕೃತಿ ಸಂಶೋಧನಾತ್ಮಕ |

ಈ ಗುರುತು ಮಾಡಿದ ಮೇಲಿನ ಗ್ರಂಥಗಳೆಲ್ಲ ಮರಳಿ ಅಚ್ಚಾಗುತ್ತಲಿವೆ.

## ಅಚ್ಚಾಗಲಿರುವುವು

| | | |
|---|---|---|
| ಒಡನಾಡಿ | .. .. .. | ಕವನಸಂಗ್ರಹ |
| ಕಾರಹುಣ್ಣಿವೆ | .. .. .. | ಕವನಸಂಗ್ರಹ |
| ಹಾಳು ಹಳ್ಳಿ ! | .. .. | ಸಾಮಾಜಿಕ ಕಾದಂಬರಿ |

# ಮಲ್ಲಮ್ಮನ ಮಹಾಭಾರತ

ಯಾವುದೇ ಒಂದು — ತೀರ ಸಾಮಾನ್ಯ — ಮನುಷ್ಯವ್ಯಕ್ತಿಯನ್ನೆ ತೆಗೆದುಕೊಳ್ಳೋಣ ; ಅದರ ವರ್ತಮಾನಜೀವನದ ತೆರೆಯ ಹಿಂದೆ, ಸುಖ-ದುಃಖದ ಅನುಭವದ ಅನೇಕ ಅದೃಶ್ಯಚಿತ್ರಗಳು ನೇತಾಡುತ್ತಿರುತ್ತವೆ. ಅವೆಲ್ಲ ಚಿತ್ರಗಳು ನಮ್ಮ ಕಣ್ಣಿಗೆ ಸ್ಪಷ್ಟವಾಗಿ ಕಾಣುತ್ತಿರುವಂತೆ ಸೃಷ್ಟಿಯ ರಚನೆಯಿದ್ದರೆ, ಪ್ರಪಂಚದ ಪ್ರಗತಿಯ ಕಾರ್ಯವು ಇಷ್ಟೊಂದು ಉಯ್ಯಾಲೆ ಯಾಡುತ್ತ ನಡೆಯುತ್ತಿರಲಿಲ್ಲವೆಂದು ನನ್ನೆಣಿಕೆ; ಹೀಗೆ ಅವುಗಳನ್ನು ಅದೃಶ್ಯ ವಾಗಿರಿಸುವುದರಲ್ಲಿ ಕಾಲನ ಸಂಕಲ್ಪವಾದರೂ ಏನಿದೆಯೊ ಯಾರು ಬಲ್ಲರು ?

*　　*　　*

ಪಟ್ಟಣದ ವಾಸವು — ಈಗಿನ ಕಾಲದಲ್ಲಿ — ನಮ್ಮಂತಹ ಸರ್ವಸಾಧಾರಣ ಆದಾಯದವರಿಗೆ ತುಂಬ ಕಷ್ಟಕರ ನೋಡಿ ! ಸಿರಿವಂತರಂತೆ ಎಲ್ಲ ಕೆಲಸ ಗಳನ್ನೂ ಆಳುಗಳಿಂದ ಮಾಡಿಸಿಕೊಳ್ಳುವಷ್ಟು ಹಣದ ಅನುಕೂಲತೆಯಿರುವು ದಿಲ್ಲ ; ಬಡವರಂತೆ ದುಡಿದು ತಂದಷ್ಟನ್ನೇ ಹೇಗಾದರೂ ಹೊಟ್ಟೆಯಲ್ಲಿ ತುಂಬಿಕೊಂಡು, ದಿನದ ಕೆಲಸಕ್ಕೋಡುವುದಕ್ಕೆ ಮನಸ್ಸಿನ ಸಂಸ್ಕಾರವು ಒಪ್ಪುವುದಿಲ್ಲ. ನನಗಂತೂ ಅನೇಕ ಸಲ ತಲೆಯಲ್ಲಿ ಹೀಗೆ ಯೋಚನೆ ಬಂದು ಬಂದು ಹೋಗುವುದು : "ಈ ಬಡವರಾಗಿದ್ದವರ ಮನಸ್ಸು, ಬುದ್ಧಿ, ಹೃದಯಗಳು ಬೆಳವಣಿಗೆ ಹೊಂದದೆ ಬರೀ ದೇಹಬಲವಷ್ಟು ಬೆಳವಣಿಗೆ ಹೊಂದುವಂತಹ ಚುಚ್ಚುಮದ್ದನ್ನು (ಇಂಜೆಕ್ಶನ್ ಸೀರಮ್) ಯಾವನಾದರೂ ಒಬ್ಬ ಸಂಶೋಧಕನು ಕಂಡುಹಿಡಿದರೆ ಎಷ್ಟು ಸೊಗಸಾ ದೀತು..!" ಎಂದು. ಅಹುದೊ ಅಲ್ಲವೋ ವಿಚಾರಮಾಡಿ ನೋಡಿ ! ಬುದ್ಧಿ-ಭಾವನೆಗಳು ಸಂಸ್ಕಾರ ಹೊಂದಿದುವೆಂದರೆ ಇಲ್ಲದ ಆಕಾಂಕ್ಷೆಗಳು

ತಲೆದೋರುವುವು; ಬಡತನವಿದ್ದಲ್ಲಿ ಈ ಆಕಾಂಕ್ಷೆಗಳು ಪೂರ್ಣತೆಯನ್ನು ಪಡೆಯದೆ ಹೋಗುವುವು; ಇಂತಹ ಅಪೂರಿತ ಆಕಾಂಕ್ಷೆಗಳೇ ರೇಗಿಕೊಂಡು, ಯಾವುದೊಂದು ಸಮಾಜದ ಇಲ್ಲವೆ ಸಾಮ್ರಾಜ್ಯದ ಸುಂದರ ಮಂದಿರದ ಮೇಲೆ ಸಿಡಿಲಿನ ಮಳೆಯನ್ನು ಸುರಿಸತೊಡಗುವುವು: ಕಾಲನ ಪ್ರಳಯ ಲೀಲೆಗೆ ಅವಕಾಶವನ್ನುಂಟುಮಾಡಿಕೊಡುವುವು. ಎಂತಲೇ ನಾನು ಹೇಳು ವುದು: 'ಬಡವರಾದವರ ದೇಹಬಲವಷ್ಟೇ ಬೆಳೆದರೆ, ಇಲ್ಲದ ಅವ್ಯವಸ್ಥೆ ಗಳುಂಟಾಗದೆ ಇದ್ದವರಾದರೂ ಸುಖದಿಂದ ಉಂಡುಕೊಂಡು ಇದ್ದಾರು' ಎಂದು.

ನಮ್ಮ ಮನೆಯಲ್ಲಿ ಇನ್ನೊಬ್ಬರು ಯಾರಾದರೂ ಮನೆಗೆಲಸ ಸಾಗಿಸಿ ಕೊಂಡು ಹೋಗುವವರಿದ್ದರೆ, ಇಷ್ಟೊಂದು ದೀರ್ಘಯೋಚನೆಯು ಬೆನ್ನು ಹತ್ತುವ ಪ್ರಸಂಗ ನನಗಾದರೂ ಎಲ್ಲಿ ಬರುತ್ತಿದ್ದಿತು! ಆಫೀಸಿನ ಕೆಲಸ ವಾಯಿತು, ಸಂಬಳವಾಯಿತು, ಹೆಂಡತಿಯಾಯಿತು, ಮಗುವಾಯಿತು, ಸುಖವಾಗಿ ನಿರಾಲೋಚನೆಯಿಂದ ಇದ್ದುಬಿಡುತ್ತಿದ್ದೆ. ಆದರೇನು! ಮನೆ ಯಲ್ಲಿ ರುಕ್ಮಿಣಿ ಒಬ್ಬಳೇ ಒಬ್ಬಳು, ಆರುತಿಂಗಳ ಕೂಸಿನ ತಾಯಿ ಬೇರೆ. ನಾನೋ 'ಹನ್ನೊಂದು ಗಂಟೆಯ ಆಫೀಸಿನ' ಅವಸರದವನು. ಮನೆಗೆಲಸ, ಕೂಸಿನ ಆರೈಕೆ ಇದನ್ನೆಲ್ಲಾ ನಿರ್ವಹಿಸಿಕೊಂಡು, ಹನ್ನೊಂದು ಗಂಟೆ ಯೊಳಗಾಗಿ ನನಗೆ ಅಡಿಗೆಯನ್ನೊದಗಿಸಬೇಕು. ಈ ಎಲ್ಲ ಹೊರೆಯೂ ರುಕ್ಮಿಣಿಯೊಬ್ಬಾಕೆಯ ತಲೆಯಮೇಲೆ. ಅವಳ ಪ್ರಕೃತಿಯಾದರೂ ಬಲವುಳ್ಳು ದೆನ್ನಬೇಕೇ, ಮನೆಯಲ್ಲಿದ್ದ ಕೊಡವೊಂದನ್ನೂ ಎತ್ತಲಿಕ್ಕೆ ಆಗದುದರಿಂದ, ಆಕೆಗಾಗಿಯೇ ಹೊಸದೊಂದು ಬಿಂದಿಗೆಯನ್ನು ಕೊಂಡು ತರಬೇಕಾಯಿತು. ಪಾಪ! ಸಂಪ್ರದಾಯವಂತರ ಮನೆಯ ಹುಡುಗಿ; ಕೂಗಾಟವಿಲ್ಲ, ಚೀರಾಟ ವಿಲ್ಲ, ಮುಖಕ್ಕೆ ಗಂಟುಇಲ್ಲ; ಹಾಗೆಯೇ ತನ್ನಿಂದಾದಷ್ಟು ಕೆಲಸವನ್ನು ಹೇಗಾದರೂ ಮಾಡಿ ಮುಗಿಸಿ, ನನ್ನ ಆಫೀಸಿನ ವೇಳೆಗೆ ನಾಲ್ಕು ತುತ್ತು ಅನ್ನವೊದಗಿಸುವಳು.

ರುಕ್ಮಿಣಿಯ ಕಷ್ಟವನ್ನು ನೋಡಿ ನಾನು ಒಳಗೊಳಗೆಯೆ ಮರುಗು ತ್ತಿದ್ದೆ. ಒಮ್ಮೊಮ್ಮೆ 'ಗೃಹಲಕ್ಷ್ಮಿ' 'ಕರ್ಮಯೋಗಿನಿ' ಎಂದು ನನ್ನ

ಸಂಸ್ಕೃತಬುದ್ಧಿಯಿಂದ ಪದವಿಗಳನ್ನು ಕೊಡಲು ಹಚ್ಚಿ, ಮರುಗುತ್ತಿರುವ ಮನಸ್ಸು-ಹೃದಯಗಳನ್ನು ಸುಮ್ಮನಿರಿಸಿಕೊಳ್ಳುತ್ತಿದ್ದೆ. ಇದಕ್ಕೂ ಹೆಚ್ಚಿಗೆ ಏನು ಮಾಡುವುದು ? ಅಡಿಗೆಯವಳೊಬ್ಬಳನ್ನು ಇಟ್ಟರೆ ರುಕ್ಮಿಣಿಗೆ ಸುಲಭ ವಾಗಬಹುದೆಂದು ಮನಸ್ಸು ಹರಿದಾಡಿತು. ಆದರೆ ನನ್ನ ಆರ್ಥಿಕಸ್ಥಿತಿಯ ಕಡೆಗೇ ಕಣ್ಣಿಟ್ಟಿದ್ದ ಆ ಬಣಜಿಗರ ಲೆಕ್ಕದ ಬುದ್ಧಿಯು, ಮನದ ಹರಿದಾಟ ವನ್ನು ಹಿಡಿದು ನಿಲ್ಲಿಸಿತು. ಕೊನೆಗೆ ಕೂಸನ್ನು ಹಿಡಿಯುವುದಕ್ಕೆ ಒಬ್ಬ ಒಕ್ಕಲಿಗಿತ್ತಿಯನ್ನಾದರೂ ಇಟ್ಟುಕೊಳ್ಳಬೇಕೆಂದು ಎಣಿಕೆಹಾಕಿದೆ. ನಮ್ಮ ಮನೆಗೆ ನಿತ್ಯವೂ ಹಾಲು ಕೊಡಲಿಕ್ಕೆಂದು ಬರುತ್ತಿರುವ ಗೋದೂಬಾಯಿಗೆ ಯಾರನ್ನಾದರೂ ನೋಡೆಂದು ಆಗಾಗ ಹೇಳಲು ತೊಡಗಿದೆ.

ಕೂಸನ್ನು ಎತ್ತಿಕೊಳ್ಳುವ ಕೆಲಸ ! ಹೆಚ್ಚುಕಾಲ ನಮ್ಮ ಮನೆ ಯಲ್ಲಿಯೇ ಇರಬೇಕು, ನಾವು ಕೊಟ್ಟಷ್ಟು ಸಂಬಳ ತೆಗೆದುಕೊಳ್ಳಬೇಕು ! ಇಷ್ಟೊಂದು ಯೋಗ್ಯತೆಗಳುಳ್ಳ ಆಳು ನಮಗೆ ಬೇಗನೆ ಹೇಗೆ ಸಿಕ್ಕಬೇಕು ?

* * *

ತಿಂಗಳೆರಡು ತಿಂಗಳು ಹೋದಮೇಲೆ ಹಾಲಿನವಳು ಒಂದುದಿನ ಬಂದು ಕೇಳಿದಳು :

“ ರಾಯರs! ಕೂಸಿನ್ನೆತ್ತಿಗೊಳ್ಳಲಿಕ್ಕೆ ನಿಮಗೊಂದು ಆಳು ಬೇಕಲ್ರೇ?”

“ ಬೇಕಾದಲ್ಲೇ ಅಲ್ಲೇನವ್ವಾ ನಿನಗ ದಿನಾ ಹೇಳತಿರೋದು ! ”

“ ಹಾಂಗಾದರ.., ಅತ್ಲಾಗಿನ ದೇಶದಾಗೆಲ್ಲೋ ಮಳೀ ಬೆಳೀ ಇಲ್ದs ಬರಾಬಿದ್ದsದಂತ. ಎಷ್ಟೋ ಬಡಜನಾ ಗೂಳೇ ಕಟಿಕೊಂಡು ಹೊಟ್ಟೀ ತುಂಬಿಕೊಳ್ಳಿಕ್ಕಂತ ಈ ಊರಿಗೆ ಬಂದಾರ. ಅವರೊಳಗ ಒಂದು ಮುದಿಕಿ ಅದ. ನಿಮ್ಮ ಪುಟ್ಟಮ್ಮನ್ನ ಕರಕೊಂಡು ಆಡಿಸಲಿಕ್ಕೆ ಚಲೋ ಅದ ! ”

“ ಒಳ್ಳೇದs ಆಯ್ತಲಾ! ಇಂದ ಸಂಜೀಕಡೇನs ಆಕಿನ್ನ ಇಲ್ಲಿಗೆ ಕರ ಕೊಂಡು ಬಂದುಬಿಡು ; ಸಂಬಳಾ ಏನು ಕೇಳಬಹುದು ?”

“ ಎಲ್ಲೀ ಸಂಬಳರೀ ; ಹಳ್ಳೀಊರಿನ ಮುದಿಕಿ ! ಏನಾದರೂ ನೋಡಿ ಸ್ವಲ್ಪ ಹೊಟ್ಟಿಗೆ ಕೊಟ್ಟರ ಆಯ್ತು. ತಾಯಿ-ಮಗಾ ಇಬ್ಬರಿದ್ದಾರ;

ಮಗಾ ಇನ್ನೆಲ್ಲಾದರೂ ದುಡೀಲಿಕ್ಕೆ ಹೋಗತಾನ. ಮುದಿಕಿ ನಿಮ್ಮಲ್ಲೇ ಬರತಾಳ ತೀರಿತು!”

ನಾನು ಮನಸ್ಸಿನಲ್ಲಿಯೆ ಹಿಗ್ಗಿದೆ. ‘ನನ್ನ ರುಕ್ಮಿಣಿಯ ಕೆಲಸದ ಹೊರೆ ಕಡಿಮೆಮಾಡುವ ಕಾಲ ಕೂಡಿಬಂದಿತಲ್ಲ..!’ ಎಂದು ಸಮಾಧಾನದ ಉಸಿರುಗರೆದೆ. ‘ಇಂದ ಸಂಜೀಕಡೇನ ಆ ಮುದಿಕಿನ್ನ ಕರಕೊಂಡು ಬಂದು ಬಿಡ್ತೇನ ಗೋದೂಬಾಯಿ!’ ಎಂದು ಮತ್ತೆ ಮತ್ತೆ ಹಾಲಿನವಳಿಗೆ ಹೇಳಿಕೊಂಡೆ.

*　　　*　　　*

ಮಲ್ಲಮ್ಮನೆಂದು ಮುದುಕಿಗೆ ಹೆಸರು. ಆಕೆ ನಮ್ಮ ಮನೆಯಲ್ಲಿ ಇರಲು ತೊಡಗಿ ಹದಿನೈದು ಇಪ್ಪತ್ತು ದಿನಗಳಾದುವು. ತನ್ನ ಮನೆಯ ಎಲ್ಲ ಕೆಲಸವನ್ನೂ ತೀರಿಸಿ, ಮಗನ ಹೊಟ್ಟೆಯ ಏರ್ಪಾಡನ್ನು ಮಾಡಿ, ಸುಮಾರು ಬೆಳಗಿನ ಏಳು ಗಂಟೆಗೆ ಮಲ್ಲಮ್ಮ ನಮ್ಮ ಮನೆಗೆ ಬರುವಳು. ಅವಳು ಬರುವ ವೇಳೆಗೂ ಪುಟ್ಟಮ್ಮ ಏಳುವ ವೇಳೆಗೂ ಸರಿಹೋಗುವುದು. ಮಲ್ಲಮ್ಮ ಬಂದಾಗಿನಿಂದ ರುಕ್ಮಿಣಿಗೆ ಅರ್ಧಕ್ಕರ್ಧ ಕೆಲಸದ ಭಾರ ಕಡಿಮೆಯಾದಂತಾಯಿತು.

ಮೊದಮೊದಲು ಮಲ್ಲಮ್ಮನನ್ನು ನೋಡುವ ನನ್ನ ದೃಷ್ಟಿಯು, ನಮ್ಮ ಪುಟ್ಟಮ್ಮನನ್ನು ಎತ್ತಿಕೊಳ್ಳಲು ದೊರೆತ ಒಂದು ಮನುಷ್ಯದೇಹದ ಯಂತ್ರವೆಂದು ಅವಳನ್ನು ಭಾವಿಸುತ್ತಿತ್ತು. ಎಂತಲೇ ಅವಳೊಡನೆ ಮಾತನಾಡುವ ಸಂದರ್ಭವನ್ನೇ ನಾನು ತಂದುಕೊಳ್ಳುತ್ತಿರಲಿಲ್ಲ. ಆದರೆ ಬರುಬರುತ್ತ ನನಗೆನಿಸಲುತೊಡಗಿತು: ‘ಈ ಹಳೆಯದಾದ ದೇಹಯಂತ್ರದ ಒಳಕ್ಕೆ, ಜಗತ್ತಿನ ಬೇರೆಬೇರೆ ಭಾವ-ರಸಗಳನ್ನನುಭವಿಸಿದ, ಅನುಭವಿಸಬಲ್ಲ ಮನಸ್ಸು-ಹೃದಯಗಳು ಎಲ್ಲಿಯೋ ಹುದುಗಿಕೊಂಡಿರುವುವು’ ಎಂದು.

ಮಲ್ಲಮ್ಮ ಬರುತ್ತಿದ್ದಾಗಿನಿಂದ ನಮ್ಮ ಪುಟ್ಟಮ್ಮ ಅತ್ತುದನ್ನೇ ನಾನು ಕೇಳಿಲ್ಲ. ಆಕೆ ಮಗುವನ್ನೆತ್ತಿ ಕುಣಿಸುವಳು, ಹಾರಿಸುವಳು, ಆನೆಯಾಡಿಸುವಳು, ತೊಡೆಯಲ್ಲಿಟ್ಟುಕೊಂಡು ಗಲ್ಲಿಸುವಳು, ಮೈತಟ್ಟುತ್ತ ಜೋಗುಳ ಹಾಡುವಳು. ಆಕೆಯ ಹಾಡುಗಳು ಕಿವಿಗೆ ಬೀಳುತ್ತಿದ್ದಾಗಲೆಲ್ಲಾ

ನಾನು ಕೈಯೊಳಗಿನ ಕೆಲಸವನ್ನು ಬಿಟ್ಟು, ತಲೆಯಲ್ಲಿಯ ವಿಚಾರಗಳನ್ನೆಲ್ಲ ತೊಡೆದುಹಾಕಿ, ಆ ಹಾಡುಗಳ ಕಡೆಗೆ ಮನಸ್ಸನ್ನು ಹರಿಸುವೆನು. ಕೆಲ-ಕೆಲವು ಹಾಡುಗಳಂತೂ ತಮ್ಮಲ್ಲಿರುವ ಅರ್ಥ-ಭಾವಚಮತ್ಕೃತಿಯಿಂದ ನನ್ನನ್ನು ಮರುಳುಗೊಳಿಸಿಬಿಡುತ್ತಿದ್ದುವು :

> **" ಬಾಳsಗ ತೊಡಸೀನ ಬಾಳಿಪಟ್ಟೀ ಅಂಗಿ**
> **ಬ್ಯಾಡೊ ಕಂದಯ್ಯ ಮಳಲಾಟಾ,**
> **ಬ್ಯಾಡೊ ಕಂದಯ್ಯ ಮಳಲಾಟಾಡೋದು ಕಂಡು**
> **ಬಾಲೇರು ಬಸಿರು ಬಯಸ್ಯಾರು ! "**

ಇನ್ನೂ ಮದುವೆಯಾಗದಿದ್ದ ಬಾಲೆಯರು ಬಸಿರು ಬಯಸಿ ಅನರ್ಥವಾದೀತೆಂಬ ಹೆದರಿಕೆಯೇನೋ ಈ ಕವಯಿತ್ರಿಗೆ 'ಎಂಬ ಯೋಚನೆ ಬಂದು, ಈ ಹಾಡನ್ನು ಕೇಳಿದ ದಿನ— ನಾಲ್ಕಾರು ಸಲ— ನೆನೆನೆನೆಸಿಕೊಂಡು ನನ್ನೊಳಗೆ ನಾನೇ ನಕ್ಕಿದ್ದೆ.

> **" ಹೆಣ್ಣುಮಕ್ಕಳು ನಮಗ ಪುಣ್ಣೇದ ಫಲಗೋಳು**
> **ಅನ್ನಿಗರ ಮಗನು ನನ ಮನಿಗೆ**
> **ಅನ್ನಿಗರ ಮಗನು ನನ ಮನಿಗೆ ಬರುವಂಥಾ**
> **ಹೆಣ್ಣುಮಕ್ಕಳನ ಕೊಡು ಶಿವನೇ "**

ಈ ಹಾಡನ್ನು ಕೇಳಿದಾಗಂತೂ ನನ್ನ ಪುಟ್ಟಮ್ಮನ ಭವಿಷ್ಯಜ್ಜೀವನದ ಸವಿಯಾದ ಕಣಸುಗಳು ನನ್ನ ಕಣ್ಣೆದುರಿಗೆ ಬಂದು ನಿಲ್ಲುತ್ತಿದ್ದುವು : ಪುಟ್ಟಮ್ಮ ಬೆಳೆದು ದೊಡ್ಡವಳಾದ ಹಾಗೆ, ಅವಳ ಮದುವೆಯಾದ ಹಾಗೆ, ಪ್ರೀತಿಯಿಂದಿದ್ದ ಮಗಳು ಅಳಿಯರು ಜೊತೆಗೂಡಿ ಮನೆಗೆ ಬಂದಹಾಗೆ.

ಮಲ್ಲಮ್ಮನ ಹಾಡುಗಳು ಒಂದೊಂದೂ ನನ್ನನ್ನು ಎಷ್ಟೋ ಸಲ ನಗಿಸಿರುತ್ತವೆ, ತಲೆದೂಗಿಸಿರುತ್ತವೆ. ಇನ್ನೆಷ್ಟೋ ಸಲ ಎದೆಯಲ್ಲಿ ಕಳವಳದ ಹೊಳೆಯನ್ನು ಹರಿಸಿರುತ್ತವೆ. ಹಲವು ಸಲ ಎದೆಮುಗುಳ ಮುಖವನ್ನು ಅರಳಿಸಿರುತ್ತವೆ. ಆಗೆಲ್ಲಾ ಮಲ್ಲಮ್ಮನನ್ನು, ಪುಟ್ಟಮ್ಮನನ್ನಾಡಿಸುವ

ಯಂತ್ರವೆಂಬ ಭಾವನೆಯನ್ನು ಬಿಟ್ಟು ನನ್ನ ದೃಷ್ಟಿ ಇನ್ನಾವುದೋ ಒಂದು ತಿಳಿಯದಂತಹ ಭಾವನೆಯಿಂದ ನೋಡಲು ತೊಡಗುವುದು.

* * *

ಅನೇಕ ಸಲ ಮಲ್ಲಮ್ಮ ಮಗುವನ್ನಾಡಿಸುತ್ತ ಕುಳಿತಿರುವಳು. ಅವಳ ಕೈ ಆನೆಯಾಡಿಸುತ್ತಲೋ, ಚಪ್ಪಳೆ ತಟ್ಟುತ್ತಲೋ, ಮೈದಡವುತ್ತಲೋ ಇರುವುದು. ಮನಸ್ಸು ಮಾತ್ರ ಮಗುವಿನ ಕಡೆಗಿರದೆ ಶೂನ್ಯದೃಷ್ಟಿಯನ್ನು ಬೆಂಬತ್ತಿ ಎಲ್ಲೆಲ್ಲಿಯೋ ಅಲೆದಾಡುತ್ತಲಿರುವುದು. ಮೂಗು ಮೆಲ್ಲಮೆಲ್ಲಗೆ ಬಿಸಿಯಾದ ಉಸಿರನ್ನು ಹೊರಕ್ಕೆ ಬಿಡುತ್ತಿರುವುದು. ಕಣ್ಣುಗಳು ಕೆಂಪಾಗಿ, ಬಣಗಿಹೋದ ಎವೆಗಳು ಒದ್ದೆಯಾಗಿರುವುವು. ಒಂದೊಂದು ಸಲ ಕಣ್ಣೀರು ಅವಳ ಸುಕ್ಕುಗಟ್ಟಿದ ಕೆನ್ನೆಯ ವರೆಗೂ ಕೆಳಕ್ಕಿಳಿದು ಬಂದಿರುವುವು. ಆಗ ಮಗುವು '**ಗಾ, ಗೂ**' ಎಂದು ತನ್ನನ್ನು ಮಾತನಾಡಿಸುತ್ತಿರುವುದರ ಕಡೆಗೂ ಮಲ್ಲಮ್ಮನ ಲಕ್ಷ್ಯವಿರದು. ತನ್ನ ಏಕಾಕ್ಷರೀ ಮಾತುಗಳಿಗೆ ಮಲ್ಲಮ್ಮನ ಮಮತೆಯ ಪ್ರತಿಫಲವು ಸಿಕ್ಕದಾಗಲು, ಕೂಸು ರೇಗಿಕೊಂಡು ಕಿರುಚಲು ತೊಡಗುವುದು. ಆಗ ಮಲ್ಲಮ್ಮನು ಹಾರಿ-ಬಿದ್ದವಳಂತಾಗಿ ಎಚ್ಚತ್ತು. ಮಗುವನ್ನು ಸಂತವಿಟ್ಟು ಮಾತನಾಡಿಸುವಳು. ಅವಳ ಈ ಬಗೆಯ ಭಾವಭಂಗಿಗಳನ್ನು ನಾನು ನಾಲ್ಕಾರು ಸಲ ನೋಡಿದೆ. ನೋಡಿದೆನಾದರೂ ಮನಸ್ಸಿನೆದುರು ತಾರದೆ ಹೋದೆ. ಪುಟ್ಟಮ್ಮನ ಅಳುವು ನಿಂತಿತು, ರುಕ್ಮಿಣಿಯ ತೊಂದರೆ ತಪ್ಪಿತು, ಆದರಿಂದ ನನ್ನ ಕೊರಗಾಟ ಕಳೆದುಹೋಯಿತು. ಇನ್ನುಳಿದುದನ್ನೆಲ್ಲ ಸುಮ್ಮನೆ ತಲೆಯಲ್ಲಿ ತುಂಬಿಕೊಂಡು ಮಾಡುವುದೇನು

ಮನೆಯಲ್ಲಿದ್ದಾಗ, ನಾನು ರುಕ್ಮಿಣಿ ಏನನಾದರೂ ನಗೆಯಾಡಿ ವಿನೋದ ಮಾಡುತ್ತಿರುವೆವು. ಮಲ್ಲಮ್ಮ ತೆರೆದ ಬಾಯಿಂದ, ಹಿಗ್ಗಿದೆದೆಯಿಂದ, ಆಶೆಯ ನೆಟ್ಟ ನೋಟದಿಂದ ನಮ್ಮ ವಿನೋದದಾಟವನ್ನು ನೋಡಿಯೇ ನೋಡುವಳು, ತಾನೂ ನಗುವಳು, ನಗೆಯ ಜೊತೆಯಲ್ಲಿಯೆ ತನ್ನ ಯೋಚನೆಯ ನೋಟಗಳನ್ನು ಇನ್ನೆಲ್ಲಿಯೋ ತೊಡಕಿಸುವಳು ; ಕೊಂಚ-ಕಾಲ ಹಾಗೆಯೆ ಕುಳಿತಿದ್ದು ನಿಡಿದಾಗಿ ಉಸಿರಿಡುವಳು. ಇಂತಹ

ಸಂದರ್ಭದಲ್ಲಿಯೇ ಒಂದೆರಡು ಸಲ ಆಕೆ ರುಕ್ಮಿಣಿಯೊಂದಿಗೆ ಹೇಳಿದ ಮಾತುಗಳನ್ನು ಕೇಳಿದೆ :

"ನಮ್ಮ ಕಾಶಿ, ಸುದ್ದ ನಿಮ್ಹಾಂಗs ಇದ್ದಳು ನೋಡ್ರಿ ಅವ್ವನವರs!"

ನಮ್ಮ ನಗೆಯಾಟದ ಗಲಾಟೆಯಲ್ಲಿ ಮಲ್ಲಮ್ಮನ ಕಾಶಿಯನ್ನು ಯಾರು ಕೇಳಬೇಕು? ಅವಳ ಬಾಯಿಂದ ಹೊರಟ ಕಾಶಿ, ಗಾಳಿಯ ಕೂಡ ಗಾಳಿಯಾಗಿಬಿಡುತ್ತಿದ್ದಳು. ನನ್ನ ಕಣ್ಣಿಗಾಗ ಜಗತ್ತೆಲ್ಲವೂ ರುಕ್ಮಿಣಿಯ ರೂಪವಾಗಿ ನಿಂತಿರುವಂತೆ ತೋರುವುದು; ರುಕ್ಮಿಣಿಯ ಕಣ್ಣಿಗೆ ವಿಶ್ವವೆಲ್ಲವೂ ನನ್ನಲ್ಲಿ ಹುದುಗಿಕೊಂಡಿದ್ದಂತೆ ಕಾಣುವುದು. ಇಬ್ಬರ ಕಣ್ಣೆದುರಲ್ಲಿಯೂ ಹಣೆಯಿಕ್ಕಿ ಹೋಗುವ ಇನ್ನೊಂದು ವಸ್ತುವಾವುದಾದರೂ ಇದ್ದರೆ ಅದು ಪುಟ್ಟಮ್ಮನ ಮುಗುನಗೆಯ ಮುದ್ದುಮೊಗ. ಮಲ್ಲಮ್ಮನ ಕಾಶಿ, ಕಿವಿಯ ನರಗಳಲ್ಲಿ ಸುಳಿಯುತ್ತಿದ್ದಳಾದರೂ ಹೃದಯದಲ್ಲಿ ಇಳಿದುಬರುವ ಶಕ್ತಿ ಅವಳಿಗಿರಲಿಲ್ಲ. 'ತನ್ನ ಹೃದಯದಮೇಲೆ ಬೀಳುವ ಹೊಡೆತಗಳನ್ನು ಹನೆಯಮೇಲೆ ಹಾಕಿಬಿಟ್ಟೆನಲ್ಲ!' ಎಂದು ಮಲ್ಲಮ್ಮನು ತನ್ನಷ್ಟಕ್ಕೆ ತಾನು ಸಮಾಧಾನಪಟ್ಟುಕೊಳ್ಳುತ್ತಿರಬಹುದು.

* * *

ಮಗುವನ್ನಾಡಿಸುವುದಲ್ಲದೆ ಮನೆಗೆಲಸದಲ್ಲಿಯೂ ಮಲ್ಲಮ್ಮ ರುಕ್ಮಿಣಿಗೆ ನೆರವಾಗಲು ತೊಡಗಿದಳು. ಇದರಿಂದ ಮಲ್ಲಮ್ಮನ ಮನುಷ್ಯತ್ವದ ಅಸ್ತಿತ್ವವನ್ನು ಹೆಚ್ಚುಹೆಚ್ಚಾಗಿ ನನ್ನ ಮನಸ್ಸು ಒಪ್ಪಿಕೊಳ್ಳಲಾರಂಭಿಸಿತು. ಎಂತಲೇ ಮಲ್ಲಮ್ಮನೊಂದಿಗೆ ನಾನು ಆಗಾಗ ಸಲುಗೆಯ ದನಿಯಲ್ಲಿ ಮಾತನಾಡತೊಡಗಿದೆ. ಹಾಗೆ ನಾನು ಮಾತನಾಡಿದಾಗಲೆಲ್ಲಾ ಆ ಮುದುಕಿಯ ಎದೆಯ ಹಿಗ್ಗು ಮುಖದಲ್ಲಿ ಮೂಡಿ ನಿಲ್ಲುವುದು.

ನಾನು ಮನೆಯಲ್ಲಿಲ್ಲದಾಗ ಮಲ್ಲಮ್ಮ ರುಕ್ಮಿಣಿ ಸೇರಿ ಕುಳಿತು, ಪರಸ್ಪರರ ಜೀವನದ ವಿಷಯದಲ್ಲಿ ಎಷ್ಟೋ ಮಾತುಗಳನ್ನು ಆಡುತ್ತಿರಬಹುದು. ದಿನಗಳು ಹೋದಂತೆ ಮಲ್ಲಮ್ಮನನ್ನು ಕಾಣುವ ರುಕ್ಮಿಣಿಯ ರೀತಿಯಲ್ಲಿ ಕರುಣೆ, ಸಹಾನುಭೂತಿ, ಆತ್ಮೀಯತೆಗಳು ಹೆಚ್ಚುಹೆಚ್ಚಾಗಿ ಕಾರ್ಯ ಮಾಡುತಿರುವುದನ್ನು ನಾನು ನೋಡಲಾರಂಭಿಸಿದೆ.

* * *

ಮೊನ್ನೆಯ ಆದಿತ್ಯವಾರ ಮಧ್ಯಾಹ್ನ, ಮನೆಯಲ್ಲಿ ಮಾಡಬೇಕಾದ ಆಫೀಸಿನ ಕೆಲಸವೇನೂ ಇರಲಿಲ್ಲ; ಬಿಡುವಾಗಿದ್ದುಕೊಂಡು ಹಾಗೆಯೆ ಪಡಸಾಲೆಯಲ್ಲಿ ಶತಪಥ ಇಡುತ್ತಿದ್ದೆ. ನಿರುದ್ಯೋಗಿಯಾದ ರಸಿಕ ಹೃದಯದ ಕೆಲಸವೇನೆಂಬುದು ಬಹುಜನರಿಗೆ ಗೊತ್ತಿದ್ದ ಮಾತು. ಒಳಕ್ಕೆ ಯಾವ ಕೆಲಸದಲ್ಲಿ ತೊಡಗಿದ್ದಳೇನೋ .., ತುಂಬ ಕೆಲಸವಿದ್ದವರಂತೆ ಆತುರದ ಕೂಗಿನಿಂದ ರುಕ್ಮಿಣಿಯನ್ನು ಕರೆದೆ. ನನ್ನ ಕರೆಗೆ ಮನ್ನಣೆಯನ್ನು ಕೊಟ್ಟು– ಆಕೆಯೂ ಪಾಪ— ನಾನು ಅಡಿಯಾಡುತ್ತಿದ್ದಲ್ಲಿಗೆ ಬಂದು ಆತುರದಿಂದ ಕೇಳಿದಳು.

"ಅದೇನು ? ಏತಕ್ಕೆ ಕರೆದದ್ದು ?"

"ಏತಕ್ಕೂ ಇಲ್ಲ ; ಸುಮ್ಮನೇ ಕೂಗಿದೆ !"

"ಯಾವಾಗಲೂ ಇದೇ ಹಣೆಯ ಬರೆಹ ! ಮನೆತುಂಬಾ ಕೆಲಸ, ಸುಮ್ಮಸುಮ್ಮನೆ ಕೂಗಿದರೆ ಆಯಿತು !" ರುಕ್ಮಿಣಿ ಹೊರಡುವುದರಲ್ಲಿದ್ದಳು; ನಾನು ತಡೆದು ಮಾತನಾಡಿದೆ.

"ಇಲ್ಲಿ ನೋಡು, ಸ್ವಲ್ಪ ತಡೆ; ಒಂದು ಆವಶ್ಯಕವಾದ ಮಾತನ್ನು ಕೇಳಬೇಕಾಗಿದೆ ನಿನ್ನನ್ನು !"

ರುಕ್ಮಿಣಿ ಕುತೂಹಲದಿಂದ ಕೇಳಿದಳು : "ಏನು ಮಾತದು ?

"ಇನ್ನೇನೂ ಇಲ್ಲ ; ಪುಟ್ಟಮ್ಮನ ಮದುವೆಯ ಕಾಲಕ್ಕೆ ನಿನಗೆ ಹರಳಿನ ಬೆಂಡೋಲೆ ಮಾಡಿಸಬೇಕೋ, ಮುತ್ತಿನ ಏಕಾವಳಿ ಮಾಡಿಸಬೇಕೋ ಎಂದು ಕೇಳಲಿಕ್ಕೆ ಕರೆದೆ"

ಹುಸಿಕೋಪದ ನಗೆಯಿಂದ ರುಕ್ಮಿಣಿ ನುಡಿದಳು.

"ಸಾಕು, ಇಲ್ಲದ್ದೊಂದು ಹುಚ್ಚುಚ್ಚಾರ ! ವೇಳೆ ಗೊತ್ತಿಲ್ಲ, ಹೊತ್ತು ಗೊತ್ತಿಲ್ಲ. ಮೂರೂ ಹೊತ್ತೂ ಹುಡುಗಾಟವೇ ! ಹರಳಿನ ಬೆಂಡೋಲೆ, ಮುತ್ತಿನ ಏಕಾವಳಿ ನನಗೆ– ಈ ಜನ್ಮದಲ್ಲಿಯಂತೂ ಇರಲಿ– ಮುಂದಿನ ಜನ್ಮದಲ್ಲಿಯಾದರೂ ಸಿಕ್ಕುತ್ತವೆಯೋ ಇಲ್ಲವೋ !

"ಮುಂದಿನ ಜನ್ಮದಲ್ಲಿ ಯಾರಿಗೆ ಯಾರೋ ಪುರಂದರ ವಿಠಲಾ ! ಅಲ್ಲವೇ, ನಿಮ್ಮಪ್ಪನಿಗೆ ಮೊದಲೇ ತಿಳಿಯಬಾರದಾಗಿತ್ತೇನು : ನಿನಗೆ

ಹರಳಿನ ಬೆಂಡೋಲೆ, ಮುತ್ತಿನ ಏಕಾವಳಿ ತೊಡಿಸುವಂತಹ ಗಂಡನನ್ನು ಹುಡುಕಬೇಕು - ಎಂದು ! ”

“ ನಮ್ಮಪ್ಪನಿಗೆ ನಾನು ಸರಿಯಾದ ಗಂಡನನ್ನು ಬಯಸುವೆನೆಂಬುದು ಮಾತ್ರ ತಿಳಿದಿತ್ತು. ಅದನ್ನು ಪೂರೈಸುವ ಕೆಲಸವನ್ನವನು ಮಾಡಿದ. ಇನ್ನು ಬೆಂಡೋಲೆ ಏಕಾವಳಿಗಳ ಬಯಕೆಯನ್ನು ತೀರಿಸಬೇಕಾದದ್ದು ಯಾರ ಕರ್ತವ್ಯಕರ್ಮವೋ ಅವರು ತೀರಿಸಲಿ ಬೇಕಾದರೆ ! ”

‘ ಸರಿಯಾದ ಗಂಡ ’ ಎಂದು ಹೆಂಡತಿ ಒಪ್ಪಿ ಸರ್ಟಿಫಿಕೇಟು ಕೊಟ್ಟಾಗ, ಗಂಡನ ಗರುವಿಕೆ ಅದೆಷ್ಟು ಹೆಚ್ಚಬೇಡ ! ರುಕ್ಮಿಣಿಯ ಮಾತಿನಿಂದ ನನ್ನ ತಲೆಗೆ ರಡು ಕೋಡು ಮೂಡಿದಂತೆ ಎನಿಸಿತು. ಮುಸಿನಗೆಯ ರೂಪದಿಂದ ಹೊರಟ ಹಿಗ್ಗನ್ನು ಹೊರಕ್ಕೆ ತೂರುತ್ತ ಮತ್ತೆ ನಗೆಯಾಡಿದೆನು :

“ ನೋಡು, ಪುಟ್ಟಮ್ಮನ ಮದುವೆಯಲ್ಲಿ ನಿನ್ನ ಬಯಕೆಯನ್ನು ಪೂರೈಸಿಯೆ ಬಿಡುತ್ತೇನೆ, ತಿಳಿಯಿತೇ ? ”

“ ಪುಟ್ಟಮ್ಮನ ಮದುವೆಯಲ್ಲಿಯೋ ? ಪುಟ್ಟಮ್ಮನ ಮೊಮ್ಮಗಳ ಮದುವೆಯಲ್ಲಿಯೋ ! ಎಲ್ಲವನ್ನೂ ಕಂಡಹಾಗೆಯೇ ಇದೆ. ಮೊದಲು ರಾಶಿರಾಶಿ ವರದಕ್ಷಿಣೆಕೊಟ್ಟು ಅಳಿಯನನ್ನು ಸಮಾಧಾನಪಡಿಸಿದ ಮೇಲೆ ಅಲ್ಲವೇ ನನ್ನ ಒಡವೆಯ ಸುದ್ದಿ ? ”

“ ವರದಕ್ಷಿಣೆಯಂತೆ ! ನಿಮ್ಮಪ್ಪ ನನಗೆ ಕೊಟ್ಟಷ್ಟು ನಾನು ನನ್ನ ಅಳಿಯನಿಗೆ ಕೊಡಬೇಕಲ್ಲವೇ ವರದಕ್ಷಿಣೆ ? ”

“ ಯಾವಾಗ ನೋಡಿದರೂ ನಿಮ್ಮ ಕಣ್ಣಮುಂದೆ ನಮ್ಮಪ್ಪನೇ ನಿಂತಿರುತ್ತಾನೆ. ನಿಮಗೇನು ! ಆದಿತ್ಯವಾರ, ಕಚೇರಿಯಿಲ್ಲ, ಕಾಗದವಿಲ್ಲ ; ನನಗ ಒಳಗೆ ಕೆಲಸ ಕಾಲುಮುರಿದುಕೊಂಡು ಬಿದ್ದಿದೆ. ” ಎಂದು ನುಡಿದವಳೇ ರುಕ್ಮಿಣಿಯು ಹೊರಟುಬಿಟ್ಟಳು. ಹೋಗುವಾಗ, ಅಲ್ಲಿದ್ದ ಪುಟ್ಟಮ್ಮನನ್ನು ಕರೆದುಕೊಂಡು ಕುಳಿತ ಮಗುವಿನ ಕಡೆಗೆ ಮಮತೆಯ ನೋಟದಿಂದ ನೋಡುತ್ತ, ಮುದ್ದು ಮುದ್ದಾಗಿ ಮಾತನಾಡಿಸುತ್ತ ಮುಂದುವರಿಯುತ್ತಿದ್ದಳು.

ಮಲ್ಲವ್ವ ವಿನಯ-ಮಮತೆಗಳೆರಡೂ ಬೆರೆತ ನೋಟದಿಂದ ನನ್ನ ಕಡೆಗೆ ನೋಡುತ್ತ ಹೇಳಿದಳು:

" ನಿಮ್ಮಿಬ್ಬರದೂ ಹುಡುಗಾಟಾ ನೋಡತಿರುವಾಗೆಲ್ಲಾ ನನಗ ನಮ್ಮ ಕಾಶಿ-ಶಿವಲಿಂಗರ ಬಾಳೇನs ಕಣ್ಣಮುಂದ ಕಟ್ಟತೈತಿ ನೋಡ್ರಿ!"

ಅದೇತಕ್ಕೋ-ಇದ್ದಕ್ಕಿದ್ದ ಹಾಗೆಯೆ-ಅಂದು ಕಾಶಿ ಕಿವಿಯಿಂದ ಮನಸ್ಸಿಗೆ ಇಳಿದಳು. ನಾನು ಮಲ್ಲವ್ವನ ಕಡೆಗೆ ನೋಡುತ್ತ ಸ್ವಾಭಾವಿಕವಾಗಿಯೆ ಕೇಳಿದೆ :

" ಕಾಶಿ ಅಂದರ ಯಾರು ಮಲ್ಲವ್ವಾ ? "

" ನಮ್ಮ ಶಿವಲಿಂಗನ ಹೇಣತಿರಿ ! "

" ಶಿವಲಿಂಗ ಯಾರು ? "

" ಗೊತ್ತಿಲ್ಲೇನ್ರಿ ? ನನ್ನ ಮಗಾ ! "

" ನಿನ್ನ ಮಗನ ಹೆಸರು ಶಿವಲಿಂಗ ಏನು ? ಹಂ, ಹಂ, ಅವನ ಮದುವಿ ಆಗೇದೇನು ? "

ಮಲ್ಲವ್ವನ ಮುಖದ ಕಳೆಯು ಒಮ್ಮೆಲೆ ಇಳಿದುಹೋಯಿತು. ನಿಟ್ಟುಸಿರಿನೊಡನೆಯೇ ಮಾತನಾಡಿದಳು :

" ಮದಿವ್ಯಾತು, ಮುಂಜ್ಯಾತು. ಬಾಳೇ ಆತು, ಎಲ್ಲಾನೂ ಬೆಳ್ಳಂ ಬೆಳಕು ಆತು. ನಮ್ಮ ಜಲಮಾ ತಗೊಂಡು ಏನು ಮಾಡೂದsತಿ ಬಿಡ್ರಿ ಯಪ್ಪಾ ! ಏನೋ ಜೀವ ಐತೀ ಅಂತ ಬದಕಿಕೊಂಡು ಇದ್ದೀವಿ ಆತು."

ಮಲ್ಲವ್ವನ ಕಣ್ಣುಗಳಲ್ಲಿ ನೀರು ತುಳುಕಿತು. ಆವಳ ಕಣ್ಣೀರನ್ನು ಕಂಡು ನನ್ನ ಹೃದಯವೂ ಕೊಂಚ ಕೊಂಚ ಕರಗಲು ತೊಡಗಿತು. ಸಹಾನುಭೂತಿಯ ಸ್ವರದಲ್ಲಿ ಕೇಳಿದೆ :

" ನಿನ್ನ ಸೊಸಿ ಈಗ ಇಲ್ಲೇನು ಮಲ್ಲವ್ವಾ ? "

" ಇಲ್ರಿ , ರಾಯರ, ಆಕಿ ಸತ್ತುಹೋಗಿ. . ಈಗ ಒಂದು ವರಸ ಆಗತs ಬಂತು."

" ಅಯ್ಯೋ ಪಾಪ ! ಏನಾಗಿತ್ತವಳಿಗೆ ? " ಸಹಜವಾಗಿ ನಾನು ಕೇಳಿದೆ.

“ಏನಾಗಿತ್ತಂತ ಹೇಳಲಿ ಯಪ್ಪಾ! ನನ್ನ ಬಂಗಾರದ ಮುದ್ದೀ ಹಂತಾ ಕಾಶಿ.. ಬಾಂವೀ ಬಿದ್ದು ಸತ್ತುಹೋದ್ಲು.”

ಮಲ್ಲಮ್ಮನ ಮಾತುಗಳು ನನ್ನ ಆತುರವನ್ನು ಜಾಗೃತಗೊಳಿಸಲು ತೊಡಗಿದುವು. ಮತ್ತೆ ಕೇಳಿದೆನು:

“ಭಾಂವೀ ಬಿದ್ದು ಸತ್ತಳಽ? ಅತ್ತೀಸೊಸೀ ನಡುವ ಜಗಳಗಿಗಳ ಆತೇನು?”

“ಹೆಂತಾ ಮಾತರೀಯಪ್ಪಾ! ಕಾಶಿ ನನ್ನ ತಮ್ಮನ ಮಗಳು. ನಮ್ಮ ಮನ್ಯಾಗಽ ಬೆಳದು ದೊಡ್ಡಾಕಿ ಆದವಳು. ತಮ್ಮನ ಮಗಳು ಬ್ಯಾರೇ, ನನ್ನ ಮಗಳು ಬ್ಯಾರೇ ಏನ್ರಿ? ನನ್ನ ಕಾಶೀಯಂತಾ ಗುಣವಂತಿ ಸೊಸೀ ಜೋಡೀ ಜಗಳಾಡೂ ಅತ್ತಿ ಇರಬೇಕಂದರ ಅದೊಂದು ಕತ್ತೀನಽ ಇರಬೇಕು ನೋಡ್ರಿ ಯಪ್ಪಾ!”

“ಗಂಡಾ ಹೇಣತೀ ನಡುವ ಏನಾದರೂ ಅಂಕಡೊಂಕ ಒಂದಿತ್ತೇನು ಹಾಂಗಾದರ?”

“ಎಲ್ಲೀ ಅಂಕಡೊಂಕರೀ ರಾಯರಽ! ನಿಮಗ ಅವ್ವನವರಿಗೆ ನಡನ ಅಂಕಡೊಂಕ ಐತೆಂದರ ಯಾರಾದರೂ ಒಪ್ಪ್ಯಾರೇನ್ರಿ! ಕಾಶೀ ಹಂತಾ ಹೇಣತಿನ್ನ ಕಳಕೊಂಡಮ್ಯಾಲ, ನನಗಿನ್ನ ಬ್ಯಾರೇ ಹೇಣತಿಯಾತಕ? ನಮ್ಮ ಪರಪಂಚೇ ಯಾತಕ?..ಅಂತ ಶಿವಲಿಂಗ ದಿನಾಗಲೂ ಕಣ್ಣೀರ ಕಾಲ್ವೀ ಹರಸತಿರತಾನ....”

“ಹಾಂಗಾದರ ಭಾಂವೀ ಪಾಲಾಗಲಿಕ್ಕೇನಾಗಿತ್ತು ನಿನ್ನ ಸೊಸಿಗೆ? ಕಾಲುಗೀಲು ಜಾರಿ ಬಿದ್ದಳೇನು?”

“ಆಕೀ ಕಾಲೇನೂ ಜಾರಲಿಲ್ಲ ರಾಯರಽ! ನಮ್ಮನ್ನ ಕಾಡೂ ದೈವ ನಮ್ಮ ಬಾಳೇದ ಕಾಲನ್ನಽ ಜಾರಿಸಿ ಬಿಟ್ಟಿತರಿ!”

ಮಲ್ಲಮ್ಮನ ಒಂದೊಂದು ನುಡಿಯೂ ನನ್ನ ಆತುರದ ಕಾರಂಜಿಯ ಬಾಯ ಬೆಣೆಯನ್ನು ತೆಗೆಯಲು ತೊಡಗಿತು. ನಾನಂದು ಮಲ್ಲಮ್ಮನೊಡನೆ ಹೆಚ್ಚಾಗಿ ಮಾತನಾಡಲು ತೊಡಗಿದುದು, ಅವಳ ಭಾಗ್ಯವೋ ನನ್ನ ಭಾಗ್ಯವೋ ಕಾಣೆ; ಮತ್ತೆ ಕೇಳಿದೆ:

"ಅಂದರ.. ನಿನ್ನ ಸೊಸೀಗೆ ಏನಾಗಿತ್ತವ್ವಾ?

"ಅದೆಲ್ಲಾ ಪಾಂಡೋರ ವನವಾಸದ ಕತೀ: ಅದನ್ನ ಕೇಳಿ ಇಲ್ಲದ ಕಿಚ್ಚಾ ನೀವ್ಯಾಕ್ರೆಪ್ಪಾ ಹೊಟ್ಯಾಗ ತುಂಬಿಕೊಳ್ಳೂದು?"

ನನಗಾಗ ಮಲ್ಲಮ್ಮನ ಸ್ಥಳದಲ್ಲಿ ಇನ್ನಾವುದೊ ಮುದುಕಿಯ ಕರುಣಾಮೂರ್ತಿಯೊಂದು ಹೊಳೆದುಹೋಯಿತು. ಬಹುಶಃ ಅದು ಮಲ್ಲಮ್ಮನೆಂದ ಪಾಂಡವರ ಕತೆಯೊಳಗಿನ ಕುಂತಿಯ ಮೂರ್ತಿಯಿದ್ದರೂ ಇರಬಹುದು. ಅಡಿಯಾಡುತ್ತಿದ್ದ ನಾನು, ಕುರ್ಚಿಯೊಂದನ್ನು ಎಳೆದು ಕೊಂಡು ಬಂದು, ಮಲ್ಲಮ್ಮನಿಗೆದುರಾಗಿ ಇರಿಸಿದೆ; ಅದರ ಮೇಲೆ ಕುಳಿತು ಕೊಂಡು ಮಾತಿಗಾರಂಭಿಸಿದೆ :

"ಮಲ್ಲಮ್ಮಾ! ಅದ್ಯಾಕೋ ಏನೋ, ನಿಂದೆಲ್ಲಾ ಹಿಂದಿನ ಕತೀ ಕೇಳಬೇಕೂ ಅಂತ ಮನದ ಆತುರ. ಅದನ್ನ ನೀ ನನಗ ಹೇಳತೀಯಾ?"

"ನನ್ನ ಕತೀ ತಗೊಂಡು ಏನ ಮಾಡತೀರಿ ರಾಯರs! ಒಂದು ದೇವರ ಕತೀ ಅಲ್ಲಾ, ದಿಂಡರ ಕತೀ ಅಲ್ಲಾ! ಇಷ್ಟ ಮಾತ್ರ ಖರೇವು. ಯಾರಾದರೂ ಒಂದೀಟು ಮನಸುಗೊಟ್ಟು ಕೇಳವರು ಸಿಕ್ಕಾಗ, ನಮ್ಮ ಕೇಡಿನ ಬಾಳೇದ ಉರೀನೆಲ್ಲಾ ತೋಡಿಕೊಂಡರ, ಏನೋ..ಹೊಟ್ಯಾಗ ಗೊಂದೀಟು ಹಗರ ಆದ್ಹಾಂಗ ಆಗತೈತಿ. ನಮ್ಮ ಕಾಶಿ-ಶಿವಲಿಂಗರ ಸಂಸಾರ ಅಂದರ ನೋಡ್ರಿ; ಅದಕ್ಕ ಈ ಪಾಪೀದು ನಂದs ಕಣ್ಣ ಹತ್ತಿರ ಬೇಕು. ಗಂಡಾಹೇಣತೀ ಪ್ರೀತಿ ಅಂದರ ಇವರದs ಅಂತ ಬಟ್ಟಮಾಡಿ ತೋರಸೂ ಹಾಂಗ ಇದ್ರು ಇಬ್ಬರೂ! ಒಂದs ಮಾತ ಹೇಳತೀನಿ ನೋಡ್ರಿ, ಅವರು ಒಬ್ಬರನೊಬ್ಬರು ಬಿಟ್ಟು ಉಂಡ ದಿನಾ ಅಂದರ ನನಗೇನೂ ಗೊತ್ತಿಲ್ಲ. ಶಿವಲಿಂಗ ಹೊಲಕ್ಕ ಹೋಗಿರಬೇಕಲಾ; ಎಂದಾ ದರೂ ಬರಲಿಕ್ಕೆ ತಡಾಗಿಡಾ ಆದರ 'ನೀ ಉಂಡಬಿಡs ಏಟೊತ್ತು ಹಾದೀ ನೋಡೂದು!' ಅಂತ ಬೇಕಾದಷ್ಟು ಚಾಲವರದು ಹೇಳತಿದ್ದೆ; ಆದರ ಒಂದs ದಿನಾ ನಮ್ಮ ಕಾಶಿ ಗಂಡನ್ನ ಬಿಟ್ಟು ಉಂಡಾಳೇನು? ಮತ್ತ ಶಿವಲಿಂಗಾರೆ ಏನು! ಊಟದ ಯಾಳೇದಾಗ ಕಾಶಿ ಎಲ್ಲ್ಯಾದರೂ

ಹೊರಗ ಗಿರಗ ಹೋಗಿದ್ದರ ಆಕಿ ಬರೂತನಕಾ ಬಡಿಸಿದ ಎಡೀಗೆ ಕೈ ಹಚ್ಚತಿದ್ದಿಲ್ಲ. ಒಮ್ಮೊಮ್ಮೆ ನನಗs ಸಿಟ್ಟ ಬರತಿತ್ತು.

'ನುಮ್ಮನs ಉಂಡೇಳೋ ಮಳಾ! ಹಿಂದ ಎಂದಾರs ಹೇಣತಿನ್ನ ಕಂಡಿದ್ಯೋ ಇಲ್ಲೋ! ಆದೊಂದು ಹೇಳಿಕೇಳಿ ಹೆಣ್ಣಂಗಸು; ಅದು ಮಾಡತೈತೀ ಅಂತ ನೀನೂ ಹಾಂಗs ಮಾಡೂದೇನು?' ಅಂತ ಬೈತಿದ್ದೆ. ನನ್ನ ಬೈಗಳಾ ಕೇಳವರ್‍ಯಾರು? ಇಬ್ಬರೂ ಎದುರುಬದರಾಗಿ ಕೂತು ಉಂಡರsನs ಇಬ್ಬರ ಜೀವಕ್ಕೂ ಸಮಾಧಾನ. ನಾ ಏನೋ ಒಮ್ಮೊಮ್ಮೆ ಸಿಟ್ಟಿಗೆದ್ದು ಬೈತಿದ್ದೆನಲಾ! ಆದರ ನನಗೂ ಒಳಗೊಳಗs ಅನಸತಿತ್ತು. ಇಬ್ಬರೂ ಕೂಡೇ ಉಣಬೇಕೂ ಅಂತ; ಅವರು ತಮ್ಮತಮ್ಮೊಳಗ ಆಡತಿರೋ ಹುಡುಗಾಟಾನೆಲ್ಲಾ ನೋಡಬೇಕೂ ಅಂತ.

ಮತ್ತ ನಮ್ಮ ಕಾಶೀ ಚೆಲುವಿಕೀ ಮಾತು ಏನ ಹೇಳ್ಲೀಯಪ್ಪಾ! ಸಾವಿರ ಮಂದಿ ಹೆಣಮಕ್ಕಳ ನಡಬಾದಾಗ ಕುಂತಿದ್ದರ ಎದ್ದ ಕಾಣುವಂತಾ ಗೌರಿ ನನ್ನ ಸೊಸೀ! ಜೀನಗಾರ ತಿದ್ದಿ ತೀಡಿ ಮಾಡಿದ ಬಣ್ಣದ ಗೊಂಬಿ ಕೂಡಾ ನಮ್ಮ ಕಾಶೀ ಜೋಡಿಗೆ ನಿಲ್ಲಾಕಿಲ್ಲ. ಮೈಬಣ್ಣಾ ನೋಡಿದರ ಅಂತೂ ಬೆಂಕ್ಯಾಗ್ಹಾಕಿ ತಗದ ಬಂಗಾರ ತಗಡು ಬ್ಯಾರೆ ಅಲ್ಲಾ, ಆಕೀ ಮೈ ಬ್ಯಾರೆ ಅಲ್ಲಾ. ಹಬ್ಬಾ ಹುಣಿವೀ ದಿನ ಅಂತೂ ಹೊತ್ತು ಮುಣುಗೂತಲೆ ಅಂದರ, ಮರೀದಲೇನs ನನ್ನ ಕಾಶೀ ದೃಷ್ಟೀ ನಾ ಇಳಿವಿ ಚೆಲ್ಲತಿದ್ದೆ. ಇದ್ದದ್ದೊಂದು ಕರೀ ಚಂದ್ರಕಾಳೀ ಸೀರಿ ಉಟಗೊಂಡು, ಹಸರು ಹೂವಿನ ಕುಬಸಾ ತೊಟಗೊಂಡು, ಹಾಂಗs ಮುನ್ಯಾಗ ಸುಳದಾಡಲಾಕ ಹತ್ತಿದ ಳಂದರ, ಆಕೀ ಕನಡೀಹಳ್ಳಿನಂತಾ ಗಲ್ಲಕ್ಕ—ಓಡಿಹೋಗಿ ಮುದ್ದುಕೊಟ್ಟು ಬಿಡಲ್ಯಾ—ಅಂತ ನನ್ನ ಮನಸಿಗನಸತಿತ್ತು. ಯಪ್ಪಾ ಹೇಳತೀನ ನೋಡ್ರಿ, ನಮ್ಮ ಕಾಶೀ ಮುಗುಳನಗೀ ಮಾರಿ ಗಂಟುಬದ್ದದ್ದನ್ನ ನೋಡಿದವರು ನಮ್ಮೂರೊಳಗ ಯಾರೂ ಇಲ್ಲ.

ನಾವೇನು ಬಾಳsನು ಬೂಮಿಮಾಸೀಮಾ ಇದ್ದವರಲ್ಲ. ನಮ್ಮ ಸ್ವಂತದ್ದಂದರ ಒಂದು ಕೂರಿಗಿ ಹೊಲಾ. ಮನ್ಯಾಗ ಎರಡೆತ್ತು ಇಟುಗೊಂಡು, ನಮ್ಮದರ ಜೋಡೀನs ನಿಮ್ಮಂತಾ ಇದ್ದುಳ್ಳವರದು.

ಐದಾರು ಕೂರಿಗಿ ಹೊಲಾ ಹಿಡದು. ಇದ್ದದ್ದರೊಳಗಽ ನನ್ನ ಮಗಾ ಸಂತೋಸದಿಂದಽ ಬಾಳೇ ಮಾಡಿಕೊಂಡಿದ್ದ. ಸುಟ್ಟ ಮಾರೀ ಶಿವಗ ಅದನ್ನ ನೋಡೂದಾಗಲಿಲ್ಲ ಯಪ್ಪಾ! ನಮ್ಮ ಸಂಸಾರದ ಸಡಗರೆಲ್ಲಾ ಮಣ್ಣುಗೂಡಿ ಹೋತು...." ಉಕ್ಕಿಬರುತ್ತಿರುವ ಅಳುವನ್ನು ಹತ್ತಿಕ್ಕಿಕೊಂಡು ಮಲ್ಲಮ್ಮ ಮಾತನ್ನು ಮುಂದುವರಿಸಿದಳು. ನಾನು ಆಕೆಯ ಮಾತುಗಳನ್ನು ಕೇಳಲಿಕ್ಕೆಂದು ಮನವನ್ನೇ ಮಾರುಗೊಟ್ಟು ಕುಳಿತಿದ್ದೆ.

"ನಮ್ಮ ಸ್ವಂತದ ಹೊಲದ ನೆರಿಹೊಲಾನಽ ನಮ್ಮೂರ ಗೌಡರ ಅಳಿಯ ರುದ್ರಪ್ಪಂದು. ಊರಾಗಿನ ಮಂದೆಲ್ಲಾ ಒಳಗಿಂದೊಳಗಽ 'ರುದ್ರಪ್ಪ ಹಂತಾವಾ, ರುದ್ರಪ್ಪ ಹಿಂತಾವಾ' ಅಂತ ಮಾತನಾಡತಿರೂದನ್ನ ನಮ್ಮ ಕಿವೀ ಕೇಳತಿದ್ದೂ. ಆದರ ದೊಡ್ಡವರನಿಸಿಕೊಳ್ಳುವವರು ಹ್ಯಾಂಗ ಮಾಡಿದರೂ, ನಮ್ಮಂತಾ ಬಡಮಂದಿ ಬಾಯಿಮುಚ್ಚಿಕೊಂಡಿರೂದಽ ಅಲ್ರಿ!

ಎಮ್ಮಿ ಕಾಯೂದಕ, ಮೇವು ಮಿಡಚೀ ಮಾಡೂದಕ, ಹೊಲದ ಬೆಳೀ ನೋಡೂದಕ-ಅಂತ ನಮ್ಮ ಕಾಶೀನೂ ಹೊಲಕ್ಕ ಹೋಗಿಬರತಿದ್ದು. ನಿಮ್ಮ ಹಾರೂರ ಹೆಣಮಕ್ಕಳ್ಯಾಂಗ ನಮ್ಮ ಮಂದಿ ಕುಂತಲ್ಲೇ ಕುಂತರ ಬಾಳೇ ಹ್ಯಾಂಗ ನಾಗೀತರಿ! ನಮ್ಮೂ ಒಂದೊಂದು ಹೊಲಾ ಅಂದರ ಒಂದೊಂದು ದಿಕ್ಕಿಗಿದ್ದೂ. ಹೊಲದಾಗ ಕಾವಲಾ ಕಟ್ಟು ಇತ್ತಂದರ ನಾವೆಲ್ಲಾರೂ ಒಬ್ಬೊಬ್ಬರು ಒಂದೊಂದು ಕಡೆ ಹೋಗತಿದ್ದಿವಿ. ಸನೇದ ಹೊಲಾ ಅಂತ ನಮ್ಮ ಸ್ವಂತದ ಹೊಲಕ್ಕಽ ಕಾಶಿನ್ನ ಕಳಸತಿದ್ದಿವಿ.

ಕಾಶಿ ಮ್ಯಾಗಽ ಮ್ಯಾಗ ಹೇಳತಿದ್ದು: 'ನೀ ಹೋಗೂ ಹೊಲಕ್ಕ ನಾನಽ ಹೋಗ್ತೇನಿ. ನೀನು ಇಲ್ಲೇ ನಮ್ಮ ಹೊಲಕ್ಕ ಹೋಗಿಬಿಡು' ಅಂತ. 'ದೂರದ ಹೊಲಾ, ಮುದುಕಿ ನಾನು, ನನಗ ದಣವಾಗತೈತಂತ ಹೀಂಗ ಹೇಳತಿದ್ದಾಳು' ಅಂತ ನಾನು ತಿಳದು 'ಬ್ಯಾಡಪ್ಪಾ, ಅಽಟ ದೂರ ಒಬ್ಬಾಕೀನಽ ನೀಯೆಲ್ಲೆ ಹೋಗತೀ. ನನಗೇನ ದಾಡಿ ಆಗತೈತಿ? ನಾ ಹೋಗ್ತೇನಲಾ' ಅಂತ ಅಂದುಬಿಡತಿದ್ದೆ. ನಾ ಹೀಂಗ ಅನ್ನೂತ್ಲೇನಽ ಕಾಶೀ ಮಾರೀ ಸಣ್ಣದು ಮಾಡತಿದ್ದು. ಏನೂ ಮಾತಾಡದಽ ಹೊಲದ

ಹಾದೀ ಹಿಡೀತಿದ್ಲು. ಕಡೀಕ ಒಂದು ದಿನಾ, ನಾನು ಶಿವಲಿಂಗ ಇಬ್ಬರೂ ಕೂಡಿ ಕೂತಾಗ, ಬಾಡಿದ ಮುಕಾ ಮಾಡಿಕೊಂಡು ಕಾಶಿ ಹೇಳಿದಳು :

'ನಮ್ಮ ನೆರಿಹೊಲದ ರುದ್ರಪ್ಪ.. ಇಲ್ಲದ್ದಿಲ್ಲದ್ದು ನಗಚಾಟಕೀ ಮಾಡಾಕ ಬರತಾನ. ಆ ಹೊಲಕ್ಕ ನಾ ಇನ್ನ ಮರ್‍ಯಾ ಹೋಗೂದಿಲ್ಲ.'

ಕಾಶಿ ಆ ಹೊಲಕ್ಕ ಹೋಗೂದಕ ಒಲ್ಲೆ ಅಂತಿರೋದು, ನಾನು ಅವಳ ಮಾತು ಕೇಳದಿದ್ದಾಗ ಮುಕಾ ಸಣ್ಣಗ ಮಾಡತಿರೋದು ಇದೆಲ್ಲಾದರ ಮರ್ಮ ನನಗ ಆಗ ಹೊಳದ್ಹಾಂಗಾತು. 'ನೀ ಯಾವುದೂ ಹೊಲಕ್ಕ ಹೋಗೂದು ಬ್ಯಾಡ; ಮನ್ಯಾಗs ಇದ್ದುಬಿಡು' ಅಂತ ತಾಯಿ-ಮಗಾ ಇಬ್ಬರೂ ಹೇಳಿದಿವಿ. ಇದೆಲ್ಲಾ ಆಚೀ ವರಸದ ಸುಗ್ಗ್ಯಾಗಿನ ಮಾತು.

*    *    *

"ದಿವಸ ಹೋದಹೋದ್ಹಾಂಗೆಲ್ಲಾ ನಡದ ಸಂಗತಿಗೋಳೂ ಮನಸಿನೊಳಗಿಂದs ಮಸಳಿಸಿ ಹೋಗತಾವಲ್ರಿ! ರುದ್ರಪ್ಪನ ವಿಚಾರನೂ ನಮ್ಮ ನೆನಪಿನ್ಯಾಗಿಂದ ಅಳಿಸಿಹೋಗಿಬಿಟ್ಟಿತು. ಕಾಶಿ ತನ್ನ ಚೊಚ್ಚಿಲ ಬಸರಿನ ಬಯಕೀ ಉಬ್ಬಿನಾಗ ತಾ ಈ ಲೋಕದೊಳಗ ಇದ್ದದ್ದನ್ನ ಕೂಡಾ ಮರತುಬಿಟ್ಟಿದ್ದಾಳು!

ಹೋದ ವರಸ ಬಿಳಿಜೋಳಾ ಬಿತ್ತಿದ ಬೂಮಿ ಕಡಿಮಿ ಇದ್ದರೂ ಇದ್ದsಟ ಬೆಳೀ ಚೆಲೂ ಬಂದಿದ್ದು. ಶಿವಲಿಂಗ ಎತ್ತು ಕಟಿಗೊಂಡು ದೂರದ ದೊಡ್ಡ ಹೊಲದಾಗ ಇರತಿದ್ದ. ನನಗ ಉರಿಚಳೀ ಹತ್ತಿ, ಕಾಲಾಗ ನಡಿಯೂ ತರಣಾನs ಇಲ್ಲದ್ದರಿಂದ, ನಾ ಮನಿಮುಳಾಗ ಕೂತಿದ್ದೆ ಇಷ್ಟs..ಮನ್ಯಾಗ ಕೂತಲ್ಲೇ ಕೂತುಗೊಂಡು ಅಡಿಗೀ ಅಂಬಲೀ ಅsಟು ಮಾಡತಿದ್ದೆ. ಕಾಶಿ ಇನ್ನೂ ಕತ್ತಲಕತ್ತಲ ಇರತsನs ಎದ್ದು, ನಮ್ಮ ಸ್ವಂತದ ಹೊಲಕ್ಕ ಹಕ್ಕೀಕಾಯಲಾಕ ಹೋಗತಿದ್ಲು. ಹಕ್ಕೀ ಕಾದು, ಹಿಂಡೂ ಎಮ್ಮಿಗೆ ಒಂದು ಪೆಂಡಿ ಮೇವು ತಗೊಂಡು, ನಾಕ್ಕೈದು ತಾಸಿಗೆ ಮನೀಗೆ ಬರತಿದ್ಲು. ಒಂದೊಂದು ದಿನಾ ಮನ್ಯಾಗ ಊಟಾ ಮಾಟವರ ಮಾಡಿದ್ಲು, ಇಲ್ಲಾದರ ಇಲ್ಲ; ಹಾಂಗs ಗಂಡಗಂತ ಬುತ್ತೀ ರೊಟ್ಟೀ ಕಟಿಕೊಂಡು ಮತ್ತೊಂದು ಹೊಲಕ್ಕ ಹೋಗತಿದ್ಲು. ಪಾಪ! ಬಯಕೀ

ಸಲುವಾಗಿ ಊಟ ಸುದ್ಧಾ ನೆಟ್ಟಗ ಹೋಗತಿದ್ದಿಲ್ಲ. ಕೂಲೀ ಆಳು ಹಚ್ಚಿ ಆಕಿನ್ನ ಮನ್ಯಾಗs ಇಟ್ಟಕೋಬೇಕಂದ್ರ ಬಡತಾನದ ಸಂಸಾರ ರಾಯರ! ದಿನಾ ಬೆಳಗಾದರ ಕೂಲಿಗೆ ಜೋಳಾ ಎಲ್ಲಿಂದ ಆಳಿಯೂದು? ಎಂಟಾನೆಂಟು ದಿನಾ ಹಾಂಗs ನಡದಿತ್ತು. ಕಾಶಿ ಏನೇನೂ ಉಸ್' ಅನದs ಹುರುಪಿನಿಂದ ಹೊಲಕ್ಕ ಮನೀಗೆ ಎಡತಾಕತಿದ್ಲು. ಒಂದು ರಾತ್ರಿ ನಾವಿಬ್ಬರೂ ಮನ್ಯಾಗ ಮಲಗಿದಾಗ ಕಾಶಿ ನನಗ ಹೇಳಿದ್ಲು:

'ಅತ್ತೀ ನೋಡು, ಆ ರುದ್ರಪ್ಪ ಸುಮ್ಮಸುಮ್ಮನs ಸಲಗೀ ಮಾತು ಆಡಿಕೋತs ನನ್ನ ಹತ್ತೀಲಿ ಸುಳದಾಡತಿರತಾನ. ನನಗ ಯಾಕೋ ಆವನ ಸಲವಾಗಿ ಅಂಜಿಕಿ ಬರಲಾಕಹತ್ತ್ಯತೆವ್ವಾ! ನಾಳಿಂದs ಆ ಹೊಲಕ್ಕ ಹಕ್ಕೀ ಕಾಯಾಕ ನಾಯೇನೂ ಹೋಗಬಾರದೂ ಅಂತ ಮಾಡೀನಿ.'

ಕಾಶೀ ಮಾತು ಕೇಳಿ ನನ್ನೆದೀಗೆ ಕಲ್ಲ ಬಡದ್ಹಾಂಗ ಆತು. ಒಂದೀಟು ಹೊತ್ತು ಹಾಂಗs ಕುಂತಗೊಂಡು, ಆ ಮ್ಯಾಲ ಆಕೀಗೆ ಹೇಳಿದೆ:

'ನೋಡು, ನಾಳ್ಯಿಂದ ದಿನಾ ಹೋಗಿ ಬಾ! ನಿನ್ನ ಗಂಡಗ ಬುತ್ತೀ ರೊಟ್ಟೀ ಕೊಡಲಾಕ ಹೋಗ್ತೀಯಲಾ, ಆಗ ಹೀಂಗಿನ ಮಾತು ಹೀಂಗs ಅಂತ ಶಿವಲಿಂಗಗ ಹೇಳಿಬಿಡು. ಬೇಕಾದರ ಕೂಲೀ ಆಳು ಇಟ್ಟಾನು. ನಾಡದಿನಿಂದ ನೀ ಹೋಗs ಬ್ಯಾಡ.'

* * *

"ಮರದಿನಾ ಹರೇ ಹೊತ್ತಿಲೇ ಎದ್ದು, ಜೀವ ಒಲ್ಲದsನs ಕಾಶಿ ಹೊಲದ ಕಡೆ ಹೊಂಟಳು. ಆಕಿನ್ನ ನೋಡಿ ನನ್ನ ಮನಸ್ಸು ಹೀಂಗ ಹೀಂಗ ಆತು. ಹೋಗೂದು ಬಿಟ್ಟಬಿಡೂ ಅಂತ ಹೇಳಿಬಿಡಬೇಕು ಅನಿಸಿತು. ಆದರ ಮಾಡೂದೇನು? ನಾ ಅಂತೂ ಮುಂದಕ ಹೆಜ್ಜೀ ಇಡೂಹಾಂಗಿಲ್ಲ. ಹಕ್ಕೀ ಕಾಯಾಕ್ಹೋಗೋದು ಬಿಡೂಹಾಂಗಿಲ್ಲ. ಇದ್ದ ಮೂರ ಕಾಳನ್ನ ಹಕ್ಕಿಮುಕ್ಕಿಕೊಂಡ ಹೋದರ ಒಕ್ಕಲಿಗ್ಯಾಗೇನು ದೊರೀಬೇಕು? ಬರೇ ಕಂಕಿ! ಅಂತs, ಹೊಲಕ್ಕ ಹೋಗೂದು ಕಾಶಿಗೆ ಒಲ್ಲಾದದ್ದು ಗೊತ್ತಾದರೂ 'ಹೋಗಬ್ಯಾಡಾ' ಅಂತ ಅನ್ನೂದು ನನ್ನ ಕಡಿಂದ ಆಗಲಿಲ್ಲ ಬಡತನದ ಹೊಟ್ಟೀಕಿಚ್ಚು ಕೆಟ್ಟ ರಾಯರs

ದಿನದ ಹಾಂಗ— ನಾಕ್ಕೈದು ತಾಸಿನ ಸುಮಾರಿಗೆ— ಕಾಶಿ ಮನಿಗೆ ಬಂದ್ಲು. ತಲೀಮ್ಯಾಲಿನ ಮೇವಿನ ಪೆಂಡೀ ತೆಳಗ ಚೆಲ್ಲಿ ಒಳಗ ಬಂದ್ಲು. ಯಾಕೋ ಆಕೀ ಮಾರೀಮ್ಯಾಲಿನ ಕಳೆಸಽ ಇರಲಿಲ್ಲ; ನಿದ್ದೀ ಕಟ್ಟಿದವರ್ಹಾಂಗ ಮುಕಾ ಎಲ್ಲಾ ಬಾಡಿ ಹೋಗಿತ್ತು. ಕಣ್ಣೆರಡೂ ಒಣಕಲ ಒಣಕಲಾಗಿ, ಒಳಗ ಸಿಕ್ಕ್ಯೊಂಡ್ಹಾಂಗ ಆಗಿದ್ದೂ. ಬಂದಾಕಿ ನನ್ನ ಜೋಡೀ ಮನಸುಬಿಚ್ಚಿ ಮಾತಾಡಲಿಲ್ಲ ಕೂಡಾ. 'ಹೀಂಗ್ಯಾಕಽ ಕಾಶೀ, ಹೀಂಗ್ಯಾಕಽ ಕಾಶೀ' ಅಂತ ನಾ ದುಂಬಾಲುಬಿದ್ದು ಕೇಳಿದರ, 'ಹೀಂಗ್ಯಾಕಂದರ ಹ್ಯಾಂಗಽ ಅತ್ತೀ?' ಅಂತ ಆಕಿ, ಇಲ್ಲದ ನಗೀ ಎಳದುತಂದು ನನಗಽ ತಿರಿಗಿ ಕೇಳಿದ್ಲು. 'ಊಟಾ ಮಾಡೇ ರೊಟ್ಟೀ ಒಯ್ದುಬಿಡು, ಹಸದಿದ್ದೀಯಾದೀತು' ಅಂತ ನಾ ಅಂದರ 'ಅಲ್ಲೇ ಹೋಗಿ ಉಣತೀನೇಳು ನಾ' ಅಂದುಬಿಟ್ಲು.

ಬುತ್ತೀರೊಟ್ಟೀ ಗಂಟು ಕಟ್ಟತಿರೂವಾಗ, ಆದರ ಕಡೆ ಕಾಶೀ ಮನಸಽ ಇದ್ಹಾಂಗ ನನಗ ಕಾಣಲಿಲ್ಲ. ಒಳಗಿಂದೊಳಗ ಏನು ಎಣಿಕೀ ಹಾಕತಿದ್ಲೋ! ರೊಟ್ಟೀ ಜತೀಗೆ ತಿನಲಾಕ ಮಾಡಿಟ್ಟ ಪದಾರ್ತಾನಽ ಗಂಟಿನ್ಯಾಗ ಕಟ್ಟಿದ್ದಿಲ್ಲ. ನಾ ಯಾತಕ್ಕೋ ಹೋಗಿ ನೋಡತೀನಽ! ಗಡಿಗ್ಯಾಗಿನ ಪಲ್ಲೇ ಎಲ್ಲಾ ಇದ್ದಕಿದ್ಹಾಂಗಽ ಇತ್ತು.

'ಅಲ್ಲಽ ಕಾಶೀ, ರೊಟ್ಟ್ಯಾಗ ಪದಾರ್ತ ಬೇಕಾಗಿಲ್ಲೇನು? ಇಂದ ಹೀಂಗ್ಯಾಕ ಅರವು ಹಾರಿದವರ ಹಾಂಗ ಮಾಡಲಾಕ ಹತ್ತೀದಿ?' ಅಂತ ನಾ ಕೇಳಿದೆ. ಆಕಿ ಒಂದೂ ಮಾತಾಡದಽ ಗಂಟು ಬಿಚ್ಚಿ, ಪಲ್ಲೇ ಹಾಕಿ ಕಟಿಗೊಂಡ್ಲು. ಹಾಂಗಽ ಹೊಲದ ಹಾದೀ ಹಿಡಿದುಬಿಟ್ಲು. ಹೋಗೂ ಮುಂದ ನಾ ಕಾಶಿಗೆ ಕೂಗಿ ಹೇಳಿದೆ:

'ನಾಳೆ ನಾ ಹೊಲಕ್ಕ ಹೋಗೂದಿಲ್ಲಂತ ಶಿವಲಿಂಗಗ ಹೇಳಿಬಿಡಽ!' ನನ್ನ ಮಾತು ಆಕೀ ಕಿವೀ ಒಳಗ ಸೇರಿತೋ ಇಲ್ಲೋ ಯಾರಿಗೆ ಗೊತ್ತು; ನನ್ನ ಕಡೆ ತಿರಿಗಿ ನೋಡಲಿಲ್ಲ ಕೂಡಾ. ನಾ ಹಾಂಗಽ ಉಳದಿರೂ ಒಂದೆರಡು ಮನೀ ಕೆಲಸಾ ತೀರಿಸಿಕೊಂಡು, ಹೋಗಿ ಹಾಸಿಗೀ ಮ್ಯಾಲ ಬಿದ್ದುಕೊಂಡೆ.

* * *

ಹೊತ್ತು ಮುಣುಗೂದಕ್ಕ ಬಂದಿತ್ತು. ನಾ ಕಾಶಿ ಬರೂ ದಾರೀ ಕಡೇನs ನೋಡತs ಕೂತುಕೊಂಡಿದ್ದೆ. ಒಮ್ಮಿಗಿಲೇ ಶಿವಲಿಂಗ ಮನೀ ಒಳಗ ಬಂದ. 'ಇಂವ ಯಾಕ ಈಗ ಬಂದಾ!' ಅಂತ ಮನಸು ಏಣಿಕೀ ಹಾಕತಿರೂದರೊಳಗs ಸಿಟ್ಟಿನ ದನಿಯಿಂದ ಶಿವಲಿಂಗ ಮಾತಾಡಿದ:

'ಇಂದ ನನಗ ಊಟಗೀಟ ಏನೂ ಬ್ಯಾಡೇನು? ಇಂದ ಶಿವರಾತ್ರೀ ಅಂತ ತಿಳಕೊಂಡೀರೋ ಏನು?'

ಗಾಬರ್‍ಯಾಗಿ ನಾ ಕೇಳಿದೆ. 'ಅದ್ಯಾಕೋ ಯಪ್ಪಾ! ಕಾಶಿ ಬುತ್ತೀರೊಟ್ಟೀ ತೊಗೊಂಡು ಆಗs ಹೋಗ್ಯಾಳಲಾ! ಹೊಲಕ್ಕ ಬಂದಿಲ್ಲೇನು ಆಕಿ?'

ನನಗಿಂತಾ ಹೆಚ್ಚು ಗಾಬರ್‍ಯಾಗಿ ಶಿವಲಿಂಗ ಕೇಳಿದ:

'ಆಗs ಹೋಗ್ಯಾಳು? ಹೊಲಕ್ಕ ಬಂದs ಇಲ್ಲಲಾ! ನಾ ಹಾದೀ ನೋಡಿ ನೋಡಿ, ಹಸದ ಸತ್ತು ಈಗ ಓಡಿಬಂದೀನಿ!'

ನನ್ನ ಎದೀಗೆ ಸಿಡ್ಲು ಒಡದ್ಹಾಂಗ ಆತು; ಏನು ಮಾತಾಡ ಬೇಕಂಬೂದs ತಿಳೀದ್ಹಾಂಗಾತು. ಒಮ್ಮಿಗೀಲೆ ಅಳುವs ಬಂದುಬಿಟ್ಟಿತು. ಅಳತಾ ಅಳತಾನs ಕೇಳಿದೆ. 'ದಿನಾ ಹೋಗೂ ಯಾಳೇಕs ಹೋಗ್ಯಾಳೋ ಕಾಶಿ ಇಲ್ಲಿಂದ- ಶಿವಲಿಂಗಪ್ಪಾ!'

'ಹಂ, ದಿನಾ ಹೋಗೂ ಯಾಳೇಕs ಹೋದರ, ಹೋಗ್ಯಾಳಾದರೂ ಎಲ್ಲಿ?' ಅಂತ ಶಿವಲಿಂಗ ಗರಕ್ಕನs ತಿರಿಗಿದವನs ಹೊರಗ ಹೊಂಟಾಂವ ಹೋಗೇ ಬಿಟ್ಟ. ನಾನು ಎದೀಯೊಳಗ ನುಚ್ಚುಕುದಿಸಿಗೋತs 'ಈಗ ಬಂದಾರು, ಆಗಬಂದಾರು' ಅಂತ ದಾರೀ ನೋಡತs ಹಾಂಗs ಕುಂತು ಬಿಟ್ಟಿದ್ದೆ. ಮನ್ಯಾಗ ದೀಪಾ ಹ್ಯಾಂಗ—ಯಾವಾಗ—ಹಚ್ಚಿದಿನೋ ನಂದು ನನಗs ಎಚ್ಚರಿಲ್ಲ. ಊರಮಂದೀದೆಲ್ಲಾ ರಾತ್ರೀ ಊಟಾತು, ಉಡಿಗ್ಯಾತು, ಕೆಲಸಾತು, ಬಗಸ್ಯಾತು, ಆದರೇನು! ಮಗಾನೂ ಇಲ್ಲ; ಸೊಸೀನೂ ಇಲ್ಲ! ಮಂದೆಲ್ಲಾ ಮಲಕೊಂಡು ನಿದ್ದೀ ಮಾಡಾಕ ಹತ್ತಿತು; ಯಾವ ಸುದ್ದೀನೂ ಇಲ್ಲ! ನಾಯಿ, ಬೆಕ್ಕು, ಇಲಿ ಸರಾಸರಾ ಸಪ್ಪಳಾ ಮಾಡಿದರೂನೂ, ಯಾರಾದರೂ ಬಂದರೇನೋ- ಅಂಬೂ ಆಸೆಗಣ್ಣಿಂದ ತಲಬಾಗಲ

ಕಡೆ ನೋಡತಿದ್ದೆ. ರಾತ್ರಿ ಸರವೊತ್ತಾದರೂ ಯಾರದೂ ಸುಳುವು ಇಲ್ಲ. ನನಗ ತೀರಾ ತಾಳಿಕೊಳ್ಳಿಕ್ಕೆ ಆಗದ್ಹಾಂಗ ಆತೂ ಅಂದರ ಬಿಕ್ಕಿ ಬಿಕ್ಕಿ ಅಳಾಕಹತ್ತತಿದ್ದೆ; ಅತ್ತು ಅತ್ತು ಬ್ಯಾಸರ ಬಂತಂದರ ದಂಗುಬಡದವರ್ಹಾಂಗ ಸುಮ್ಮನs ಕೂತುಬಿಡತಿದ್ದೆ. ಹಿಂದಕ್ಕ ನನ್ನ ಗಂಡ ತೀರಿಕೊಂಡ ದಿನಾ ರಾತ್ರೀನೂ ನನಗ ಹೀಂಗs ಆಗಿತ್ತು.

ಸರವೊತ್ತಿನವ್ಯಾಗ ಮೂರು ತಾಸು ರಾತ್ರಿ ಆಗಿದ್ದೀತು. ಶಿವಲಿಂಗನ ಕೈ ಹಿಡಕೊಂಡು, ನಾಕೈದು ಮಂದಿ ನೆರಿಹೊರೀ ಹೊಲದವರು ಮನಿಗೆ ಕರಕೊಂಡು ಬಂದರು. ಶಿವಲಿಂಗ ನನ್ನ ನೋಡಿದವನs 'ಯವ್ವಾ ನನ್ನ ಕಾಶಿನ್ನ ಎಲ್ಲಿಗೆ ಕಳಿಸಿಕೊಟ್ಟೀ..' ಅಂತ ಕೂಗಿ ಕೂಗಿ ಅಳಾಕಹತ್ತಿದ. ನನಗ ಏನೂ ತಿಳೀದ್ಹಾಂಗಾತು. ಶಿವಲಿಂಗನ ಜೋಡೀ ಬಂದಿದ್ದವರನ್ನ ಕಾಶೀ ನಲುವಾಗಿ ಕೇಳಿದೆ. 'ಊರು, ಕೇರಿ, ಬೂಮಿ, ಸೀಮಿ ಒಂದೂ ಉಳಸಲಿಲ್ಲ; ಎಲ್ಲಾನೂ ತಿರಿವಿ ಹಾಕಿದಿವಿ; ಎಲ್ಲೆಲ್ಲ್ಯೂ ಕಾಶವ್ವನ ಪತ್ತೇ ಹತ್ತಲಿಲ್ಲ' ಅಂತ ಹೇಳಿದರು. ನನ್ನ ಎದಿಯೊಳಗ ತಣ್ಣೀರು ಹನಿಸಿದ್ಹಾಂಗ ಆತು. ಕುಂತ ನೆಲಾ ಗಿಮಿಗಿಮಿ ತಿರಗಲಾಕಹತ್ತಿತು. ಕಣ್ಣಿಗೆ ಕಾವಳ ಕವೀತು.

ಮುಂದ ನನಗ ಎಚ್ಚರಾದಾಗ ನೋಡತೀನs ಬಂದವರೆಲ್ಲಾರೂ ನನ್ನ ಕೈಕಾಲು ತಿಕ್ಕತs ಕೂತುಕೊಂಡಿದ್ದರು. ಶಿವಲಿಂಗ ನನ್ನ ತಲೀಮ್ಯಾಲ ಕೈಯಾಡಸತs ಕೂತಿದ್ದ.

ಮರದಿನಾ ಚುಮುಚುಮು ಬೆಳಗಾಗೂದರೊಳಗs ಶಿವಲಿಂಗನ ಜೋಡೀ ಬಂದಿದ್ದವರೆಲ್ಲಾರೂ ಕಾಶಿನ್ನ ಹುಡುಕಲಿಕ್ಕೆ ಮತ್ತ ಹೊಂಟರು. ಶಿವಲಿಂಗ ತಾನೂ ಬರತೀನಂದ. 'ನೀ ಇಲ್ಲೇ ಮುದಿಕೀ ಹತ್ತೀಲೇನs ಇರು!' ಅಂತ ಜುಲುಮಿಮಾಡಿ ಹೇಳಿ, ಎಲ್ಲಾರೂ ಹೊಂಟುಹೋದರು.

ಹಳ್ಳೀ ಊರಾಗ ಸುದ್ದಿ ಹಬ್ಬೂದು ಏನ ತಡಾ ರಾಯರs! ಎಲ್ಲಾ ಮಂದಿ ಬರೂದು, ಆದ ಸಂಗತೀನೆಲ್ಲಾ ಕೇಳೂದು, ನಾಕು ಮರುಕದ ಮಾತಾಡಿ ನಡದಬಿಡೂದು. ಬಂದವರೆಲ್ಲಾರಿಗೂ ಬ್ಯಾಸರಿಲ್ಲದs ನಾ ಎಲ್ಲಾ ಹೇಳತಿದ್ದೆ; ಶಿವಲಿಂಗ ಯಾರ ಕೂಡಾನೂ ಮಾತಾಡದs ಹುಚ್ಚು ಹಿಡಿದವರ್ಹಾಂಗ ಕೂತುಕೊಂಡಿದ

ಹೊತ್ತೇರಿ ತಾಸು ಆಗಿಹೋಗಿತ್ತು. ಒಮ್ಮಿಂದೊಮ್ಮಿಗೇಲೇ ಓಣ್ಯಾಗ ನಿಂತು ಯಾರೋ ಕೂಗಿ ಮಾತಾಡಿದ ದನಿ ಕೇಳಿಸಿತು:

‘ ಪಾಪ ! ಶಿವಲಿಂಗನ ಹೇಣತಿ ಕಾಶವ್ವ . . ಹೂವಿನ ತ್ವಾಟದ ಬಾಂವ್ಯಾಗ ಬಿದ್ದಾಳ ನೋಡಪಾ ! ’

ಕೂತಿದ್ದ ಶಿವಲಿಂಗನ ಕಿವಿಗೆ ಈ ಮಾತು ಬೀಳೂದs ತಡಾ, ‘ ಏನು . . ? ಕಾಶಿ . . ! ಬಾಂವಿ . . ! ’ ಅಂತ ಅನ್ನತಿರುವಾಗನs ಬಿಟ್ಟ ಬಾಣಾ ಹೋದ್ಯಾಂಗ ಓಡಿಬಿಟ್ಟ. ಇದ್ದ ಜನಾ ಎಲ್ಲಾರೂ ಅವನ ಹಿಂದಿಂದs ಹೋಗಿಬಿಟ್ಟರು. ನನಗಾಗ ಎಲ್ಲೀ ಕಸುವು ಬಂತೋ ಏನೋ ! ಹಾಂಗs ಬಿದ್ದಕೋತs ಎದ್ದಕೋತs ಹೂವಿನ ತ್ವಾಟದ ಬಾಂವೀ ಕಡೆ ನಡದೆ. ಹಾದ್ಯಾಗ ಇದರಿಗೆ ಯಾರ್ಯಾರು ಸಿಕ್ಕಿದರಂಬೂ ಎಚ್ಚರ ಕೂಡಾ ನನಗಿರಲಿಲ್ಲ.

ಬಾಂವೀ ಹತ್ತೀಲಿ ಬಂದು ನೋಡತೀನs ! ತೊಯ್ದು ನೀರು ಬಸೀತಿರೋ ಹೆಣಾ ತಗದು ದಂಡೀಮ್ಯಾಲ ಹಾಕಿದ್ದರು. ಶಿವಲಿಂಗ ಹೆಣದ ತಲೀ ತನ್ನ ತೊಡೀಮ್ಯಾಗ ಇಟಗೊಂಡು ‘ ನನ್ನ ಕಾಶಿ ! ನನ್ನ ಕಾಶಿ ! ’ ಅಂತ ಜಪಾ ಮಾಡತs ಕೂತುಕೊಂಡಿದ್ದ. ಆಗ ನಾನೂ ಹೋಗಿ ಬೇಕಾದಷ್ಟು ಹೊಡಕೊಂಡೆ, ಬಡಕೊಂಡೆ, ಅತ್ತೆ, ಕರೆದೆ, ಎಲ್ಲಾ ಮಾಡಿದೆ; ಆದರ ನನ್ನ ಹೋದ ಕಾಶೀ ಜೀವ, ಈ ಪಾಪಿಗೆ ಏನ ಮಾಡಿದರ ಸಿಗೂ ಹಾಂಗಿತ್ತು ? ನೀರಾಗ ಬಿದ್ದು ನೆನದು ಮುದ್ದಿಮುದ್ದಿ ಆಗಿರೂ ನನ್ನ ಕಾಶೀ ಮುಕದ ಕಡೆ ನೋಡಬೇಕಂದರ ನನ್ನ ಕಡಿಂದಾಗವೊಲ್ಲದು. ಉಬ್ಬಿರೂ ಕಣ್ಣು, ತೆರದ ಬಾಯಿ, ಹರವಿ ಬಿದ್ದಿರೂ ಕೂದಲಾ ಇವೆಲ್ಲಾ ನನ್ನ ಬಣ್ಣದ ಗೌರೀಯಂತಾ ಕಾಶಿನ್ನ . . ಬೇತಾಳದ್ಹಾಂಗ ಮಾಡಿ ಬಿಟ್ಟಿದ್ದೂ.

ರೀತೀ ಪ್ರಕಾರ ಪಂಚನಾಮೇ ಒಂದು ಆಗಬೇಕಲಾ ರಾಯರ ! ಗೌಡರು ಬಂದರು, ಶಾನಭೋಗರು ಬಂದರು, ಪಂಚರು ಬಂದರು; ವಾಲೀಕಾರರಂತೂ ಮೊದಲs ಬಂದಿದ್ದರು. ಪಂಚನಾಮೇಕಂತ ಬಂದವರೆಲ್ಲಾ ನಿಬ್ಬಣಕ್ಕ ಬಂದವರ್ಹಾಂಗ ನಗತಾ ಕೆಲೀತಾ ಹಾಸಿದ ಗುಡಾರದ ಮ್ಯಾಲ ಕೂತುಗೊಂಡಿದ್ದರು. ಅವರ ಎಲೀಅಡಿಕೇನು ! ತಂಬಾಕೇನು !

ಹುಟ್ಟಾಬೀಡೇನು ; ಎಲ್ಲಾನೂ ನಡದಿತ್ತು ! ಯಾರ ಹೊಟ್ಟಿ ಕಡದರ ಯಾರು ಅಜವಾನ ಮುಕ್ಕವರು ರಾಯರ ! ಗೌಡರು– ಇವ್ರ ರುದ್ರಪ್ಪನ ಮಾವ– ಬೀಡೀ ನೋಡತ ನೋಡತನ ಈರಪ್ಪಸೆಟ್ಟರ ಕಡೆ ನೋಡಿ ಹೇಳಿದರು:

‘ ಈ ಅತ್ತೀ ಮನೀ ನೊಸೆಂದರ ಹಣಬಾರಾನ ಇದು, ಸುಮ್ಮ ಸುಮ್ಮನ ತಮ್ಮ ಜೀವಾ ಕಳಕೋತಾವು. ಮತ್ತ ಮನ್ಯಾವರದಾರೇ ಮೋಜಾ ಏನ ಹೇಳ್ಲಿ! ಕಾಡೂ ಮುಂದ ಕಾಡತಾರ, ಸತ್ತಮ್ಯಾಲ ಸುಮು-ಸುಮ್ಮನ ಬಡಕೋಳಾಕ ಹತ್ತ್ಯಾರ. ಲೋಕದ್ದೆಲ್ಲಾ ಮಜಾನ ಐತಿ! ’

ಸೆಟ್ಟರು ಏನೂ ಮಾತಾಡದ ‘ಆ–ಹಾ–! ’ ಅಂತ ಬರೇ ನಕ್ಕುಬಿಟ್ಟರು. ಗೌಡರ ಮಾತು ಕೇಳಿ, ನನ್ನ ಹೊಟ್ಟ್ಯಾಗ ಖಾರಾ ಕಲಸಿದ್ಹಾಂಗಾತು. ಶಾನಭೋಗರು ಪಂಚನಾಮೇದ ದಸಿಂದ ಅವಸರಾ ಮಾಡಲಾಕ ಹತ್ತಿದರು. ಅಂದ ಅವರ ಮನ್ಯಾಗೇನೋ ಹಬ್ಬ ಇತ್ತಂತ, ಅದಕ್ಕ ಲಗೂನ ಮನಿಗೆ ಹೋಗಬೇಕಾಗಿತ್ತಂತ.

ಈರಪ್ಪಸೆಟ್ಟರು, ಯೆಂಕಪ್ಪರಡ್ಡಿ ಇಬ್ಬರೂ ಕೂಡಿ, ನಮ್ಮ ಶಿವಲಿಂಗನ್ನ ಒಂದು ಕಡೆ ಕರಕೊಂಡು ಹೋದರು. ಹೋದವರು ತಾಸಿನ ತಾಸು ಬರಲೇ ಇಲ್ಲ. ಆ ಮ್ಯಾಲ ಗೌಡರು ಶಾನಭೋಗರು ಕೂಡಿ ಅವರಿದ್ದಲ್ಲಿಗೇನ ಹೋದರು. ಮತ್ತೊಂದು ತಾಸು ಏನೇನೋ ಅಪದಾಟ ಅಲ್ಲೆ ನಡೀತು. ಅಲ್ಲಿಂದ ಎಲ್ಲಾರೂ ಕೂಡಿ ಬಂದರು; ಪಂಚನಾಮೇದ ಕೆಲಸಾ ಮುಗಿಸಿದರು. ‘ ಹೊಟ್ಟಿಕಡತ ಎದ್ದು, ನೋವು ತಾಳಲಾರದ ಬಾಂವ್ಯಾಗ ಬಿದ್ದಳು ’ ಅಂತ ಬರದು ಮ್ಯಾಲಕ ತಿಳಿಸಿದರು. ನಾವು ತಾಯಿಾ ಮಗಾ ಇಬ್ಬರೂ ಕಾಶೀ ರಿಣಾ ಹರಿಸಿಕೊಂಡು ಮನಿಗೆ ಬರಬೇಕಾದರ ಹಗಲು ಇಳಿಹೊತ್ತಿಗೆ ಬಂದಿತ್ತು.

* * *

ಮುಂದ ಐದಾರು ದಿನಾ ಹೋದ ಮ್ಯಾಲ ಒಂದು ದಿನಾ, ನಾನು ಶಿವಲಿಂಗನ್ನ ಕೇಳಿದೆ. ‘ ಆ ದಿನಾ ಈರಪ್ಪಸೆಟ್ಟಿ, ಯೆಂಕಪ್ಪರಡ್ಡಿ ನಿನ್ನ ಯಾತಕ್ಕ ಕರಕೊಂಡು ಹೋಗಿದ್ರು ? ’

‘ ಅದನ್ನೆಲ್ಲಾ ತೊಗೊಂಡು ಏನ ಮಾಡತೀ ಬಿಡಪ್ಪಾ ನೀನು! ’ ಅಂತ ಶಿವಲಿಂಗ ಅಂದುಬಿಟ್ಟ; ನಾ ಸುಮ್ಮಗಾದೆ. ಆವರ ನಾನು ಮುಕಾ ಸಣ್ಣದು ಮಾಡಿ ಸುಮ್ಮಗಽ ಕೂತದ್ದನ್ನ ಶಿವಲಿಂಗನ ಕಡಿಂದ ನೋಡೂದಾಗಲಿಲ್ಲೇನೋ! ತಾನಾಗೇ ಹೇಳಿದ :

‘ ನೋಡು ಯಪ್ಪಾ! ಈ ಗೌಡ ಶಾನಭೋಗರು, ಇಂಥಾದೇನಽರೆ ಆದೀತೋ ಇಲ್ಲೋ ಅಂತ ಹಾದೀ ನೋಡತಽ ಕುಂತಿರತಾರ. ಆವೊತ್ತ ಏನಾದರೂ ಕೊಡದಿದ್ದರ, ಗಂಡಾ ಅತ್ತಿ ಕೂಡಿ ಒಡದು ಬಾಂವ್ಯಾಗ ಚೆಲ್ಲ್ಯಾರ. . ಅಂತ ಬರೆದು ಹಾಕತೀವಿ ಅಂತ ಅವರೆಲ್ಲಾರೂ ಹೆದರಿಸಿದರು. ’

‘ ಹಾಂಗಾದರ ನೀ ಏನು ಕೊಟ್ಟೇನು ? ’

‘ ಎಲ್ಲೀದು ಕೊಡೂದು ? ಕೊಡದಿದ್ದರ ಅಂತೂ ನಿರವಾ ಇದ್ದಿಲ್ಲ ! ಸುಮುಸುಮ್ಮನಽ ನಿನ್ನ ತೊಗೊಂಡು ಕಚೇರಿ ಕಟ್ಟೀ ತಿರಗೂ ಪರಸಂಗ ! ’

‘ ಹಂಗಾದರ ಏನು ಮಾಡಿದಿ ? ’

‘ ಮಾಡೂದೇನು ! ಸುಗ್ಗಿ ಆದ ಮ್ಯಾಲ ಕೊಡತೀನಿ ಅಂತ ಹೇಳಿದೆ. ತಿಪ್ಪಯ್ಯನವರು ನಡುವಾಗಿ, ಗೌಡಾ ಕುಲಕರ್ಣಿಗೆ ತಮ್ಮ ಹೆಸರಿನಿಂದ ಕಾಗದಾ ಬರದುಕೊಟ್ಟರು. ನಡುವಾದವರನ್ನ ಮುಣಗುಸೂದ್ಯೆತೇ ! ಇಂದಿಲ್ಲಾ ನಾಳೆ ಕೊಡಲಾಕಽ ಬೇಕಲಾ ! ’

‘ ಎಷ್ಟು ಕೊಡಬೇಕಂತ ಕರಾರಾಗೇತಿ ಶಿವಲಿಂಗಾ ?

‘ ಮುನ್ನೂರು ರುಪಾಯಿ ! ’

‘ ಅಯ್ಯಯ್ಯೋ ! ’ ಅಂತ ಅಂದೆ. ನನ್ನ ಎದೀ ಒಡದುಹೋತು. ‘ ಕಾಶಿ ತಾ ಹೋಗೂದಲ್ಲದಽ ಮನೀ ಎಲ್ಲಾ ತೊಳಕೊಂಡು ನಡದು ಬಿಟ್ಟಳಽ. . ! ’ ಅಂತ ಅಂದು ಹೊಟ್ಯಾಗಿನ ಉರೀ ಹೊರಗ ಹಾಕಿದೆ. ಶಿವಲಿಂಗ ಮುಕಾಬಾಡಿಸಿಕೊಂಡು ಮಂಕನ್ಹಾಂಗ ಕುಂತುಕೊಂಡಿದ್ದ.

ಸತ್ತದ್ದು ತನ್ನ ಬಾಯಾಗ ಮಣ್ಣ ಹಾಕ್ಕೊಂಡು ಹೋಗತೈತಿ. ಇದ್ದವರದೆಲ್ಲಾನೂ ನಡದಽ ನಡೀಬೇಕಲ್ಲ ! ಸುಗ್ಗೀದಿನಾ ಎಲ್ಲಾ ತೀರಿ, ತಿರಿಗಿ ಉಗಾದೀ ಹಬ್ಬನೂ ಬಂದಹೋತು. ಬೆಳದ ಬೆಳೀನೆಲ್ಲಾ ಕುಟ್ಟಿಕ್ಕಿ ಮಾರಿದರೂ, ಹೊಲದ ಯಜಮಾನರ ತೆರಗೀ ಹಣಾ ಮುಟ್ಟಬೇಕಾದರ

ಕುರಿಕ್ವಾಣ ಬಿದ್ದುಹೋದೂ. ಶಿವಲಿಂಗ ಗೌಡರಿಗೆ ಹೇಳಿದ ಗಡುವು ಉಗಾದೀತನಕಾ ಅಂತಿತ್ತು. ಉಗಾದಿ ಆಗೂದಽ ತಡಾ, ಗೌಡರು ತಿಪ್ಪಯ್ಯನ ಬೆನ್ನು ಹತ್ತಿದರು. ತಿಪ್ಪಯ್ಯ ನಮ್ಮ ಮನಿಗೆ ಸಂಜಿಮುಂಜಾಲೆ ಎಡತಾಕಲಾಕಹತ್ತಿದ. ಹೊಟ್ಟೀ ಕಾಳಿಂದಽ ಪಂಚೇತಿಬಂದಿರುವಾಗ, ಮುನ್ನೂರು ರೂಪಾಯಿ ತರಬೇಕೆಲ್ಲಿಂದ ರಾಯರ! ಇದಽ ಚಿಂತೀವೊಳಗಽ ತಾಯಿಮಗಾ ನಾವಿಬ್ಬರೂ ಹಗಲೂ ರಾತ್ರೀ ಕಳೀತಿದ್ದಿವಿ.

ಕೆಟ್ಟಯಾಳೀ ಅಂದರ ನಮಗ ಎಂತಾದು ಹತ್ತಿದ್ದೀತು ರಾಯರ! ಇಂತಾ ಯಾಳೆದಾಗಽ ನನ್ನ ಸಣ್ಣ ಮಗಳ ಗಂಡ ತೀರಿಕೋಬೇಕಽ! ದುಕ್ಕ ಬರಲಾಗ ಹತ್ತಿದೂ ಅಂದರ ಒಂದರ ಹಿಂದೊಂದು ಹಾಂಗಽ ಬರಲಾಕಽ ಹತ್ತ್ಯಾವ. ಹರೇದ ಮಗಳು ಬಂದು ಮನ್ಯಾಗ ಕುಂತುಬಿಟ್ಲು; ಮಗಳ ಗಂಡ ಸತ್ತ ದುಕ್ಕದವರಂತ ತಿಳದೋ ಏನೋ! ಒಂದೆರಡು ತಿಂಗಳು ತಿಪ್ಪಯ್ಯನ ತಗಾದೆ ಕಡಿಮಿಯಾಗಿತ್ತು. ಆ ಮ್ಯಾಲ ಮತ್ತ ಎರಡೂ ಯಾಳೇ ಬರೂದಕ ಸುರೂಮಾಡಿದ.

ಶಿವಲಿಂಗಗ ಒಂದೆರಡಽ ಸಾರೆ ನಾ ಹೇಳಿದೆ: 'ಹರೇದ ಮಗಳನ್ನ ಎಷ್ಟು ದಿನಾ ಅಂತ ಮನ್ಯಾಗಿಟ್ಟುಕೊಂಡಿರೂದು? ಎಲ್ಲ್ಯಾದರೂ ಒಂದು ಚೆಲೋ ಮನೀ ನೋಡಿ ಉಡಿಕೀಮಾಡಿಕೊಟ್ಟುಬಿಡು; ತೆರಪಿನ ಹಣಾ ಏನಾದರೂ ಹೆಚ್ಚಿಗೆ ಬಂದರ, ಅದರಾಗಽ ನಿನಗೂ ಒಂದು ಎಲ್ಲ್ಯಾದರೂ ಹೆಣ್ಣು ನೋಡಿದರಽ ಬಂದೀತು!”

ನಾ ಹೇಳಿದಾಗೆಲ್ಲಾ ಶಿವಲಿಂಗನದು ಒಂದಽ ಉತ್ತರ: 'ನನಗ್ಯಾತಕ್ಕ ಬೇಕಽ ಯವ್ವಾ ಇನ್ನಮ್ಯಾಲ ಹೇಣತಿ, ಸಂಸಾರಾ! ಇರೂತನಕಾ ಎಲ್ಲ್ಯಾದರೂ ದುಡುದು ಹೊಟ್ಟೀತುಂಬಿಕೊಂಡರ ಆತು!' ಶಿವಲಿಂಗನ ಈ ಮಾತು ಕೇಳಿದಾಗೆಲ್ಲಾ ನನ್ನ ಕಳ್ಳಿಗೆ ಕೊಳ್ಳೀಚುಚ್ಚಿದ್ಹಾಂಗ ಆಗತಿತ್ತು.

ತಿಪ್ಪಯ್ಯನ ತೊಂದರಿ ತಲಿಬ್ಯಾಸರಿಕೀ ಕೊಟ್ಟಿತು. 'ಹುಡಿಗೀ ಉಡಿಕೀ ಕಾರೇ ಆಗೂತನಕಾ ತಡಿ; ಬಂದ ತೆರವಿನ ಹಣಾ ಕೈಯಾಗಿಂದ ಕೈಯಾಗಽ ನಿನಗ ಎಣಿಸಿ ಕೊಡತೀನಿ' ಅಂತ ಶಿವಲಿಂಗ ಅಂವಗ ಹೇಳಿದ. ತನಗ ರೂಪಾಯಿ ಬರತಾವಂತ ಬರೋಸ ಅನಿಸಿತೇನೊ ತಿಪ್ಪಯ್ಯಗ! ಕಾರೇ ಆಗೂತನಕಾ ಮನೀಗೇನು ಬರಲಿಲ್ಲ!

ನಾಗರಪಂಚಮೀ ದಿನಾನಽ ಮಗಳ ಉಡಿಕೀ ಕಾರೇ ತೀರಿತು. ಕರ್ಚುಕಂದಾಯಾ ಹೋಗಿ ಉಳಿದ ಇನ್ನೂರು ರುಪಾಯಿ ತೆರಪಿನ ಹಣಾನ- ತಿಪ್ಪಯ್ಯಾಗ ಮುಟ್ಟಿಸಿಬಿಟ್ಟ ಶಿವಲಿಂಗ. ಹೊಟ್ಟೀಕಳ್ಳು ಮಾರಿ ಕೊಂಡರ, ಆ ಹಣಾ ಸುದ್ದಾ ನಮಗ ದಕ್ಕಲಿಲ್ಲ ಯಪ್ಪಾ!

ಮಾಡಿದ ಮಂದೀ ಹೊಲಾ ಎಲ್ಲಾ ಬ್ಯಾಸಗ್ಯಾಗಽ ಬಿಟ್ಟುಬಿಟ್ಟಿದ್ವಿ. ಮುಂಗಾರೀ ಮಳೀ ಆಗದ್ದಕ್ಕ ಮೇವಿಂದು ಮನ್ಸ್ಯಾಗ ಪಂಚೇತಿ ಒಂತು. ಹೊಟ್ಟಿಗೆ ಕಾಳೂ ಇದ್ದಿಲ್ಲ. ಮತ್ತ ತಿಪ್ಪಯ್ಯಾಗ ಇನ್ನೂ ನೂರು ರುಪಾಯಿ ಕೊಡಬೇಕಾಗಿತ್ತು, ಅದಕ್ಕಂತಽ ಮನ್ಸ್ಯಾಗಿನ ಎಮ್ಮಿ, ಎರಡೂ ಎತ್ತು ಸಂತಿಗೊಯ್ದು ಮಾರಿ ಬಂದದ್ದಾತು. ಮೇವಿಲ್ಲದ ದಿನದಾಗ ದನಾ ಕೊಳ್ಳವರ್ಯಾರು? ಅಂತಽ ಎಷ್ಟು ನೂರು ರುಪಾಯಿ ಬರಬೇಕಾಗಿದ್ದದ್ದು ಹೋಗಿ ಆರಿಪ್ಪತ್ತು ರುಪಾಯಿ ಕೈಗೆ ಬಂಬೇಕಾದರ ಸಾಕಬೇಕಾಗಿಹೋತು. ಅದರೊಳಗ ನೂರು ರುಪಾಯಿ ತಿಪ್ಪಯ್ಯಾನ ಸಾಲಕ್ಕ ತೀರಿದೂ. ಉಳದ ಇಪ್ಪತ್ತು ಮನೀಕರ್ಚಿಗೆ ಆದೂ.

ಈ ವರಸ ನಮ್ಮ ಕಡೆ ಹಿಂಗಾರೀ ಮಳೀನೂ ಹಾಂಗಽ ಹೋಗಿ ಬಿಟ್ಟೂ. ಉತ್ತರೀ ಹಸ್ತಾ ಮಳೀ ಅಂದರ ಒಕ್ಕಲಿಗ್ಯಾಗ ವಚನಾಕೊಟ್ಟ ಮಳೀ ಅಂತಾರಲ್ರಿ! ಅವು ಸುದ್ದಾ ಹಲ್ಲುತಗದು ಅಣಗಿಸಿ ಅಣಗಿಸಿ ಹೊಂಟು ಹೋದೂ. ಊರಂತೂರೆಲ್ಲಾ ಬೆಳೀ ಇಲ್ಲಾ, ಮನ್ಸ್ಯಾಗ ಸಿಲಕೀ ಕಾಳಿಲ್ಲ, ಅಂದಮ್ಯಾಲ ಇದ್ದೂರಾಗ ನಮ್ಮ ಹೊಟ್ಟಿ ತುಂಬೂ ಬಗೀಹ್ಯಾಂಗ ರಾಯರಽ! ಅದಕಽ ತಾಯೀ ಮಗಾ ಇಬ್ಬರೂ ಮನಿಮಾರು ಬಿಟ್ಟು, ಇಲ್ಲಿ ಬಂದು ಸೇರಿಕೊಂಡಿದೀವಿ; ನೋಡ್ರಿ ರಾಯರ! ನಮ್ಮ ಮನೀ ಸಿರಿ, ಸಂಪತ್ತು,ಸುಕಾ,ಸಂತೋಸಾ ಎಲ್ಲಾನೂ..ನಮ್ಮ ಕಾಶಿ ಹೊತಗೊಂಡು ಹೋದ್ಯಾಂಗ ಮಾಡಿದಳು ನೋಡ್ರಿ..”

ಮಲ್ಲಮ್ಮ ದೊಡ್ಡದೊಂದು ಉಸಿರು ಹಾಕಿ, ಸುಮ್ಮನೆ ಕುಳಿತು ಕಣ್ಣೀರು ಸುರಿಸತೊಡಗಿದಳು. ನಾನು ತುಂಬಿತುಳುಕಲಿರುವ ಕಂಬನಿಯ ಕಣ್ಣುಗಳಿಂದ ಜಂತಿಯನ್ನು ನೋಡಲು ತೊಡಗಿದೆ.

# ಸೋಂಕುರೋಗ

ಹೆಂಡತಿ ಬದುಕಿರುವ ವರೆಗೂ ಮೋಹನರಾಯರಿಗೆ ಸಂಸಾರದ ವಿಚಾರದಲ್ಲಿ ಇನ್ನಾರಲ್ಲಿಯೂ ಕಂಡುಬಾರದಂತಹ ವಿರಕ್ತಿ. ಅಪ್ಪಿತಪ್ಪಿ ಶ್ರೀಕಂಠಭಟ್ಟರು ರಾಯರ ಕಣ್ಣೆದುರು ಸಿಕ್ಕಿದರೆ ಸಾಕು; ಅದ್ವೈತ ತತ್ತ್ವಜ್ಞಾನದ ಚರ್ಚೆಗೆ ಪ್ರಾರಂಭಿಸಿ ಬಿಡುವರು ರಾಯರು. ಶಂಕರಾಚಾರ್ಯರ ಮಾಯಾವಾದದಲ್ಲಿ, ಅದ್ವೈತಿಗಳಾದ ಭಟ್ಟರಿಗಿಂತ ದ್ವೈತಿಗಳಾಗಿ ಹುಟ್ಟಿದ ರಾಯರಿಗೇ ಹೆಚ್ಚಿನ ವಿಶ್ವಾಸ; ಎಂತಲೆ 'ಹೆಂಡಿರು-ಮಕ್ಕಳು, ಮನೆ-ಮಾರು ಎಲ್ಲವೂ ಮಿಥ್ಯ-ಶೂನ್ಯ-ಸುಳ್ಳು-ಹುಸಿ' ಎಂದು ಖಂಡಿತ ಸ್ವರದಲ್ಲಿ ನುಡಿಯುತ್ತಿರುವರು.

ಪುರೋಹಿತ ಸೀನಪ್ಪಾಚಾರ್ಯರು ಮನೆಗೆ ಬಂದರಾಯಿತು, ರಾಯರಲ್ಲಿ ಭಗವದ್‌ಭಕ್ತಿಯ ಆವೇಶವಾಗುವುದು. ಆಗಿನ ಅವರ ಮಾತಿನಲ್ಲಿ ದಾಸಕೂಟದ ದ್ವೈತಶ್ರದ್ಧೆಯ ಕಾರಂಜಿಯೇ ಪುಟಿಯುತ್ತಿರುವುದು. ಸಂಸಾರವನ್ನು ನಿಂದಿಸಿ ನುಡಿದ ಹರಿದಾಸರ ಹಾಡುಗಳು ಮಾತುಮಾತಿಗೂ ಮುಂದುವರಿದು ನುಗ್ಗುವುವು.

ವಕೀಲ ಮಾಧವರಾಯರನ್ನು ಕಂಡಾಗಲೆಲ್ಲ ರಾಯರ ರಾಷ್ಟ್ರಪ್ರೀತಿ, ಒಮ್ಮೆಲೆ ಅವರ ಮೈಯನ್ನೆ ಮರೆಯಿಸಿಬಿಡುವುದು.

"ಏನು ಮಾಧವರಾವ್', ದೇಶಕ್ಕೆ ಬೆಂಕಿಹತ್ತಿಹೋಗಿದೆ. ಇಂತಹ ವೇಳೆಯಲ್ಲಿ ಕಲಿತವರೆನಿಸಿಕೊಳ್ಳುವ ನಾವು ಕೈಮುಚ್ಚಿ ಕುಳಿತುಕೊಳ್ಳಬೇಕೇ? ಪರದಾಸ್ಯದ ಬಲೆಯು ನಮ್ಮ ಭರತಖಂಡವನ್ನು ದಿನದಿನಕ್ಕೂ ಬಿಗಿಯುತ್ತಲಿದೆ. ನಮ್ಮ ದೇಶಬಾಂಧವರು ಬಡತನದ ಬೇಗೆಯಲ್ಲಿ ಬೆಂದು ಬೇಗುದಿಗೊಳ್ಳುತ್ತಿದ್ದಾರೆ. ಇಂತಹ ವೇಳೆಯಲ್ಲಿ ಹೆಂಡಿರು, ಮಕ್ಕಳು, ಮನೆ, ಮಾರು ಯಾರಿಗೆ ಬೇಕಾಗಿದೆ ಇವೆಲ್ಲಾ? ನಾನಂತೂ ಕಾಲವನ್ನೆ ಎದುರ

ನೋಡುತ್ತಲಿದ್ದೇನೆ. ಈಗ ಈ ಸ್ವಾತಂತ್ರ್ಯಯುದ್ಧದಲ್ಲಿ ಭಾಗವಹಿಸಬೇಕಾದುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ. ಪರದೇಶೀಯರ ದೇಶಪ್ರೇಮವನ್ನು, ನಿಶ್ಚಯವಾಗಿಯೂ ನಾವು ಕಲಿತುಕೊಳ್ಳಬೇಕಾಗಿದೆ. ಇಟಲಿ, ಇಂಗ್ಲೆಂಡು, ರಷ್ಯಾ, ಜರ್ಮನಿ ಯಾವ ದೇಶವನ್ನೆ ತೆಗೆದುಕೊಳ್ಳಿ; ಅಲ್ಲಿಯವರೆಲ್ಲರಿಗೂ ದೇಶಾಭಿಮಾನದೆದುರು ಸಂಸಾರವೆಂದರೆ ಕಾಲುಕಸ !''

ಹೀಗೆಂದು ಮಾತನಾಡುವಾಗಿನ ರಾಯರ ಹಾವ-ಭಾವಗಳಲ್ಲಿ ದೇಶಭಕ್ತಿಯ ಕಳವಳದ ತೆರೆಗಳೂ ಅದಕ್ಕಾಗಿ ಸಂಸಾರತ್ಯಾಗದ ನಿರ್ಣಯವೂ ತುಂಬಿ ಹೊರಸೂಸುತ್ತಿರುವುವು. ಇವರ ಮಾತುಗಳನ್ನು ಕೇಳುತಿರುವಾಗ, ವಕೀಲರ ದೇಶಪ್ರೀತಿಯು ಒಂದಕ್ಕೆ ಎರಡಾಗುವುದು.

ಸ್ನೇಹಿತರೊಂದಿಗೆ ಸಂಭಾಷಿಸುತಿರುವಾಗಲೆಲ್ಲ ರಾಯರು ಸಾಂಸಾರಿಕ ಜೀವನದ ವಿಷಯದಲ್ಲಿ ನಿರಾಶಾವಾದದ ಮಳೆಯನ್ನೆ ಸುರಿಸುತ್ತಿರುವರು. ಇವರ ನಿರಾಶಾವಾದವನ್ನು ಕೇಳಿದ ಒಬ್ಬಿಬ್ಬರು ಅವಿವಾಹಿತ ಸ್ನೇಹಿತರು 'ತಾವು ಮದುವೆಮಾಡಿಕೊಂಡು ಸಂಸಾರದ ನೊಗಕ್ಕೆ ಕೊರಳನ್ನು ಕೊಡಬೇಕೋ ಕೊಡಬಾರದೋ ?' ಎಂಬ ವಿಚಾರದ ನಿರ್ಣಯವನ್ನು ಕಾಣದೆ ಪೇಚಾಡುತ್ತಿದ್ದರು.

ರಾಯರ ಸಂಸಾರವಿರತಿಯ ಕಥೆಯು ಊರಲ್ಲಿ ಬೀದಿಮಾತಾಗಿದ್ದಿತು. ಅದೇತಕ್ಕೆ ಹಾಗಾಗಬಾರದು ? 'ಶ್ರೀಶಂಕರಾಚಾರ್ಯರ ಮಾಯಾವಾದದ ಪ್ರಚಾರಕ್ಕಾಗಿಯೆ ಅವತಾರತಾಳಿದವರಿವರು' ಎಂದು ಶ್ರೀಕಂಠಭಟ್ಟರು ಕಂಠವರೆವುರು ಕೊಂಡಾಡುವರು. 'ಶ್ರೀಪಾದರಾಯರ ಸಾಕ್ಷಾತ್ ಶಿಷ್ಯಪರಂಪರೆಗೆ ಸೇರಿದವರಿವರು' ಎಂದು ನೀನಪ್ಪಾಚಾರ್ಯರು ಸಮಯ ಸಿಕ್ಕಿದಾಗಲೆಲ್ಲ ಸಾರುವರು. ದೇಶಭಕ್ತರಂತೂ ಉಪನ್ಯಾಸಪೀಠದಮೇಲೆ ನಿಂತು, ರಾಯರು ಮಾಡಲಿರುವ ಸ್ವಾರ್ಥತ್ಯಾಗವನ್ನು ಗಂಟೆಗಟ್ಟಲೆ ಗಾಳಿಯೊಂದಿಗೆ ಹಾರಿಸುತ್ತಿರುವರು. ಇಷ್ಟೆಲ್ಲವಾದರೂ ರಾಯರ ನಡತೆಯು ಅವರ ತೀರ ಹತ್ತಿರದವರಿಗೆಲ್ಲ ವಿಚಾರಣೀಯ ವಿಷಯವಾಗಿದ್ದಿತೇನೋ ನಿಜ !

* * *

ಹೆಂಡತಿ ಸತ್ತಾಗ ರಾಯರಿಗೆ ಮೂವತ್ತು ಮೂವತ್ತೊಂದು ವರ್ಷಗಳಿರಬಹುದಿಷ್ಟೆ ! ಇವರ ಮದುವೆಯದೊಂದು ತಮಾಷೆಯ ಕತೆಯೆ ಆಗಿದೆ. ರಾಯರು ಹದಿನೇಳು ವಯಸ್ಸಿನವರಿರಬಹುದು; ತಾಯಿಗೆ ಮದುವಣಿಗ ಮಗನನ್ನು ನೋಡುವ ಬಯಕೆಯಾಯಿತಂತೆ. ತಂದೆಯವರಿಗೂ ಈ ಮಾತು ಬೇಕಾಗಿಯೆ ಇರಬಹುದು. ರಾಯರ ಸೋದರಮಾವ—ತಾಯಿಯ ಅಣ್ಣ—ಇವರಿಗಾಗಿಯೆ ಒಬ್ಬ ಮಗಳನ್ನು ಹೆತ್ತು, ಬ್ರಹ್ಮನ ಸಂಕಲ್ಪಸಿದ್ಧಿಗೆ ಸಾಧನವನ್ನು ಒದಗಿಸಿದ್ದರು. ಹುಡುಗಿಗಾಗ ಹನ್ನೊಂದು ವರ್ಷದ ವಯಸ್ಸು. ಲಗ್ನಸಮಾರಂಭದ ನಾಟಕದಲ್ಲಿ ನಾಯಕ ಪಾತ್ರವನ್ನು ವಹಿಸಿ ನೋಡಬೇಕೆಂದಿದ್ದ ರಾಯರ ಎಳೆಯತನದ ಆತುರವು, ಕನ್ಯೆಯ ಚೆನ್ನು-ಚೆಲ್ವು ಹೇಗಿರಬೇಕೆಂಬುದರ ಕಡೆಗೆ ಹೊರಳಿ ನೋಡಬೇಕಾದರೂ ಏತಕ್ಕೆ? ವಿಜೃಂಭಣೆಯಿಂದ ಮದುವೆಯ ಸಮಾರಂಭವು ನೆರವೇರಿತು.

ವಧುವಿಗೆ ಕಣ್ಣು, ಕಿವಿ, ಮೂಗು, ಬಾಯಿ, ಹಲ್ಲು, ನಾಲಗೆ ಎಲ್ಲವೂ ಇದ್ದುವು. ಕೈಕಾಲು ಸ್ವಲ್ಪ ಬಡಕಲು; ಮದುವೆಯ ಹೆಣ್ಣಿನ ಕೈಕಾಲುಗಳೇನು ಗರಡಿಯಾಳುಗಳ ಕೈಕಾಲುಗಳಂತಿರಬೇಕೇ ? ಮೈಬಣ್ಣ ಕಪ್ಪೆಂದು ಯಾರಾದರೂ ಹೇಳಿದರೆ ರಾಯರ ತಾಯಿಯ ಕಿಡಿಗಣ್ಣಿಗೆ ಪಾತ್ರರಾಗಬೇಕಾಗುತ್ತಿದ್ದಿತಾದುದರಿಂದ, ಮೈಬಣ್ಣ 'ನಸುಗೆಂಪು' ಎಂದೋ 'ಮಾಸಲುಗೆಂಪು' ಎಂದೋ ಜನ ಮಾತನಾಡಿರಬಹುದು. ಮದುವೆಯಾದ ಮೇಲೆ 'ರಂಗೂ' ಎಂದು ಹೆಂಡತಿಯ ಹೆಸರನ್ನು ಹೇಳುತ್ತಿರುವಾಗ, ಗಂಡನ ಅಧಿಕಾರ ತನಗೆ ದೊರಕಿದ ಅಭಿಮಾನವು ರಾಯರ ಎದೆಯನ್ನು ಹಿಗ್ಗಿಸಿರಲೂ ಬಹುದು.

* * *

ಮದುವೆಯಾದ ಮರುವರ್ಷವೆ ರಾಯರು ತಮ್ಮ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪಟ್ಟಣದಲ್ಲಿರಬೇಕಾಯಿತು. ಮೊದಲನೆಯ ವರ್ಷವೆಲ್ಲವನ್ನೂ ರಾಯರು ತಮ್ಮ ಹಳ್ಳಿಗತನವನ್ನು ಕಡಿಮೆಮಾಡಿಕೊಳ್ಳುವುದಕ್ಕೆ ಉಪಯೋಗಿಸಿದರು. ಎರಡನೆಯ ವರ್ಷವನ್ನು ನಾಗರಿಕ ವಿದ್ಯಾರ್ಥಿಜೀವನವನ್ನು ತಮ್ಮ ಬದುಕಿಗೆ ಅಳವಡಿಸಿಕೊಳ್ಳುವುದರಲ್ಲಿ ಕಳೆದರು. ತರಗತಿಯ

ಉಪಾಧ್ಯಾಯರೇ ಮನೆಗೆ ಬಂದು ಕಲಿಸುತ್ತಿದ್ದುದರಿಂದ ರಾಯರು ಪರೀಕ್ಷೆಯಲ್ಲಿ ಸೋತುದು ಎಂದೂ ಇಲ್ಲ.

ಮೊದಲಿನ ಎರಡುಮೂರು ವರ್ಷ, ಗಂಡ-ಹೆಂಡತಿಯರು ಒಂದೆಡೆಯಲ್ಲಿ ಕೂಡಿ ಇರುವ ದಿನಗಳು ಹೆಚ್ಚಾಗಿ ಬರಲೇ ಇಲ್ಲ. ಹುಡುಗಿ ಚಿಕ್ಕವಳು; ತಾಯ್ತಂದೆಗಳಿಗೆ—ಅಪರೂಪದ— ಒಬ್ಬಳೆ ಹೆಣ್ಣುಮಗಳು; ಎಂತಲೆ ಎಂದಾದರೂ ನಾಲ್ಕೆಂಟು ದಿನ ಬಂದರೆ ಅತ್ತೆಯ ಬಳಿಯಿದ್ದು ಮರಳಿ ತವರೂರಿಗೆ ಹೋಗಿಬಿಡುವಳು.

ಅತ್ತೆ-ಮಾವಂದಿರಿಬ್ಬರಿಗೂ ಅಳಿಯನನ್ನು ತಮ್ಮಲ್ಲಿಗೆ ಕರೆಯಿಸಿಕೊಳ್ಳಬೇಕೆಂದು ಬಲುದಿನದ ಹವಣಿಕೆ. ಎಂತಲೇ ‘ ಈ ಸಲದ ಬೇಸಿಗೆಯ ಬಿಡುವಿನಲ್ಲಿ ಇಲ್ಲಿಗೇ ಬರಬೇಕು ’ ಎಂದು ರಾಯರಿಗೆ ಮಾವನವರಿಂದ ಕಾಗದ ಬಂದಿತು. ಹೋಗಬೇಕೆಂದು ರಾಯರೂ ಸಂಕಲ್ಪಿಸಿಕೊಂಡಿದ್ದರು. ಆದರೇನು ? ಹೊರಡಲಿರುವ ಮೊದಲ ದಿನವೇ ಮಾವನವರಿಂದ ಮತ್ತೊಂದು ಕಾಗದ ಬಂದಿತು. ಸಿಡುಬಿನ ಪಿಡುಗು ಊರಲ್ಲೆಲ್ಲ ಹಬ್ಬಿರುವುದೆಂದೂ ಆದುದರಿಂದ ಈಗ ನೀವು ಖಂಡಿತ ಇಲ್ಲಿಗೆ ಬರಲಾಗದೆಂದೂ ಅದರಲ್ಲಿ ಬರೆದಿದ್ದಿತು. ರಾಯರಿಗೆ ತುಂಬ ನಿರಾಶೆ.

ಊರಲ್ಲಿಯ ಸಿಡುಬಿನ ರೋಗ ರಾಯರ ಹೆಂಡತಿ ರಂಗಕ್ಕನಿಗೂ ತಗುಲಿಕೊಂಡಿತು. ಬದುಕಿ ಉಳಿದುದೇ ಹೆಚ್ಚಿನದೆಂದು ಹೇಳಬೇಕು. ಜೀವದ ಮೇಲೆ ಬಂದಿದ್ದ ಪ್ರಸಂಗವು ಎಡದ ಕಣ್ಣೊಂದನ್ನು ಕಸಿದುಕೊಂಡು ಹೋಯಿತು. ಸಿಡುಬಿನ ಮಚ್ಚೆಗಳಿಂದ ಹುಡುಗಿಯ ಮುಖವು ಹೊತ್ತಿದ ದೋಸೆಯಂತಾಯಿತು.

* * *

ಪಟ್ಟಣವಾಸದ ಮೂರನೆಯ ವರ್ಷವು ರಾಯರಿಗೆ ತನ್ನ ಸಂಸ್ಕಾರದ ಬಣ್ಣವನ್ನು ಚೆನ್ನಾಗಿ ಬಳಿಯತೊಡಗಿದ್ದಿತು. ಇಪ್ಪತ್ತು ಇಪ್ಪತ್ತೊಂದು ವರ್ಷದ ಮೊದಲುಹರಯದ ವಯಸ್ಸು; ಮನಸ್ಸು ಎಂತೆಂತಹವೋ ಬಿಸಿಲುಗುದುರೆಗಳನ್ನು ಬೆಂಬಳಿಸಲಾರಂಭಿಸಿದ್ದಿತು. ಆಗ ರಾಯರಿಗೆ ಮಾವನವರಿಂದ ಕಾಗದವೊಂದು ಬಂದಿತು : ‘ ದೀಪಾವಳಿಯ ರಜೆಯಲ್ಲಿ

ತಮ್ಮಲ್ಲಿಗೇ ಬರಬೇಕು.' ಎಂಬ ಅಭಿಪ್ರಾಯ ಅದರಲ್ಲಿದ್ದಿತು. ಮಾವನ ಮನೆಗೆ ಹೊರಡಬೇಕಾದ ಹದಿನೈದು ದಿನಗಳ ಮೊದಲಿನಿಂದಲೂ ರಾಯರು ಹೊರಡುವ ಸಿದ್ಧತೆಗಳನ್ನು ಮಾಡಿಕೊಂಡರು. ನೋಡುವುದಕ್ಕೆ ರಾಯರ ರೂಪವು ಚೆನ್ನಾದುದು : ರೂಪಕ್ಕೆ ತಕ್ಕ ರಸಿಕತನದ ವೇಷಭೂಷಣಗಳ ಅಳವಡಿಕೆಯಾಯಿತು. ತುಂಬಿದ ಉಲ್ಲಾಸದಿಂದಲೆ ರಾಯರು ಮಾವನ ಮನೆಗೆ ಬಂದರು. ಆದರೆ ಏನಾಯಿತೇನೋ ! ಅಳಿಯತನಕ್ಕೆಂದು ಬಂದಿದ್ದ ರಾಯರು ಏನೇನೋ ನೆಪಗಳನ್ನೊಡ್ಡಿ, ಬಂದ ಮರುದಿನವೆ ಅಲ್ಲಿಂದ ಹೊರಟುಬಿಟ್ಟರು. ದೀವಳಿಗೆಯ ರಜೆಯನ್ನೆಲ್ಲ ಹಳ್ಳಿಯಲ್ಲಿಯೆ ಕಳೆದರು. ಆಗ ನೋಡಿದರೆ ಮುಖದಮೇಲೆ ಮೊದಲಿನ ಕಳೆಯಿರಲಿಲ್ಲ. ತುಟಿಯಮೇಲೆ ಹಿಂದಿನ ಹುಸಿನಗೆಯಿರಲಿಲ್ಲ. ಮಾತಿಗೆ ತುಂಬ ಮಿತಿಯು ಬಂದುಬಿಟ್ಟಿದ್ದಿತು. ಯಾವಾಗಲೂ ವಿಚಾರಮಗ್ನರು. ಅದನ್ನು ಮರೆಮಾಡಲಿಕ್ಕೆಂದೇ ಇರಬಹುದು—ಯಾವಾಗಲೂ—ಮೂಗಿನ ಮುಂದೆ ಅಭ್ಯಾಸದ ಪುಸ್ತಕ. ಮಗನ ಈ ಅಭ್ಯಾಸದ ಅಭಿನಯವು ತಾಯಿ—ತಂದೆಗಳಲ್ಲಿ ಹೆಮ್ಮೆಯನ್ನೆ ಹುಟ್ಟಿಸಿರಬಹುದು.

* * *

ರಾಯರು ಹೈಸ್ಕೂಲಿನ ಓದನ್ನು ಮುಗಿಸಿ ಕಾಲೇಜನ್ನು ಸೇರಿದರು. ಅಲ್ಲಿಯ ಸಂಗಡಿಗರಲ್ಲಿ ಯಾರಾದರೂ 'ಮದುವೆ' 'ಹೆಂಡತಿ' ಎಂದು ಮಾತುಗಳನ್ನೆತ್ತಿದರೆ, ಔದಾಸೀನ್ಯ-ಅಸಮಾಧಾನಗಳ ಮೋಡವು ರಾಯರ ಮುಖವನ್ನು ಮುಸುಕಿಬಿಡುವುದು. ತುಂಬ ಮಾತಿನ ರಭಸದಲ್ಲಿದ್ದಾಗಲೆ ಅವರ ನಾಲಗೆ ತಡೆದುನಿಲ್ಲುವುದು. ಸಂಸಾರವಿರಕ್ತಿಯ ಪ್ರಾರಂಭವು ರಾಯರ ಕಾಲೇಜಿನ ಜೀವನದಲ್ಲಿಯೆ ತಲೆದೋರಿತು.

ಮರುವರುಷವೆ ಹುಡುಗಿ ಋತುಮತಿಯಾದ ವಿಷಯ ಗೊತ್ತಾಯಿತು. ಪ್ರಸ್ಥಕ್ಕಾಗಿ ತಂದೆಯವರ ಕಡೆಯಿಂದ ಅವಸರದ ಕರೆಬಂದಿತು. ಅಭ್ಯಾಸದ ನೆಪದಿಂದ ರಾಯರು ಪ್ರಸ್ಥವನ್ನು ಮುಂದಕ್ಕೆ ನೂಕಿದರು. ರಾಯರ ಜೀವನದಲ್ಲಿಯ ವ್ಯತ್ಯಾಸದ ಅರ್ಥವನ್ನು ತಂದೆಯವರು ಹೇಗೆ ಮಾಡಿಕೊಂಡಿದ್ದರೇನೋ ! ಮಗನಿಗೆ ಮತ್ತೊಂದು ಮದುವೆಯನ್ನು ಮಾಡಿಬಿಡಬೇಕೆಂಬ

ಯೋಚನೆಯಲ್ಲಿರುವರೆಂಬ ವರ್ತಮಾನ ರಾಯರಿಗೆ ಹೇಗೊ ಹೇಗೋ ಗೊತ್ತಾಗುತ್ತಿದ್ದಿತು. . ಆಗಾಗ. ಆದರೆ ಈ ವಿಚಾರ ಬಂದಾಗ ರಾಯರು ಮಾತನ್ನೇ ಆಡರು.

* * *

ಇಂಟರ್ ಪರೀಕ್ಷೆಯನ್ನು ತೀರಿಸಿ ರಾಯರು ಮನೆಗೆ ಬಂದರು. ಮನೆಯಲ್ಲಿ ತಂದೆಯವರು ಜ್ವರದಿಂದ ಹಾಸಿಗೆ ಹಿಡಿದಿದ್ದರು. ವಿಷಮಜ್ವರ ವದು ; ಬಂದುದು ಬಿಡಲೇ ಇಲ್ಲ. ಅದರಲ್ಲಿಯೆ ಅವರ ಜೀವನದ ಕೊನೆ ಯಾಯಿತು. ಇಂಟರ್ ಪರೀಕ್ಷೆಯಲ್ಲಿ ಪಾಸಾದರೂ, ಮನೆಯ ಹೊಣೆಗಾರಿ ಕೆಯ ಮೂಲಕ ರಾಯರ ವಿದ್ಯಾಭ್ಯಾಸಕ್ಕೂ ಕೊನೆಯಾಯಿತು. ಪ್ರಸ್ಥದ ದಿನವನ್ನು ಮುಂದೆ ನೂಕುವುದಕ್ಕೆ ತಂದೆಯವರ ಮರಣವೂ ರಾಯರಿಗೆ ಒಂದು ಹೊಸ ನೆಪವನ್ನು ಒದಗಿಸಿಕೊಟ್ಟಿತು.

ರಾಯರಲ್ಲಿ ಸಂಸಾರದ ಬಗೆಗೆ ವೈರಾಗ್ಯಭಾವವನ್ನು ಬೆಳೆಯಿಸುತ್ತಲೆ ಆ ವರುಷವೂ ಉರುಳಿಹೋಯಿತು. ಉರುಳಿದ ಆ ವರ್ಷ ರಾಯರ ತಾಯಿಯನ್ನು ಮುಸುಕಿಕೊಂಡಿದ್ದ ಪತಿವಿಯೋಗ ದುಃಖದ ತೆರೆಯನ್ನು ಬಯಲಾಗಿಸುತ್ತ ಮರೆಯಾಯಿತು. “ತನ್ನ ಸಂಸಾರದ ಕೊನೆಯಂತೂ ಆಗಿಬಿಟ್ಟಿತು ; ಮಗನ ಸಂಸಾರದ ಸಡಗರವನ್ನಾದರೂ ನೋಡಿ, ಇದ್ದುದ ರಲ್ಲಿಯೆ ಆನಂದದಿಂದ ಕಾಲಯಾಪನೆ ಮಾಡಬೇಕು ’ ಎಂಬ ಬಯಕೆ ರಾಯರ ತಾಯಿಯವರಲ್ಲಿ ಬೆಳೆಯತೊಡಗಿತು. ದಿನದಿನದ ತಾಯಿಯ ಕಾಟವನ್ನು ತಾಳಲಾರದೆಯೊ, ಸೋದರಮಾವನ ನವಿಯಾದ ಅಂತಃಕರಣ ವನ್ನು ಕಳೆದುಕೊಳ್ಳಬಾರದೆಂದು ಯೋಚಿಸಿಯೊ, ರಾಯರು ಹೆಂಡತಿಯನ್ನು ಕರೆಯಿಸಿದರು. ಹೇಗೊ ಹೇಗೋ ಪ್ರಸ್ಥದ ಸಂಪ್ರದಾಯವನ್ನು ತೀರಿಸಿದರು. ದಾಂಪತ್ಯಜೀವನದೊಂದಿಗೆ ರಾಯರಲ್ಲಿ ಸಂಸಾರವಿರಕ್ತಿಯೆ ಬೆಳೆಯುತ್ತ ನಡೆಯಿತು. ಒಬ್ಬರೇ ಇದ್ದರೆಂದರೆ ಆಯಿತು ; ನೋಟವನ್ನು ಯಾವುದೋ ಒಂದು ಶೂನ್ಯಬಿಂದುವಿನಲ್ಲಿ ಸಿಕ್ಕಿಸಿ ಧ್ಯಾನಸ್ಥರಾಗಿ ಕುಳಿತು ಕೊಳ್ಳುವರು. ರಾಯರ ಆಗಿನ ಆಂತರಿಕ ದರ್ಶನಗಳು ಯಾವರೀತಿಯ ವಿರುತ್ತಿದ್ದುವೋ ಅವರಿಗೇ ಗೊತ್ತು. ಆ ಧ್ಯಾನದ ಕಾಲದಲ್ಲಿ ಮುಖವು

ಚೆಂಬಣ್ಣವನ್ನು ತಾಳಿರುವುದು. ಮೂಗು ಬಿಸಿಯುಸಿರನ್ನು ಹೊರಕ್ಕೆ ಹಾಕುತ್ತಿರುವುದು. ಯಾರದಾದರೂ ಜೊತೆಸಿಕ್ಕಾಗ ಮಾತ್ರ, ರಾಯರ ಬಾಯಿಗೆ ಬಿಡುವಿರುವುದಿಲ್ಲ ; ಯಾವ ರೀತಿಯುಲ್ಲಾದರೂ ಸಂಸಾರ ವಿರಕ್ತಿಯ ಕೊಂಡಾಟ ನಡೆದಿರುವುದು.

ಹೀಗೆಲ್ಲ ಸಂಸಾರವಿರಕ್ತಿಯ ಉಪನ್ಯಾಸಕೊಡುತ್ತಲೆ, ರಾಯರು ತಮ್ಮ ದಾಂಪತ್ಯಜೀವನದ ಮೊದಲಿನ ನಾಲ್ಕು ವರ್ಷಗಳಲ್ಲಿ ಸಂತಾನ ಲಾಭವೆರಡನ್ನು ಹೊಂದಿದರು: ಆದರೆ ಹುಟ್ಟಿದ ಕೂಸುಗಳಿಗೆ ಶ್ರೀಶಂಕರಾ ಚಾರ್ಯರ ಮಾಯಾವಾದದ ಮನವರಿಕೆಯಾಯಿತೋ, ಪೈಷ್ಣವದಾಸರ ವೈರಾಗ್ಯಭಾವವು ಮನದಟ್ಟಾಯಿತೋ ! . . ಹುಟ್ಟಿದದಿನವೇ ಅವು ಈ ಲೋಕವನ್ನು ಬಿಟ್ಟುಹೋದುವು. ' ಈ ಪರತಂತ್ರಭಾರತದ ಕಷ್ಟಮಯ ಜೀವನದಲ್ಲಿ ತಾವೇತಕ್ಕಾಗಿ ಬದುಕಿರಬೇಕು ? ' ಎಂಬ ವೀರವಿಚಾರ ದಿಂದಲೂ ಆ ಕೂಸುಗಳು ಜೀವಬಿಟ್ಟಿರಬಹುದು. ತಂದೆಯಂತೆ ಮಕ್ಕಳು, ಜೊತೆಯಂತೆ ಮತಿ—ಅಲ್ಲವೆ ?

ಎರಡನೆಯದನ್ನು ಹೆತ್ತು ರಂಗಕ್ಕ ಜೀನೆಬಿದ್ದಳು. ದಿನದಿನಕ್ಕೂ ಒಲಹೀನತೆ ಬಲಿಯುತೊಡಗಿತು. ವೈದ್ಯರ ಗುಳಿಗೆಯನ್ನು ನುಂಗಿ, ಡಾಕ್ಟರ ನೀರನ್ನು ಕುಡಿದು, ಎಲ್ಲವನ್ನೂ ಅರಗಿಸಿಕೊಂಡಾದಮೇಲೆ ರೋಗವು ರಂಗಕ್ಕನ ದೇಹವನ್ನೇ ಅರಗಿಸಲಾರಂಭಿಸಿತು. ಮೊದಲಿನ ಎರಡು ಮೂರು ತಿಂಗಳು ಆಕೆ ಸಲ್ಪ ಎದ್ದು ತಿರುಗಾಡುತ್ತಲಿದ್ದಳು. ಬಳಿಕ ಹಾಸಿಗೆ ಹಿಡಿದ ವಳು ಆರೇಳು ತಿಂಗಳವರೆಗೂ ಬಿದ್ದುಕೊಂಡೇ ಇದ್ದಳು. ರಾಯರು ಹೆಂಡತಿಯ ಶುಶ್ರೂಷೆಯಲ್ಲಿ ಸ್ವಲ್ಪವೂ ಹಿಂದೆಮುಂದೆ ನೋಡಲಿಲ್ಲ; ಸೊಸೆಯ ಬೇನೆಯಿಂದ ರಾಯರ ತಾಯಿ ಆಗಾಗ ಕಣ್ಣೀರುಸುರಿಸುವರು; ತಮ್ಮ ಬಾಳನ್ನು ಬೈದುಕೊಳ್ಳುವರು. ಹೆಂಡತಿಯ ರೋಗದಿಂದ ಮಾನವ ಜೀವನದ ಅಸ್ಥಿರತೆಯ ವಿಷಯದಲ್ಲಿ ರಾಯರಿಗೆ ಪ್ರತ್ಯಕ್ಷ ಪ್ರಮಾಣವೊಂದು ದೊರೆತಂತಾಯಿತು; ಅವರಲ್ಲಿಯ ವೈರಾಗ್ಯ ವೃತ್ತಿಯು ಸಸಿಗೆ ನೀರೆರೆದಂತಾ ಯಿತು. ಕೊನೆಗೊಂದು ದಿನ ರಂಗಕ್ಕ ತೀರಿಹೋದಳ

* * *

ಹೆಂಡಿತಿ ಸತ್ತು ತಿಂಗಳು ತಿರುಗುವಷ್ಟರಲ್ಲಿಯೆ ರಾಯರ ತಾಯಿ ಮತ್ತೊಂದು ಮದುವೆಯ ಪ್ರಸ್ತಾಪ ತೆಗೆದರು. ಅದಕ್ಕೆ ರಾಯರು ತಮ್ಮ ಸಂಪೂರ್ಣ ಅಸಮ್ಮತಿಯನ್ನು ವ್ಯಕ್ತಮಾಡಿದರು. ತಾಯಿ ರಾಶಿರಾಶಿಯಾಗಿ ಕಂಬನಿಗರೆದು, ಅತ್ತುಕರೆದು ಹೇಳಿಕೊಂಡರು. ಯಾವ ಉಪಾಯವೂ ರಾಯರ ನಿಶ್ಚಯವನ್ನು ಕದಲಿಸಲಿಲ್ಲ. ಮನೆಗೆ ಬಂದವರೆಲ್ಲರೂ ರಾಯರೆದುರು, ಮೊದಲನೆಯ ಮಾತಾಗಿ ಮದುವೆಯ ಪ್ರಸ್ತಾಪವನ್ನೇ ಎತ್ತುವರು. ಎಲ್ಲರಿಗೂ ರಾಯರು ಕೊಡುತ್ತಿದ್ದ ಖಂಡಿತವಾದ ಉತ್ತರವಿದು : "ಅದೊಂದನ್ನು ಬಿಟ್ಟರೆ ಬೇರೆಯ ವಿಷಯವೇ ಇಲ್ಲವೇ ನಿಮಗೆ ?"

"ರಾಯರು ಬಹುಶಃ ಇನ್ನು ಸಂನ್ಯಾಸ ತೆಗೆದುಕೊಳ್ಳುವರು ಎಂದು ಶ್ರೀಕಂಠಭಟ್ಟರು ಅಲ್ಲಿಯಲ್ಲಿ ಹೇಳಲು ತೊಡಗಿದರು. 'ಇನ್ನೇನು ರಾಯರು ತಾಳ–ತಂಬೂರಿ, ಗೋಪಾಳಬುಟ್ಟಿಗಳನ್ನು ಕೈಕೊಳ್ಳುವರು ಎಂದು ಸೀನಪ್ಪಾಚಾರ್ಯರು ಊರಲ್ಲಿ ಸಾರಲಾರಂಭಿಸಿದರು. ತಮಗೊಬ್ಬ ಒಳ್ಳೆಯ ದೇಶಭಕ್ತರ ಹದಿನಾರಾಣೆಯ ನೆರವು ದೊರೆಯುವದೆಂದು ದೇಶಭಕ್ತರು ಆಶೆಯ ಮಾತನ್ನು ಆಡಲು ತೊಡಗಿದರು. ಈ ಹೇಳಿಕೆ, ಆಡಿಕೆ, ಸಾರಿಕೆಗಳೆಲ್ಲವೂ– ರಾಯರ ಕಡೆಗೆ ಆಶೆಯ ಕಣ್ಣಿಂದ ನೋಡುತ್ತಲಿದ್ದ ಬಳೆದ ಹೆಣ್ಣಿನ ತಾಯ್ತಂದೆಗಳು ರಾಯರ ಹತ್ತಿರ ಸುಳಿಯದಂತೆ– ಸುತ್ತಲೂ ವಿಳುಸುತ್ತಿನ ಬೇಲಿಯನ್ನು ಬಿಗಿದುಬಿಟ್ಟುವು. ರಾಯರು ಈಗ ಪಾತಂಜಲ ಯೋಗದರ್ಶನದ ಅಭ್ಯಾಸವನ್ನು ನಡೆಯಿಸಿದರು. ರಾಯರ ತಾಯಿ, ಮಗನಿಗೆ ಒಳ್ಳೆಯ ಬುದ್ಧಿಯನ್ನು ಕೊಡೆಂದು ಕುಲದೇವತೆಯನ್ನು ಹಗಲಿರುಳೂ ಮೊರೆಯಿಡತೊಡಗಿದರು.

* * *

ಬೇಸಗೆ ಬಂದಿತು. ಊರಲ್ಲಿ ಮದುವೆ–ಮುಂಜಿಗಳ ಸುಗ್ಗಿಯೆ ಎದ್ದುಬಿಟ್ಟಿತು. ಎಲ್ಲೆಲ್ಲಿಯೂ ಮಂಗಲವಾದ್ಯದ ಮೊಳಗು ಕೇಳಲಾರಂಭಿಸಿತು. ರಾಯರ ಸ್ನೇಹಿತ ರಂಗನಾಥನೂ ಈ ಸಲ ವರನಾಗಿ, ವಧುವೊಬ್ಬಳ ಕೈಯನ್ನು ಹಿಡಿಯುವುದಕ್ಕೆ ಸಿದ್ಧನಾಗಿದ್ದ. ರಾಯರ ವೈರಾಗ್ಯದ

ಕೊಂಡಾಟದ ಉಪನ್ಯಾಸಗಳಿಂದ ಇದುವರೆಗೂ ಸಂಸಾರದ ನೊಗವನ್ನು ಸಂದೇಹದೃಷ್ಟಿಯಿಂದ ನೋಡುತ್ತ ಬಂದವನಿವನು. ಮದುವೆ ಮುಗಿಯುವ ವರೆಗೂ ಸ್ನೇಹಿತರೆಲ್ಲರು ತಮ್ಮ ಮನೆಯಲ್ಲಿಯೆ ಇದ್ದುಬಿಡಬೇಕೆಂದು ರಂಗನಾಥನು ಕೇಳಿಕೊಂಡ. ಎಲ್ಲರೂ ಒಪ್ಪಿಕೊಂಡರು; ರಾಯರೊಬ್ಬರು ಮಾತ್ರ ಅಕ್ಷತೆಯ ಕಾಲಕ್ಕೆ ಬಂದುಹೋಗುವೆನೆಂದು ಕ್ಷಮಾಯಾಚನೆ ಯೊಂದಿಗೆ ಹೇಳಿದರು.

*　　　　*　　　　*

ವಧುವು ಅದೇ ಊರಿನದು. ವಧುವಿನ ತಂದೆ ಚೆನ್ನಾಗಿ ಉಳ್ಳವರು. ಮದುವೆ ಅವರ ಮನೆಯಲ್ಲಿಯೆ. ಬೇರೆಬೇರೆ ಕಡೆಯಿಂದ ಬಂದ ನಿಬ್ಬಣಿಗ ರಿಂದ ಮದುವೆಯ ಮನೆಯೆಲ್ಲ ತುಂಬಿಹೋಗಿದ್ದಿತು. ಅಕ್ಷತೆಗೆ ಇನ್ನೂ ಅರ್ಧಗಂಟೆಯಿರುವಾಗಲೆ ರಾಯರು ಗಂಭೀರಭಾವದಿಂದ ಬಂದು, ತಮ್ಮ ಗೆಳೆಯರ ಬಳಗದಲ್ಲಿ ಕುಳಿತುಕೊಂಡರು. ಮದುವೆಯ ಮಂಟಪ, ಗಂಡು, ಹೆಣ್ಣು, ಹೋಮ, ಹವನ, ವೇದಮಂತ್ರ ಇವೆಲ್ಲ ಸೇರಿ, ರಾಯರ ಮೈಮನ ಗಳನ್ನು ಅದೇತಕ್ಕೋ ಒಮ್ಮೆಲೆ ಜುಮ್ಮೆಂದಟ್ಟಿಸಿದುವು. ಬೆರಗುಗಣ್ಣುಗಳ ಅಸ್ಥಿರದೃಷ್ಟಿಯಿಂದ ಅಲ್ಲಿಯ ಸಂನಿವೇಶಗಳನ್ನೆಲ್ಲ ನೋಡಲು ತೊಡಗಿದರು. ಮದುವೆಯ ಮನೆಯ ಒಂದುಬಗೆಯ ಉತ್ತೇಜಕ ವಾಸನೆಯು, ಉಸಿರಾಟ ದೊಂದಿಗೆ ಎಡೆಬಿಡದೆ ಮೂಗಿನಲ್ಲಿ ನುಗ್ಗಿಬರುತ್ತಿದ್ದಿತು.

ವಿವಾಹಮಂಟಪದಲ್ಲಿ ಎಲ್ಲೆಲ್ಲಿಯೂ ಚೆನ್ನೆಯರ ಓಡಾಟವೇ ಓಡಾಟ. ದೂರದೂರದ ನಂಟರು ಬಂದುದರಿಂದ ಓಡಾಡುವ ಹೆಂಗುಸರಲ್ಲಿ ಅನೇಕರವು ಹೊಸಮುಖ. ಮಂಗಲಸಮಯದ ಪ್ರಸನ್ನಭಾವವು ಎಲ್ಲರ ಮುಖಗಳನ್ನೂ ಅರಳಿಸಿದ್ದಿತು. ಅವರಲ್ಲಿಯ ಅನೇಕರ ಚೆಲುವಿಕೆಯು ಬಲುಜನರ ನೋಟಗಳನ್ನು ಸೆಳೆಯುವಂತಹದು. ಅದರಲ್ಲಿಯೂ ಬಣ್ಣ-ಬಣ್ಣದ ಹೊಸ ಹೊಸ ಮಿರುಗಿನ ಸೀರೆ-ಕುಪ್ಪಸಗಳು, ಚಿನ್ನ-ರನ್ನದ ತೊಡವುಗಳು, ತಮ್ಮ ತಮ್ಮಲ್ಲಿಯ ತುಂಟಾಟ-ಹುಡುಗಾಟಗಳಿಂದ ಮೂಡಿದ ಮೆಲುನಗೆಯ ಮಿಂಚು ಇವೆಲ್ಲ ಕೂಡಿ—ಇಲ್ಲದವರಲ್ಲಿಯೂ— ಚೆಲುವನ್ನು ತಂದು ತುಂಬಿದ್ದುವು. ತೆರೆದ ಕಣ್ಣುಗಳಿಂದ ರಾಯರು ಇದೆಲ್ಲ ಚೆಲುವಿನ ರಾಜ್ಯವನ್ನು ನೋಡಿಯೆ ನೋಡುತ್ತಿದ್ದರು.

ರಾಯರ ಸ್ನೇಹಿತರ ಹೆಂಡಂದಿರು ಕೆಲವರು, ತಮ್ಮ ಬೆಡಗು-ಬಿಯ್ಯಾರಗಳನ್ನು ತಮ್ಮ ಗಂಡಂದಿರು ಆತುರಭಾವದಿಂದ ನಿರೀಕ್ಷಿಸುವರೊ ಇಲ್ಲವೊ ಎಂಬುದನ್ನು ಪರೀಕ್ಷಿಸುವುದಕ್ಕಾಗಿಯೇನೊ, ಆಗಾಗ ಕಳ್ಳ ನೋಟದಿಂದ ಗುಂಪಿನಕಡೆಗೆ ನೋಡುತ್ತ— ನಿಮಿಷ ನಿಮಿಷಕ್ಕೊಮ್ಮೆ ಅಲ್ಲಿ ಸುಳಿಸುಳಿದು ಹೋಗುವರು. ತಮ್ಮ ಕಳ್ಳನೋಟವನ್ನು ಇನ್ನಾರಾದರೂ ನೋಡಿದರೆಂಬುದು ತಿಳಿದಾಗಲೆಲ್ಲ, ನಾಚಿಕೆ ಅವರ ಕೆಳದುಟಿಯನ್ನು ಕಚ್ಚಿಸುವುದು; ಕೆನ್ನೆಗಳ ಕೆಂಪನ್ನು ಹೆಚ್ಚಿಸುವುದು. ರಾಯರ ಸೂಕ್ಷ್ಮದೃಷ್ಟಿ ಅಲ್ಲಿಯ ಚೆನ್ನೆಯರ ಪ್ರತಿಯೊಂದು ಲೀಲೆಯನ್ನೂ ವಿಮರ್ಶಿಸುತ್ತಿದ್ದಿತು. ಈ ವಿಮರ್ಶೆಯು ಸ್ನೇಹಿತರೊಂದಿಗೆ ಆಡಬೇಕಾಗಿದ್ದ ರಾಯರ ಮಾತುಗಳನ್ನು ಹೊರಕ್ಕೆ ಹೊರಡಿಸದಾಯಿತು. ಒಂದೆರಡು ಸಲವಂತೂ ಸ್ನೇಹಿತರು ಕೇಳಿದುದೆ ಒಂದು, ಅದಕ್ಕೆ ರಾಯರು ಉತ್ತರ ಕೊಟ್ಟುದೆ ಒಂದು; ಹೀಗಾಗಿ ರಾಯರಿಗೆ ಗೊಂದಲಕ್ಕಿಟ್ಟಿತು.

ಪಾಣಿಗ್ರಹಣವಿಧಿಯು ಮುಗಿದು, ಬಂದಿದ್ದ ಅತಿಥಿಗಳೆಲ್ಲರೂ ಮನೆಗೆ ಹೊರಟರು. ರಾಯರೂ ಹೊರಟುಬಿಡಬಹುದೆಂದು ಗೆಳೆಯರೆಲ್ಲರಿಗೂ ಎನಿಸಿದ್ದಿತು. ಆಗ ರಾಯರು ಹೇಳಿದರು:

“ರಂಗನ ಕೂಡ ಮಾತುಕತೆಯಾಡಲಿಕ್ಕೆ ಆಗಲೆ ಇಲ್ಲ. ಈಗ ಮನೆಗೆ ಹೋಗಿಯಾದರೂ ಮಾಡುವ ಕೆಲಸವೇನಿದೆ? ಮದುವಣಿಗನಿಗೆ ಬಿಡುವು ದೊರೆಯುವವರೆಗೂ ಇಲ್ಲಿಯೆ ಕುಳಿತರಾಯಿತು. ಮತ್ತೆ.. ನನ್ನದೇನಾದರೂ ಇಲ್ಲಿ ಕೆಲಸವಿದ್ದರೆ ಹೇಳಿರಿ! ನಮ್ಮ ರಂಗನಾಥನ ಮದುವೆಯ ಕಾರ್ಯದಲ್ಲಿ ನಾನು ಪಾಲುಗಾರನಾಗದಿದ್ದರೆ ಹೇಗೆ?”

ಅಂದು ರಾಯರು ಎಲ್ಲ ಸ್ನೇಹಿತರೊಂದಿಗೂ ತುಂಬ ಸಲುಗೆಯಿಂದ ಮಾತನಾಡುತ್ತಿದ್ದರು. ನಗೆಯಲ್ಲಿಯ ಬಿಗುಹೂ ಸಾಕಷ್ಟು ಸಡಿಲಾಗಿದ್ದಿತು.

* * *

ಮದುವೆಯ ಮರುದಿನದ ಮದುಮಕ್ಕಳ ಉರುಟಣೆಯನ್ನು ನೋಡಲಿಕ್ಕೆಂದು ರಂಗನಾಥನ ಸ್ನೇಹಿತರೆಲ್ಲರೂ ಬಂದರು. ಅವರಲ್ಲಿ ರಾಯರ ಮುಖವೂ ಕಾಣಿಸುತ್ತಿದ್ದಿತು. ಎಲ್ಲರಿಗೂ ಕುಳಿತುಕೊಳ್ಳುವುದಕ್ಕೆ ಉಚಿತಸ್ಥಳದ ಏರ್ಪಾಡು ಮೊದಲೆ ಆಗಿದ್ದಿತು.

ಹೆಂಗುಸರೆಲ್ಲರಿಗೂ 'ಸ್ವಾತಂತ್ರ್ಯದಿನ' ವದು. ಎಲ್ಲರೂ ಬೇಕಾದಹಾಗೆ ನಕ್ಕು ಕೆಲೆದು ಮಾತನಾಡುತ್ತಿದ್ದರು. ಪೆಟ್ರೋಮ್ಯಾಕ್ಸಿನ ನಿಚ್ಚಳವಾದ ಬೆಳಕಿನಲ್ಲಿ, ನಾರಿಯರ ಗುಂಪಿನ ಶೃಂಗಾರವೈವಿಧ್ಯವು ಎದ್ದುಕಾಣುತ್ತಿದ್ದಿತು. ಅನೇಕರ ಮೂಗುಬಟ್ಟು-ಬೆಂಡೋಲೆಗಳಲ್ಲಿಯ ಹರಳುಗಳು ತೊಳತೊಳಗಿ, ಸುತ್ತಲೂ ಕಿರಣಗಳನ್ನು ಕಳುಹುತ್ತಿದ್ದುವು. ಮದುವಣಿಗರ ಬಳಿಯಲ್ಲಿ ಹಚ್ಚಿಟ್ಟಿದ್ದ ಊದುಬತ್ತಿಗಳ ಗಿಡವು, ದಿವಾಣಖಾನೆಯ ವಾತಾವರಣದಲ್ಲೆಲ್ಲ ತನ್ನ ಅವಿರತವಾದ ಬಲ್ಗಂಪನ್ನು ಹರಡುತ್ತಿದ್ದಿತು. ಪನ್ನೀರು-ಗಂಧದೆಣ್ಣೆಗಳ ಮೆಲುಗಂಪೂ ಆಗಾಗ ತೆರೆತೆರೆಯಾಗಿ ಬಂದು ಮೂಗನ್ನು ಸೋಂಕುತ್ತಿದ್ದಿತು. ರಾಯರ ನೋಟದಲ್ಲಿ ಆಗ ಒಂದುಬಗೆಯ ಚಾಂಚಲ್ಯ; ಮುಖದಲ್ಲಿ ಒಂದು ವಿಧದ ಗಾಬರಿ. ಎದೆಯು ದಡದಡಿಸುತ್ತಿದ್ದಿತೇನೋ!

ಮದುವಣಗಿತ್ತಿ ನಾಚುತ್ತ ನಲುಗುತ್ತ ಎದ್ದು ನಿಂತಳು. ಹುಡುಗಿ ಸ್ಫುರದ್ರೂಪಿ. ಬೆಳೆದ ಹೆಣ್ಣಾದುದರಿಂದ ಅಂಗಾಂಗಗಳಿಗೆ ತಕ್ಕಮಟ್ಟಿನ ಪೂರ್ಣತೆ ಬಂದಿದ್ದಿತೆಂದೆ ಹೇಳಬಹುದು. ತೆಳ್ಳಗಿನ ರೇಶಿಮೆಯ ಸೀರೆ-ಕುಪ್ಪಸಗಳನ್ನು ಉಟ್ಟು ತೊಟ್ಟುದರಿಂದ, ಮೈಯ ತುಂಬುತನವು ಅಲ್ಲಲ್ಲಿ ಚೆನ್ನಾಗಿ ಸ್ಫುಟಗೊಂಡಿದ್ದಿತು. ಚದುರೆಯರನೇಕರು ಸೇರಿ ಹುಡುಗಿಗೆ ಅಂದವಾಗಿ ಅಲಂಕಾರವನ್ನು ಮಾಡಿದ್ದರು. ಬಿಡುಮುಡಿಯ ಮೇಲೆ ಕುಳಿತ ಅರಳುಮಲ್ಲಿಗೆಯ ಮಾಲೆಯ ಹೂಗಳು, ತಮ್ಮ ಬಾಳಿನ ಸಾಫಲ್ಯಕ್ಕಾಗಿ ಒಂದೊಂದೂ ಎಳನಗೆಯನ್ನು ತಳೆದಿರುವಂತೆ ಕಾಣುತ್ತಿದ್ದುವು.

ಗೆಳೆಯರ ಬಳಗದಲ್ಲಿ ಬಗೆಬಗೆಯ ಹರಟೆ ನಡೆದಿದ್ದಿತಾದರೂ ರಾಯರು ಮಾತ್ರ ಮೌನಿಗಳು; ಅವರು ಶ್ರೀನಾರಾಯಣಸ್ವರೂಪಿಯಾದ ವರನನ್ನೊಮ್ಮೆ, ಶ್ರೀಲಕ್ಷ್ಮೀಸ್ವರೂಪಿಣಿಯಾದ ವಧುವನ್ನೊಮ್ಮೆ ಎವೆಯಿಕ್ಕದೆ ನೋಡುತ್ತ ಕುಳಿತಿದ್ದರು. ನಡುನಡುವೆ ರಾಯರ ಕಣ್ಣುಗಳು ಧ್ಯಾನ-ಮುದ್ರೆಯನ್ನು ತಳೆದು, ಯಾವುವೊ ಆಂತರಿಕ ದರ್ಶನಗಳನ್ನು ಕಾಣುತ್ತಿದ್ದುವು. ಆಗ ಬಾಯಿಂದ ತುಂಡು-ತುಂಡಾದ ನಿಟ್ಟುಸಿರೊಂದು ಹೊರಕ್ಕೆ ಹೊರಡುತ್ತಿದ್ದಿತು. ಉರುಟಣೆ ಮುಗಿದು ಆರತಿ ನಡೆಯುವ ವರೆಗೂ

ರಾಯರ ಬಾಯಿಂದ ಒಂದು ನುಡಿಯೂ ಹೊರಬಿದ್ದಿರಲಿಲ್ಲ. ಕೊನೆಗೆ ಒಂದೆ ಒಂದು ಮಾತನ್ನಾಡಿದರು.

"ರಂಗನ ಹೆಂಡತಿ..ನಿನ್ನೆಯ ದಿನ..ಅಷ್ಟೊಂದು ಚೆಲುವೆಯಾಗಿ ಕಾಣಲಿಲ್ಲ..ಅಲ್ಲವೆ?"

ರಾಯರಿಗೆ ಉತ್ತರವಾಗಿ ಯಾರೋ ನುಡಿದರು :

"ಹುಡುಗನಿಗೆ ಹುಡುಗಿ ಮದುವೆಯ ದಿನವೆ ಚೆನ್ನಾಗಿ ಕಾಣಿಸ ಬಾರದೆಂದು, ಗ್ರಾಮದೇವತೆಯ ವೇಷ ಹಾಕಿರುತ್ತಾರೆ; ನಮ್ಮ ಹಿರಿಯರು ಎಲ್ಲವನ್ನೂ ತಿಳಿದುಕೊಂಡೇ ಮಾಡಿದ್ದಾರೆ ನೋಡಿ!" ಒಮ್ಮೆಲೆ ಗೆಳೆಯರ ಬಳಗದಲ್ಲಿ ನಗೆಯು ಲಹರಿಯೆದ್ದಿತು; ರಾಯರೂ ಮನವಾರೆ ನಕ್ಕರು.

* * *

ರಂಗನಾಥನ ಮದುವೆಯಾಗಿ ಎರಡುಮೂರು ದಿನಗಳ ವರೆಗೆ, ರಾಯರು ಹೆಚ್ಚಾಗಿ ಯಾರ ಕಣ್ಣಿಗೂ ಬಿದ್ದಿರಲಿಲ್ಲ. ಇಂದು ಸ್ಟೇಷನ್ ದಾರಿಯಲ್ಲಿ ಒಬ್ಬರೆ ಅಡಿಯಾಡುತ್ತ ನಡೆದಿದ್ದರು. ಮುಖದ ಲಕ್ಷಣವನ್ನು ನೋಡಿದರೆ ಯಾರ ಜೊತೆಯೂ ಅವರಿಗೀಗ ಬೇಕಾಗಿರಲಿಲ್ಲವೆಂದು ತೋರು ತ್ತಿದ್ದಿತು. ಆದರೆ ದಾರಿಯಲ್ಲಿ ನಾಲ್ಕಾರು ಜನ ಗೆಳೆಯರು ರಾಯರನ್ನು ಸಂಧಿಸಿದರು. ಹಗಲು ಐದುವರೆ ಗಂಟೆಯಾಗಿರಬಹುದು; ಸ್ಟೇಷನ್ನಿಗೆ 'ಪ್ಯಾಸೆಂಜರ್ ಟ್ರೇನು' ಬರುವ ಸಮಯ. ಎಲ್ಲರೂ ಸೇರಿ ಸ್ಟೇಷನ್ ಕಡೆಗೇ ಹೊರಡೋಣವೆಂದು ಮುಂದುವರಿದರು. ಇವರು ಸ್ಟೇಷನ್ನು ತಲ್ಪುವುದರಲ್ಲಿಯೆ ಟ್ರೇನು ಬಂದು ಪ್ಲ್ಯಾಟ್‌ಫಾರ್ಮಿನ ಮೇಲೆ ನಿಂತಿದ್ದಿತು. ಜನರು ಇಳಿದಿಳಿದು ಹೊರಕ್ಕೆ ಬರುತ್ತಿದ್ದರು.

ಗದ್ದಲವೆಲ್ಲ ಮುಗಿದ ಮೇಲೆ—ಎಲ್ಲರಿಗಿಂತ ಹಿಂದಿನಿಂದ—ತರುಣಿ ಯೊಬ್ಬಳು ಹೊರಕ್ಕೆ ಬಂದಳು. ಜೊತೆಗೆ ವಯಸ್ಕರಾದ ಗೃಹಸ್ಥರೊಬ್ಬರು ಇದ್ದರು. ವಯಸ್ಸು ಇಪ್ಪತ್ತು ಇಪ್ಪತ್ತೊಂದರ ಒಳಗೆ ಹೊರಗೆ ಇರಬಹು ದವಳಿಗೆ. ಸೃಷ್ಟಿಕರ್ತನು ಬೇಕಾದುದಕ್ಕಿಂತ ಹೆಚ್ಚಾಗಿಯೆ ಅವಳಲ್ಲಿ ಚೆಲುವನ್ನಿರಿಸಿದ್ದ; ಮತ್ತೆ ಆ ಚೆಲುವನ್ನು ಇನ್ನಿಷ್ಟು ಮೆರೆಯಿಸಿ ತೋರಿಸು ವಂತೆ ಉಡಿಗೆ-ತೊಡಿಗೆ ಮಾಡಿಕೊಳ್ಳುವ ಚೆದುರನ್ನೂ ಕೊಟ್ಟಿದ್ದನೆಂದು

ತೋರುವುದು. ಪ್ರವಾಸದ ಗಲಾಟೆಯಲ್ಲಿ ಮುಡಿಯು ಸಡಲಿ ಮುಂಗುರುಳು ಚೆದರಿದ್ದರೂ ಮೊಗದ ಸೊಬಗು ಕಡಿಮೆಯಾಗಿರಲಿಲ್ಲ. ದೂರದ ದಾರಿಯ ಶ್ರಮದಿಂದ ಬಳಲಿದ ಭಾವದವಳಾಗಿದ್ದರೂ ಕೆನ್ನೆ-ತುಟಿಗಳ ಕೆಂಪು ಕಡಿಮೆಯಾಗಿರಲಿಲ್ಲ. ರಾಯರು ಅವಳಲ್ಲಿ ನೆಡಿಸಿದ್ದ ತಮ್ಮ ಮೊದಲ ನೋಟವನ್ನೇ ಕಿತ್ತುಕೊಳ್ಳಬೇಕಾದರೆ ಗೆಳೆಯರ ಕಣ್ಣುಸನ್ನೆಯ ಕೊಂಕು-ನಗೆಯು ಕಾರಣ ಬೇಕಾಯಿತು. ಗೊಂದಲಗೊಂಡ ದನಿಯಲ್ಲಿ ರಾಯರು ಕೇಳಿದರು :

" ಈ ಹೆಣ್ಣುಮಗಳು ಯಾರು ? "

ಪರಿಹಾಸದ ದನಿಯಲ್ಲಿ ಒಬ್ಬ ನುಡಿದ :

" ಇರಬಹುದು..ಯಾವನಾದರೂ ಒಬ್ಬ ತಂದೆಯ ಮಗಳು; ಯಾವನಾದರೂ ಒಬ್ಬ ಗಂಡನ ಹೆಂಡತಿ ! "

ಅವಳನ್ನರಿತವನೊಬ್ಬ ಮಾತನಾಡಿದ.

" ತಂದೆಗೆ ಮಗಳಾಗಿದ್ದುದೇನೊ ಸರಿ ! ಗಂಡನಿಗೆ ಹೆಂಡತಿ ಇನ್ನು ಮೇಲೆ ಆಗಬೇಕು! "

ರಾಯರು ಆತುರದ ದನಿಯಲ್ಲಿ ಕೇಳಿದರು :

" ಏನು··ಇವರು ನಿಮಗೆ ಗೊತ್ತೇ ? ಇನ್ನೂ ಇವಳಿಗೆ ಮದುವೆ ಯಿಲ್ಲವೇ ? "

" ನಮ್ಮ ವಕೀಲ ಮಾಧವರಾಯರಿಲ್ಲವೇ ? ಆ ಮುದುಕ ಅವರ ಸೋದರಮಾವ; ಹುಡುಗಿ ಮುದುಕನ ಮಗಳು! "

" ಹುಡುಗಿಯೇನು ! ಹೆಂಗುಸೆಂದು ಹೇಳಬಾರದೇ ? "

" ಮದುವೆಯಾಗುವವರೆಗೂ ಹೆಂಗುಸರೆಲ್ಲ ಹುಡುಗಿಯರೇ ! ಏನು ರಾಯರೇ ! "

ರಾಯರ ಕಣ್ಣು, ಕಿವಿ, ಮನಸ್ಸು, ಬುದ್ಧಿ ಎಲ್ಲವೂ ಅಂತರ್ಮುಖವಾಗಿದ್ದುವು. ಗೆಳೆಯನ ಕೂಗಿಗೆ ಬೆಚ್ಚಿಬಿದ್ದವರಾಗಿ ಒಣಗಿದ ದನಿಯಲ್ಲಿ ಅವರು ಹೇಳಿದರು: " ಅಷ್ಟೇ ಸರಿ ! "

ಸ್ಟೇಷನ್ನಿನಿಂದ ಮನೆಗೆ ಮರಳುವಾಗ ಆ ಹುಡುಗಿಯ ವಿಚಾರದಲ್ಲಿ ರಾಯರಿಗೆ ಗೊತ್ತಾದ ಸಂಗತಿಯಿಷ್ಟು :

" ಹುಡುಗಿಯ ತಂದೆ ಜಮ್‌ಷೇದ್‌ಪುರದಲ್ಲಿ ಕೆಲಸಕ್ಕೆ ಇದ್ದಾರೆ. ಸಂಪ್ರದಾಯವಂತರಾದರೂ ಅನುಕೂಲ ವರನನ್ನು ಹುಡುಕುವುದಕ್ಕಾಗದೆ ಮಗಳನ್ನು ಬಳೆಯಿಸಿದರು. ಹುಡುಗಿ ಹೆಚ್ಚಾಗಿ ಕಲಿತವಳಲ್ಲವೆಂದು ಸುಧಾರಕರಾರೂ ಮದುವೆಗೆ ಸಮ್ಮತಿಸಲಿಲ್ಲ. ಬಳೆದ ಹುಡುಗಿಯಾದುದರಿಂದ ಸಂಪ್ರದಾಯವಂತರಾರೂ ಸಿದ್ಧರಾಗಲಿಲ್ಲ. ಬೇಗನೆ ಹುಡುಗಿಯ ಮದುವೆ ಮಾಡಬೇಕೆಂದು ತಂದೆ ಬಾಯ್‌ಬಿಡುತ್ತಿದ್ದಾನೆ. ಈಗ ವರ-ಸಂಶೋಧನಕ್ಕಾಗಿಯೆ ತಿಂಗಳ ರಜೆಪಡೆದುಕೊಂಡು ಇಲ್ಲಿಗೆ ಬಂದಿದ್ದಾನೆ. "

ಕೇಳಿದ ಗೆಳೆಯರಲ್ಲಿ ಒಬ್ಬನು ಅಣಕದ ದನಿಯಲ್ಲಿ ನುಡಿದ:

" ಪಾಪ ! ಈ ಹುಡುಗಿಯನ್ನು ಪ್ರತ್ಯಕ್ಷವಾಗಿ ಯಾರೂ ನೋಡಿರಲಿಕ್ಕಿಲ್ಲ; ಎಂತಲೆ ಆ ಸುಧಾರಕರೂ ಸಂಪ್ರದಾಯವಂತರೂ ಇವಳನ್ನು ಬಿಟ್ಟಿದ್ದಾರೆ. "

ಈಗ ನಕ್ಕ ರಾಯರ ನಗೆಯು ಒಳಗಿನೊಳಗಿಂದ ಹೊರಟುದಾಗಿತ್ತು.

* * *

ರಾಯರ ಮನೆಯ ಒಕ್ಕಲುಗಿತ್ತಿ ನೀಲಿ ಸ್ವಲ್ಪ ಬೆಡಗು-ಬಿನ್ನಾಣದಾಕೆ. ಕಣ್ಣು, ಮೂಗು ಕೊಂಚ ಚೆನ್ನಾಗಿದ್ದುದರಿಂದ ರತಿದೇವಿಯ ಹೆಮ್ಮೆಯವಳಿಗೆ. ಎಷ್ಟೋ ಸಲ ನೀಲಿ ಇಲ್ಲದ ನೆಪಗಳನ್ನು ತೆಗೆದು, ತಾನಾಗಿಯೆ ರಾಯರನ್ನು ಮಾತನಾಡಿಸುತ್ತ ಬರುವಳು; ಆದರೆ ರಾಯರ ಗಾಂಭೀರ್ಯ ಅವಳೊಂದಿಗೆ ಹೆಚ್ಚಿನ ಮಾತುಗಳನ್ನೆ ಆಡಗೊಡುತ್ತಿರಲಿಲ್ಲ. ಇತ್ತೀಚೆಗಿನ ಎರಡು ದಿನಗಳಿಂದ ರಾಯರು ನೀಲಿಯೊಂದಿಗೆ ಸಲುಗೆಯಿಂದ ಮಾತುಕತೆಯಾಡುವರು; ಏನನಾದರೂ ನಗೆಯಾಟವಾಡುವರು. ನೀಲಿಗೆ ರಾಯರ ಈ ರೀತಿ ತೀರ ಹೊಸಬಗೆಯದಾಗಿ ಕಂಡಿತು; ಸಮಾಧಾನ ಬೆರೆತ ಬಿಂಕವು ಅವಳ ಮನಸ್ಸನ್ನಾವರಿಸಿತು.

ತಾಯಿಯವರಿಗೆ ರಾಯರ ರೀತಿ-ನೀತಿಗಳಲ್ಲಿ ಹೆಚ್ಚಿನ ಪರಿವರ್ತನವೇನೂ ಕಂಡುಬರಲಿಲ್ಲ. ಏಕೆಂದರೆ ಮನೆಯಲ್ಲಿ ಯಾರೂ ಇಲ್ಲದಿದ್ದಾಗ

ಎಂದಿನಂತೆಯೇ ಮಗನು ಧ್ಯಾನಮಗ್ನನಾಗಿ ಕುಳಿತಿರುತ್ತಿದ್ದ. ಏನನ್ನಾದರೂ ಮಾತನಾಡಿಸಿದರೆ ಅದರ ಎಚ್ಚರು ಕೂಡ ಇರುತ್ತಿರಲಿಲ್ಲ. ಇದರಿಂದ ತಾಯಿಗೆ ತುಂಬ ಅಸಮಾಧಾನ.

* * *

ಇಂದು ರಾತ್ರಿಯ ಊಟಕ್ಕೆ ಕುಳಿತಾಗ ತಾಯಿ, ರಾಯರಿಗೆ ಹೇಳಿದರು :

" ವಕೀಲ ಮಾಧವರಾಯರ ತಾಯಿ ಇಂದು ನಮ್ಮ ಮನೆಗೆ ಬಂದಿದ್ದರು! "

ರಾಯರು ಮಾತನ್ನೇನೂ ಆಡದೆ ತಾಯಿಯ ಕಡೆಗೆ ಮುಖವೆತ್ತಿ ನೋಡಿ, 'ಸರಿ ಬಂದಿರಬಹುದು' ಎಂಬರ್ಥದ ಗೋಣನ್ನು ಹಾಕಿದರು. ತಾಯಿ ಮುಂದೆ ನುಡಿದರು :

" ಅವರ ತಮ್ಮ ನಿನ್ನೆಯ ದಿನ ಇಲ್ಲಿಗೆ ಬಂದಿದ್ದಾರಂತೆ··ಜಮ್‌ಷೇದ್ ಪುರದಿಂದ ! "

ಆತುರದ ಧನಿಯಲ್ಲಿ ರಾಯರು ಕೇಳಿದರು :

" ಜಮ್‌ಷೇದ್ ಪುರದಿಂದ ? "

" ಹುಂ, ಜಮ್‌ಷೇದ್‌ಪುರದಿಂದಲೇ ! ಅವರಿಗೆ ಮಗಳೊಬ್ಬಳಿದ್ದಾಳಂತೆ; ಮದುವೆಗಾಗಿದ್ದಾಳಂತೆ. ಹುಡುಗಿ ಬಲು ಚೆಲುವೆಯಂತೆ. ಅವರು ವರಸಂಶೋಧನಕ್ಕಾಗಿ ಮಗಳನ್ನು ಕರೆದುಕೊಂಡೇ ಇಲ್ಲಿಗೆ ಬಂದಿದ್ದಾರಂತೆ ! "

ದಡದಡಿಸುವ ಎದೆಯಿಂದ ರಾಯರು ಕೇಳಿದರು :

" ಏನು ? ಇಲ್ಲಿ ಯಾರಿಗಾದರೂ ಕೊಡಬೇಕೆಂದಿದ್ದಾರೆಯೇ ? "

" ಅದಕ್ಕೆಂತಲೇ ಮಾಧವರಾಯರ ತಾಯಿ ನಮ್ಮ ಮನೆಗೆ ಬಂದಿದ್ದರು. 'ಹುಡುಗಿ ನಿಮ್ಮ ಸೊಸೆಯಾಗುವುದಕ್ಕೇ ಸರಿ' ಎಂದು ಹೇಳಿದರು. ಆದರೇನು ? ದೈವವೊಂದು ನಮ್ಮ ಮಾತನ್ನು ಕೇಳಬೇಕಲ್ಲವೇ ? "

ರಾಯರು ಮಂಕು ಕವಿದಂತೆ ಕುಳಿತುಬಿಟ್ಟರು. ತಾವು ಊಟಕ್ಕೆ

ಕುಳಿತಿದ್ದೆವೆಂಬುದರ ಅರಿವೇನೂ ಇದ್ದಂತೆ ಕಾಣಲಿಲ್ಲ. ತಾಯಿ ಆಶೆಯ ದನಿಯಲ್ಲಿ ಹೇಳಿದರು :

" ತಾಯಿಯಾದುದಕ್ಕೆ ನನ್ನದೊಂದು ಮಾತನ್ನು ನಡೆಯಿಸಿಕೊಡು ಮಗು ! "

" ಅದಾವುದಮ್ಮಾ ನಿನ್ನ ಮಾತು ? " ರಾಯರು ಉತ್ಸಾಹದಿಂದ ಕೇಳಿದರು.

" ಇನ್ನೇನೂ ಇಲ್ಲ ; ನೀನು ಆ ಹುಡುಗಿಯನ್ನು ಮದುವೆಮಾಡಿ ಕೊಂಡುಬಿಡು ! ಪಾಪ, ಮುದುಕಿ ಎಷ್ಟೊಂದು ಹೇಳಿಕೊಂಡು ಹೋಗಿದ್ದಾಳೆ! "

ದೊಡ್ಡದೊಂದು ಹೊರೆಯನ್ನು ಇಳುಹಿದಷ್ಟು ರಾಯರ ಮನಸ್ಸು ಹಗುರಾಗಿದ್ದಿತು. ನಗೆಯಾಟದ ದನಿಯಲ್ಲಿ ಅವರು ತಾಯಿಗೆ ಹೇಳಿದರು :

" ಆ ಹುಡುಗಿ ನನಗೆ ಗೊತ್ತಮ್ಮಾ ! ಆಕೆ ದೊಡ್ಡವಳಾಗಿಯೆ ಈಗ ಆರೇಳು ವರ್ಷಗಳಾದುವಂತೆ ! "

" ಅದಕ್ಕೇನೋ ! ಎಲ್ಲೆಲ್ಲಿಯೂ ನಡೆದೇಬಿಟ್ಟಿದೆಯಲ್ಲ ! ಮೊನ್ನೆ ರಂಗನಾಥನ ಮದುವೆಯೆ ಆಗಲಿಲ್ಲವೇ ? ದೊಡ್ಡವಳಾಗಿ ವರ್ಷೆರಡು ವರ್ಷವಾಗಿದ್ದರೇನು ? ಆರೇಳು ವರ್ಷವಾಗಿದ್ದರೇನು ? ಬೆಳೆದ ವರನಿಗೆ ಬೆಳೆದ ಕನ್ಯೆಯೆ ಬೇಕಲ್ಲವೇ ? "

ರಾಯರು ನನುವೇಳೆ ಸುಮ್ಮಗೆ ಕುಳಿತು ಕೇಳಿದರು:

" ಹಾಗಾದರೆ ನಿನ್ನ ಒಪ್ಪಿಗೆಯೂ ಇದೆಯೆನ್ನು ಇದಕ್ಕೆ ! "

" ಒಪ್ಪಿಗೆಯಷ್ಟೇ ಅಲ್ಲ, ಒತ್ತಾಯವಿದೆ. "

ತೃಪ್ತಿಯ ದನಿಯಲ್ಲಿ ರಾಯರು ಹೇಳಿದರು :

" ಇಷ್ಟು ದಿನ ನಾನೂ ವಿಚಾರವನ್ನು ಮಾಡಿದೆ. ಅಮ್ಮಾ ! ತಾಯಿಯ ಅಪ್ಪಣೆಯನ್ನು ಮೀರಿ ನಡೆಯುವುದು ಪಾಪವೆಂದು ನನಗೆ ಎನಿಸುತ್ತಿದೆ. "

ಮುದುಕಿಯ ಮುಖದ ಮೇಲೆ ಗೆಲುವಿನ ನಗೆ ಆಟವಾಡಿತು. ಮಾತು ಕೇಳುವ ಮಗನನ್ನು ಕೊಟ್ಟುದಕ್ಕಾಗಿ, ದೇವರನ್ನು ಆಕೆ ಎಷ್ಟೆಷ್ಟು

ಕೊಂಡಾಡಿದಳು. ಹೃದಯದಲ್ಲಿ ಹಿಡಿಸಲಾರದಿದ್ದ ಹಿಗ್ಗನ್ನು ಹೊರಕ್ಕೆ ಹಾಕುವುದಕ್ಕಾಗಿ 'ಹನುಮಂತಾ' 'ಹನುಮಂತಾ' ಎಂದು ಮನೆಯಾಳನ್ನು ಕೂಗುತ್ತ ಹೊರಕ್ಕೆ ಹೊರಟರು. ರಾಯರ ಹೊಟ್ಟೆ ಒಂದು ತುತ್ತು ಕೂಡ ಹಿಡಿಸದಂತೆ ತುಂಬಿಬಿಟ್ಟಿದ್ದಿತು.

* * *

ಮರುದಿಸವೆ ಊರಲ್ಲಿ ಎಲ್ಲೆಲ್ಲಿಯೂ ರಾಯರ ಎರಡನೆಯ ಮದುವೆಯ ಸುದ್ದಿ. ಶ್ರೀಕಂಠಭಟ್ಟರನ್ನು ಯಾರೋ ಅಣಕದ ಮಾತಿನಲ್ಲಿ ಕೇಳಿದರು:

"ರಾಯರು ಸಂನ್ಯಾಸವನ್ನು ಎಂದು ತೆಗೆದುಕೊಳ್ಳುತ್ತಾರೆ ಭಟ್ಟರೆ!"

ನಾಲಗೆಯೊಣಗಿದ ಭಟ್ಟರಿಗೆ ಉತ್ತರ ಕೊಡಲಿಕ್ಕೇ ಬರಲಿಲ್ಲ.

ತಮ್ಮನ್ನು ಏಡಿಸಿ ನುಡಿದವರಿಗೆಲ್ಲ ಸೀನಪ್ಪಾಚಾರ್ಯರು ಸಮಾಧಾನವನ್ನು ಹೇಳುತ್ತಿದ್ದುದು ಹೀಗೆ :

"ಏನ್ಮಾಡರೂ ನೋಡಿ, ತಾಯಿಯ ಮಾತನ್ನು ಮೀರುವುದಕ್ಕೆ ಆದೀತೇ? 'ಮಾತೃದೇವೋಭವ' ಎಂದು ನಮ್ಮ ಶ್ರುತಿಯೇ ಹೇಳುವುದಿಲ್ಲವೆ?"

ಸೀನಪ್ಪಾಚಾರ್ಯರ ಹಿರಿಯ ಮಗನೆ ಅವರಿಗೆ ಸರಿಯಾದ ಉತ್ತರ ಕೊಟ್ಟ :

"ಹಿಂದಿನ ಕಾಲದ ಶ್ರುತಿಯಲ್ಲಿ 'ಮಾತೃದೇವೋಭವ!' ಎಂದು ಹೇಳಿರಬಹುದು ಅಪ್ಪಾ! ಆದರೆ.. ಇಂದಿನ ಕಾಲದ ಕೃತಿಯಲ್ಲಿ 'ಮದುವೆ ದೇವೋಭವ!' ಎಂದು ಹೇಳಿದೆ."

ಮಗನ ಮಾತು ಅರ್ಥವಿಲ್ಲದುದೆಂದೇನೂ ಆಚಾರ್ಯರಿಗೆ ಎನಿಸಿರಲಾರದು. ಬರೀ ಹುಚ್ಚುನಗೆಯೊಂದನ್ನವರು ನಕ್ಕುಬಿಟ್ಟರಿಷ್ಟೇ!

---

# ಕಾಣದ ಕೈ !

೧

ಬೇಕಾದಂತಹ ಊಳಿಗವನ್ನೆಲ್ಲ ಮಾಡಬಹುದು; ಆದರೆ ಹಳ್ಳಿಯ ಕುಲಕರಣಿಯಾಗುವುದೆಂದರೆ ಹೊಲ್ಲದ ಕೆಲಸ. ಕುಲಕರಣಿ ಎಂತಹ ಕುಲೀನನಿರಲಿ, ಎಷ್ಟೇ ಕಲಿತವನಿರಲಿ, ಗೌರವಶಾಲಿಯಿರಲಿ, ವಯಸ್ಸು ಹೋದವನಿರಲಿ, ಹತ್ತುರೂಪಾಯಿ ಸಂಬಳದ ಪೋಲೀಸ ಜವಾನನಿಗೆ ಕೂಡ ಹೆದರಿ ಹಿಂಜರಿಯಬೇಕಾಗುವುದು. ಹೆಚ್ಚಿನ ಅಧಿಕಾರಿಗಳೆದುರಿಗೆ ಹೋಗುವಾಗಲಂತೂ, ಕುಲಕರಣಿ ತನ್ನ ಮರ್ಯಾದೆಯನ್ನು ಮನೆಯಲ್ಲಿ ಮುಚ್ಚಿಟ್ಟು ಹೋಗಬೇಕು; ಇಲ್ಲವಾದರೆ, ಅವನ ಮರ್ಯಾದೆಯ ಮಾರಾಟ ಕಾಸಿಗೆ ಪಂಥೇರಾಗದಿರದು.

ಮೇಲಿನ ಅಧಿಕಾರಿಗಳನ್ನು ಕಂಡರೆ ಕುಲಕರಣಿಯರು ಅಸುರರನ್ನು ಕಂಡಂತೆ ಒಳಗೊಳಗೆ ಬೆದರಿ ಬೀಳುತ್ತಿರುವರು ; ಆದರೆ ಆಚರಣೆಯಲ್ಲಿ ದೇವರನ್ನು ಕಂಡಂತೆ ಭಕ್ತಿ-ವಿಶ್ವಾಸಗಳನ್ನು ತೋರಿಸದೆ ಹೋದರೆ ಬೇರೆ ಗತಿಯೆ ಇಲ್ಲ. ಅಧಿಕಾರಿಗಳನ್ನು ಒಂದೆ ದಿನದಲ್ಲಿ ಇಪ್ಪತ್ತು ಸಲ ಕಂಡರೂ, ಕಂಡಸಲವೊಮ್ಮೆ ಕುಲಕರಣಿ ವಿನಯದಿಂದ ಕೈಮುಗಿಯಲೆ ಬೇಕು. ಖಾದ್ಯೋಪಹಾರ ನೈವೇದ್ಯ, ಸುವರ್ಣಪುಷ್ಪದಕ್ಷಿಣೆಗಳಿಂದ ಅವರ ಮನಸ್ಸನ್ನು ತಣಿಸಲೆ ಬೇಕು. ಅವರ ಒಲುಮೆಗಾಗಿ ಷೋಡಶೋಪಚಾರಗಳಿಂದ ಪೂಜಿಸಲೆ ಬೇಕು. ಎಂದರೆಯೆ ಕುಲಕರಣಿಗೆ ಮೋಕ್ಷ; ಇಲ್ಲವಾದರೆ, ಜನ್ಮಕುಂಡಲಿಯಲ್ಲಿ ಇಲ್ಲದಿದ್ದರೂ ಜನ್ಮಸ್ಥಾನದಲ್ಲಿ ಹೊಸತಾಗಿ ಶನಿಗ್ರಹವನ್ನು ಬರೆಯಬೇಕಾಗುವುದು. ಎಂತಲೆ ಕುಲಕರಣಿಯಲ್ಲಿ ಅಧಿಕಾರಿಗಳ ಕಣ್ಣಿಗೆ ಇಂಗು ಹಚ್ಚುವ ಕಲೆಯು— ಸ್ವಾಭಾವಿಕವಾಗಿ— ಇರಬೇಕಾಗುವುದು. ನಿಸ್ಪೃಹನಾಗಿದ್ದುಕೊಂಡು, ಯಾರ ದಾಕ್ಷಿಣ್ಯವೂ ಇಲ್ಲದೆ, ನಿರ್ಭಯವೃತ್ತಿಯಿಂದ ಕೆಲಸಮಾಡುವ

ಕುಲಕರಣಿ ಆರು ತಿಂಗಳವರೆಗಾದರೂ ತಡೆಯಬಹುದೇ–ಎಂದು ಸಂಶಯ. ಭಾವಿಕಜೀವಿಯಿದ್ದರಂತೂ ಕೆಲಸವೆ ಮುಗಿಯಿತು. ಇದಕ್ಕಾಗಿಯೆ ಕೃಷ್ಣರಾಯರು, ಕುಲಕರಣಿಕೆಯ ಹೊರೆಯನ್ನು ತಮ್ಮ ಮಗನ ಮೇಲೆ ಹೊರಿಸಲು ಹಿಂದೆಗೆಯುತ್ತಲಿದ್ದರು.

* * *

ಕೃಷ್ಣರಾಯರಿರುವ ಊರು ಕಲ್ಲಹಳ್ಳಿ. ಅವರಿಗೀಗ ವಯಸ್ಸು ಐವತ್ತಕ್ಕೆ ಮಿಕ್ಕಿದೆ. ಪರಂಪರೆಯಿಂದ ತಮ್ಮ ಮನೆತನಕ್ಕೆ ನಡೆದು ಬಂದಿರುವ ಕುಲಕರಣಿತನವನ್ನು ಇದುವರೆಗೂ ತಾವೆ ಮಾಡುತ್ತ ಬಂದಿರುವರು. ಮುಪ್ಪಿನ ಕಾಲದಲ್ಲಿ ಅಧಿಕಾರಿಗಳ ಮನವೊಲಿಸುವುದು ಕೃಷ್ಣರಾಯರಿಗೆ ಬೇಸರುಬಂದು ಹೋಗಿದ್ದಿತು.

ರಾಮಮೂರ್ತಿಯೊಬ್ಬನೆ ಕೃಷ್ಣರಾಯರಿಗೆ ಗಂಡುಮಗ. ಅವನಿಗೀಗ ಇಪ್ಪತ್ತೈದು ವರುಷ. ಕುಲಕರಣಿಯಾಗುವುದಕ್ಕೆ ಸಾಕಷ್ಟು ಅವನ ಶಿಕ್ಷಣವಾಗಿದ್ದಿತು. ರಾಮಮೂರ್ತಿಯ ಹೃದಯ ಹಸುಮಗುವಿನದು, ಮನವೊ ವಿಶಾಲವಾದುದು. ಮುನ್ನೋಟದಬಗೆಯವನಲ್ಲ. ಹೆಮ್ಮೆ–ಬಿಂಕಗಳನ್ನು ಕಳೆದುಕೊಳ್ಳುವುದಕ್ಕೆ ಮುನ್ನಿನ ಜನ್ಮದಲ್ಲಿ ಅವನೇನು ಮಾಡಿರುವನೊ ! ಮುಚ್ಚಿ ಮಾತನಾಡುವುದೆಂದರೆ ರಾಮಮೂರ್ತಿಯ ಮನಸ್ಸಿಗೆ ನೊಣಕಡಿದಂತೆನಿಸುವುದು. ''ಇವರು ನಮ್ಮವರು'' ಎಂದೊಮ್ಮೆ ಎನಿಸಿ ಬಿಟ್ಟರಾಯಿತು; ಎಂತಹ ಮಾತನಾದರೂ ಒಡೆದು ಆಡುವನು. ಮಾನಾಪಮಾನದ ಮಾತುಗಳು ಇವನೆದೆಯನ್ನು ಹಿಗ್ಗಿಸುತ್ತಿರಲೂ ಇಲ್ಲ; ತಗ್ಗಿಸುತ್ತಿರಲೂ ಇಲ್ಲ. ಹೆಂಗುಸರೊಡನೆ ಮಾತನಾಡುವಾಗ, ತನ್ನ ತಂಗಿ–ತಾಯಿಯರೊಡನೆ ಮಾತನಾಡುವ ಭಾವನೆಯಿಂದಲೆ ಆಡುವನು.

* * *

ರಾಮಮೂರ್ತಿ ಅಳಿಯತನಕ್ಕೆಂದು ಮೊದಲನೆಯಸಲ ಮಾವನ ಮನೆಗೆ ಹೋಗಿದ್ದ. ಒಂದು ದಿನ ತಾನು ಕುಳಿತ ಹಜಾರದಲ್ಲಿ, ಹೆಚ್ಚಾಗಿ ಕಸ ಬಿದ್ದುದನ್ನು ಕಂಡ; ಕೂಡಲೆ ರಾಮಮೂರ್ತಿ ಹಾಸಿದ ಹಾಸುಗೆಯನ್ನು ಚಟಚಟ ಕೈಯಿಂದ ಕೊಡಹಿಬಿಟ್ಟು, ಪೊರಕೆ ತೆಗೆದುಕೊಂಡು ಕಸಗೂಡಿಸಲು ಪ್ರಾರಂಭಿಸಿದ. ರಾಮಮೂರ್ತಿಯ ಹೆಂಡತಿ ಒಳಗೆ

ನಿಂತುಕೊಂಡೆ ನೋಡಿದಳು; ನಗೆ ಬಂದಿತು. ತಾಯಿಯ ಬಳಿಗೆ ಹೋಗಿ ಹೊಟ್ಟೆ ಹಿಡಿಸಲಾರದ ನಗೆ ನಗುತ್ತ ಇದನ್ನೆಲ್ಲ ಹೇಳಿದಳು. ಅವರು ಬಂದು ರಾಮಮೂರ್ತಿಯನ್ನು ಬಿಡಿಸಿ, ತಾವೆ ಕಸಗೂಡಿಸಿ ಹಾಸಿಕೊಟ್ಟರು.

* * *

ರಾಮಮೂರ್ತಿಯ ಹೆಂಡತಿ ಅತ್ತೆಯ ಮನೆಗೆ ಬಂದಾಗ, ತನ್ನ ಅತ್ತೆಗೂ ನಾದಿನಿ ಇಂದಿರೆಗೂ ಈ ಸಂಗತಿಯನ್ನು ಅದೆಷ್ಟೊ ನಗುತ್ತ ಹೇಳಿದಳು. ಅವರೂ ಮನಸಾರೆ ನಕ್ಕರು. ಇಂದಿರೆಯು “ರಾಮಣ್ಣಾ ನೀನೇನು ಅಳಿಯತನಕ್ಕೆ ಹೋಗಿದ್ದೆಯೊ ಕಸಗೂಡಿಸಲಿಕ್ಕೆ ಹೋಗಿದ್ದೆಯೊ ಮಾವನ ಮನೆಗೆ ?” ಎಂದು ನಗೆಯಾಡಿದಳು. ರಾಮಮೂರ್ತಿ ಸ್ವಾಭಾವಿಕವಾಗಿ “ಏಕೆ ! ಅದರಲ್ಲೇನು ವಿಶೇಷ !” ಎಂದು ನುಡಿದುಬಿಟ್ಟನು. ಅವನ ಸರಳಹೃದಯಕ್ಕಿದೊಂದು ಉದಾಹರಣೆಯ ಅಡ್ಡಕತೆ.

* * *

“ನಮ್ಮ ರಾಮಮೂರ್ತಿ ಈ ಯುಗದ ಮನುಷ್ಯನೇನೂ ಅಲ್ಲ; ಮುಂದೆ ಕುಲಕರಣಿಕೆಯನ್ನು ಹೇಗೆ ಸಾಗಿಸುವನೊ !” ಎಂದು ಕೃಷ್ಣರಾಯರು ಆಗಾಗ ಮಾತನಾಡುವರು.

ಸಾಧುಸ್ವಭಾವದ ಮಗ, ವಿನಯಶೀಲೆಯಾದ ಸೊಸೆ, ಅನುಕೂಲೆಯಾದ ಹೆಂಡತಿ, ಸಿರಿವಂತರ ಸೊಸೆಯಾದ ಸುಗುಣೆಯಾದ ಹೆಣ್ಣುಮಗಳು, ಉಣ್ಣಲು ಉಡಲು ಕಡಿಮೆಯಿಲ್ಲದಷ್ಟು ಸಂಪತ್ತು, ಇವೆಲ್ಲವುಗಳಿಂದ ಕುಲಕರಣಿಯರ ಮನೆ ಆನಂದದ ಆಗರವಾಗಿದ್ದಿತು.

೨

ಚೆನ್ನಪ್ಪ ಕರಣಿಕರ ಕಮತಿಗ. ಹೂವಿನ ತೋಟವನ್ನು ಮೊದಲಿನಿಂದಲೂ ಅವನ ಮನೆತನದವರು ಮಾಡುತ್ತ ಬಂದಿದ್ದರು. ಅದನ್ನೆ ಈಗ ಚೆನ್ನಪ್ಪ ಮಾಡುತ್ತಿರುವನು. ಚೆನ್ನಪ್ಪ ಚಿಕ್ಕವನಿರುವಾಗಲೆ ತಂದೆ ತೀರಿದನು; ಆದುದರಿಂದ ಅವನ ತಾಯಿ ಗಂಗವ್ವ, ಎಳೆಮಗುವಾದ ಚೆನ್ನಪ್ಪನನ್ನು ಕಟ್ಟಿಕೊಂಡು ತವರುಮನೆಗೆ ಹೋಗಿಬಿಟ್ಟಳು. ಚೆನ್ನಪ್ಪ ಬೆಳೆದು ದೊಡ್ಡವನಾಗುವವರೆಗೆ ಅಲ್ಲಿಯೆ ಇದ್ದಳು. ಚೆನ್ನಪ್ಪನಿಗೆ ಅವನ

ಸೋದರಮಾವ ತನ್ನ ಮಗಳು ನೀಲಮ್ಮನನ್ನು ಕೊಟ್ಟು ಮದುವೆ ಮಾಡಿದನು. ಈ ಅವಧಿಯಲ್ಲಿ ಕುಲಕರ್ಣಿಯರ ತೋಟವನ್ನು, ಚಿನ್ನಪ್ಪನ ದೂರದ ಚಿಕ್ಕಪ್ಪನಾದ ರಾಮಯ್ಯ ಮಾಡುತ್ತಲಿದ್ದ.

ಚಿನ್ನಪ್ಪನು ಮನೆತನ ಸಾಗಿಸಲು ತಕ್ಕವನಾದೊಡನೆಯೆ ತಾಯಿ-ಹೆಂಡತಿಯರನ್ನು ಕರೆದುಕೊಂಡು ಮರಳಿ ತನ್ನೂರಿಗೆ ಬಂದ. ಕೂಡಲೆ ಕೃಷ್ಣರಾಯರು ರಾಮಯ್ಯನಿಂದ ತೋಟವನ್ನು ಬಿಡಿಸಿ ಚಿನ್ನಪ್ಪನಿಗೆ ಕೊಟ್ಟರು. ಇದರಿಂದ ರಾಮಯ್ಯನು ನೊಂದುಕೊಂಡವನಾದರೂ ಬಹಿರಂಗದಲ್ಲಿ ಯಾವುದನ್ನೂ ತೋರಗೊಡಲಿಲ್ಲ.

ಚಿನ್ನಪ್ಪನ ಮನೆಯಲ್ಲಿ ಆನೆಯಂತಹ ನಾಲ್ಕು ಎತ್ತುಗಳು, ಜೀತದ ಆಳೊಬ್ಬ, ತಾನೂ ಮೈಮುರಿದು ದುಡಿಯುವವನು, ಹೈನ-ಹಾಲು, ಕಾಳು-ಕಡಿಗಳಿಗೆ ಕೊರತೆಯೇನೂ ಇಲ್ಲ. ಚಿನ್ನಪ್ಪ ಆಲಸಿಗನಲ್ಲ, ಹಾಳು ಹರಟೆಗಾರನಲ್ಲ, ತುಂಟನಲ್ಲ, ಇಲ್ಲದ ಉದ್ದನೀರಿಗೆ ಹೋಗುವವನಲ್ಲ. ಜನಗಣನೆಯಲ್ಲಿ ಚಿನ್ನಪ್ಪನ ಹೆಸರು ಕಲಿತವರ ವರ್ಗದಲ್ಲಿ ಬರುವುದು; ಅದೇತಕ್ಕೆಂದರೆ ಚಿನ್ನಪ್ಪನಿಗೆ ತನ್ನ ಹೆಸರನ್ನಷ್ಟು ಬರೆಯಲಿಕ್ಕೆ ಬರುವುದು.

ಹೆಚ್ಚಿಗೆ ಕಲಿತವನಲ್ಲದಿದ್ದರೂ ಚಿನ್ನಪ್ಪನು ರಸಿಕ. ಸವಿಗಾರ. ಹುಣ್ಣಿಮೆಯ ಚಂದ್ರನನ್ನೂ ಹೂಬಿಟ್ಟ ಮಲ್ಲಿಗೆಯನ್ನೂ ನೋಡಿದಾಗ ಕಲಿಯದವರ ಎದೆಯರಳದೇನು? ತಂಗಾಳಿಯ ತಣ್ಪು, ಹೊತ್ತಿಗೆಯ ಹೊರೆಯನೋದದವರನ್ನು 'ಹಾ!' ಎನಿಸದೇನು? ಗಿಳಿಗಳ ಉಲಿವನ್ನಾಗಲಿ ಕೊಳಲಿನ ಇಂಚರವನ್ನಾಗಲಿ ಕೇಳಿ, ಬರೆಯಲು ಬಾರದವರ ಕಿವಿಗಳು ಹಿಗ್ಗವೇನು? ಪ್ರಪಂಚದಲ್ಲಿಯ ರಸವನ್ನು ಕಂಡು ಹಿಡಿದು, ಅದನ್ನು ಅನುಭವಿಸುವ ಶಕ್ತಿ ಮನುಷ್ಯನಿಗೆ ನಿಸರ್ಗದತ್ತವಾದುದು. ಕಸ್ತೂರಿಯ ಮೃಗವು ಸುಗಂಧವನ್ನು ಬಯಸಿ, 'ಆಂಗ್ಲೋ ಇಂಡಿಯನ್ ಡ್ರಗ್' ಕಂಪನಿಗೆ ಹೋಗಿ 'ಓಟೋದಿಲ್‌ಬಹಾರ' ವನ್ನು ಬೇಡಿದರೆ, ನಗೆ ಬರುವ ಸಂಗತಿಯಲ್ಲವೆ? ಓದುಬರೆಹ ಕಲಿತೇ ಕುಲರಸಿಕನಾಗಬೇಕೆಂದು ಹಂಬಲಿಸುವುದೂ ಇದರಂತೆಯೆ.

ಚಿನ್ನಪ್ಪನ ಹೆಂಡತಿ ನೀಲಮ್ಮ ಬಲು ಬೆಡಗುಗಾರ್ತಿ. ಸೊಬಗಿನವಳು. ಸೊಗಸನ್ನು ಸೂಸುತಿರುವ ಬೊಗಸೆಗಣ್ಣುಗಳು, ಅರೆವೆರೆ (ಅರ್ಧ ಚಂದ್ರ) ಯಂತೊಪ್ಪುತಿರುವ ಅಂದವಾದ ಹಣೆ, ಕಂದಿ(ಕಲಂಕ)ನಂತೆ ಕಾಣುತ್ತಿರುವ ಹಣೆಯ ಹಚ್ಚೆ, ತಲೆಯಮೇಲೆ ಹೊದ್ದುಕೊಂಡಿರುವ ಸೆರಗನ್ನು ದಾಟಿ– ಹಣೆಯನ್ನು ಬಳಸಿ– ಹಾರಾಡುತ್ತಿರುವ•ಕಪ್ಪಾದ ಸುಳಿಗುರುಳುಗಳು, ತಿದ್ದಿ ಬರೆದಂತಿರುವ ಕೊನೆಹುಬ್ಬುಗಳು, ಮುಗುಳುನಗೆಗೆ ಮನೆಯಾಗಿರುವ ಮುದ್ದು ಮುದ್ದಾದ ಬಾಯಿ, ಮೆರುಗುಹಾಕಿದಂತಿರುವ ಮೈಸುಣ್ಪು ಇವೆಲ್ಲವುಗಳು, ಯಾರನ್ನಾದರೂ ಬೆರಗುಗೊಳಿಸುವಂತಹವಿದ್ದುವು. ಹೆಚ್ಚಿಗೇನು ಹೇಳುವುದು ! ಚಿನ್ನಪ್ಪನಿಗೆ ನೀಲಮ್ಮನು ತಕ್ಕವಳಾದ ಹೆಂಡತಿ; ಚಿನ್ನಕ್ಕೆ ರನ್ನ ಕೂಡಿಸಿದಂತೆ ಇವರಿಬ್ಬರ ಹೊಂದಿಕೆ.

ಮೊದಲಿನಿಂದಲೂ ಚಿನ್ನಪ್ಪ ನೀಲಮ್ಮ ಒಂದೆ ಮನೆಯಲ್ಲಿದ್ದು, ಕೂಡಿ ಆಡಿ ಬಳೆದವರು. ಇಬ್ಬರೂ ಅನ್ಯೋನ್ಯವಾಗಿರುವರು. ಚಿನ್ನಪ್ಪನನ್ನು ನೋಡಿದ ನೀಲಮ್ಮನ ಮುಖ ಅರಳಿದ ತಾವರೆ. ರೇಶಿಮೆಯ ಹುಳುವಿನ ಮೈಯಿಂದ ಎಳೆ ಹೊರಡುವುದಲ್ಲ ! ಅದರಂತೆ ನೀಲಮ್ಮನ ನೋಟದಿಂದ ಹೊರಡುತ್ತಿರುವ ಹೊಳಪಿನ ಕದಿರು(ಕಿರಣ)ಗಳು, ಎಳೆಗಳಾಗಿದ್ದಲ್ಲಿ, ಒಂದೆ ಒಂದು ನಿಮಿಷದಲ್ಲಿ, ಚಿನ್ನಪ್ಪನ ಮೆಯ್ಯನ್ನೆಲ್ಲ ಮುಸುಕಿ ಬಿಡುತಿದ್ದುವು. ನೀಲಮ್ಮನು ಚಿನ್ನಪ್ಪನನ್ನು ಭಾವದ ದೇವನನ್ನಾಗಿ ಮಾಡಿಕೊಂಡು, ತನ್ನ ನಗೆಮಲ್ಲಿಗೆಯಿಂದ ಪೂಜಿಸುವಳು. ವಿನೋದದಿಂದ ಬೆರೆತಿರುವ ತನ್ನ ಮೆಲುಮಾತುಗಳ ಮಂತ್ರದಿಂದ ಮೆಚ್ಚಿಸುವಳು.

ಚಿನ್ನಪ್ಪನೇನು ಕಡಿಮೆಯವನೆ ! ಅವನೂ ನಗೆಗಾರ; ಬಗೆಗಾರ. ನೀಲಮ್ಮನೊಡನೆ ಅದೆಷ್ಟೊ ವಿನೋದವಾಡುವನು. ಅವಳ ಚೆಲುವಾದ ಮೊಗವನ್ನು ಕಣ್ಣಾರಳಿಸಿ ನೋಡಿಯೆ ನೋಡುವನು. ನೋಡುವ ಭರದಲ್ಲಿಯೆ ಒಮ್ಮೊಮ್ಮೆ ಎದ್ದುನಿಂತು "**ಕರ್ನಾಟಕದ ಹೆಣ್ಣೇ ನೀನು, ಕಾಡಿಗ್ಗಣ್ಣು ನಡಸಣ್ಣ ಸಿಂಹನಾಂಗ ನಿಂದು ಬಾಳ ಡೌಲೈತಿ**" ಎಂದು ಹಾಡುತ್ತ ಕೈಹಿಡಿದು ಸೆಳೆಯುವನು. ನೀಲಮ್ಮನು ನಾಚಿಕೊಂಡು 'ಯಾರಾದರೂ ನೋಡುವರೇನೊ' ಎಂದು ಬೆದರುಗಣ್ಣುಗಳಿಂದ ಸುತ್ತಲೂ ನೋಡಿ ಸರಿದು ಹೋಗುವಳು. ಚಿನ್ನಪ್ಪನು ಹೆಂಡತಿಗೆ

"ನೀಲಾ" ಎಂದೊ "ನೀಲೀ" ಎಂದೊ, ಹೆಸರುಗೊಂಡೆ ಕರೆಯುತ್ತಿರುವನು. ಹೊರಗಿನವಳೇ, ಸೋದರಮಾವನ ಮಗಳು.

ಚಿನ್ನಪ್ಪನಲ್ಲಿ ರಾಮಮೂರ್ತಿಯದು ತುಂಬ ವಿಶ್ವಾಸ; ರಾಮಮೂರ್ತಿಯಲ್ಲಿ ಚಿನ್ನಪ್ಪನದು ಸಂಪೂರ್ಣ ಶ್ರದ್ಧೆ. ಪರಸ್ಪರರಲ್ಲಿಯೂ ಅಸೂನವಾದ ಸ್ನೇಹ. ಒಂದೆ ಹೊಟ್ಟೆಯಿಂದ ಹುಟ್ಟಿಬಂದ ಅಣ್ಣತಮ್ಮಂದಿರಲ್ಲಿಯೂ ಇಷ್ಟು ಮಮತೆ–ಮೆಚ್ಚಿಕೆಯಿರದು. ಚಿನ್ನಪ್ಪ ತನಗೆ ಬಿಡುವುದೊರೆತಾಗಲೆಲ್ಲ ರಾಮಮೂರ್ತಿಯ ಬಳಿಯಲ್ಲಿಯೆ ಒಂದು ಕುಳಿತಿರುವನು. ರಾಮಮೂರ್ತಿ ಅವನಿಗೆ ಭಾರತ, ರಾಮಾಯಣ, ಬೇರೆ ಕಥೆ–ಕಾದಂಬರಿಗಳು ಇವನ್ನೆಲ್ಲ ಓದಿ ಹೇಳುವನು. ಚಿನ್ನಪ್ಪನೂ ಬೇಸರಿಯದೆ ಕುತೂಹಲಿಯಾಗಿ ಕೇಳುವನು. ಚಿನ್ನಪ್ಪ ರಾಮಮೂರ್ತಿಗೆ ಸಲುಮೆಯಿಂದ "ರಾಮಣ್ಣಾ" ಎಂದು ಕರೆಯುವನು. ರಾಮಮೂರ್ತಿಯು ಚಿನ್ನಪ್ಪನಿಗೆ ಸಲುಗೆಯಿಂದ "ಚಿನ್ನಾ" ಎಂದು ಕೂಗುವನು. ಇಬ್ಬರದೂ ಸ್ವಲ್ಪ ಹೆಚ್ಚುಕಡಿಮೆ ಒಂದೆ ವಯಸ್ಸು.

ನೀಲಮ್ಮನಂತೂ ಕುಲಕರಣಿಯರ ಮನೆಮಗಳಿದ್ದಂತೆ. ರಾಮಮೂರ್ತಿಯ ತಂಗಿ ಇಂದಿರೆಗೂ, ಅವಳಿಗೂ ಜೀವಾಳದ ಗೆಳೆತನ. ರಾಮಮೂರ್ತಿಯ ತಾಯಿಗೂ ಹೆಂಡತಿಗೂ ಬೇಕಾದವಳು. ಮನೆಯವರೆಲ್ಲ ನೀಲಮ್ಮನನ್ನು ಹೊರಗಿನವಳೆಂದು ಭಾವಿಸಿರಲೆ ಇಲ್ಲ. ನೋಡಿದರೆ ಒಂದೆ ಕುಲದವರಲ್ಲ ; ಒಂದೆ ಜಾತಿಯವರಲ್ಲ. ಪ್ರೇಮ–ಗೆಳೆತನಗಳು ಜಾತಿ–ಕುಲ ಗೋತ್ರಗಳನ್ನು ನೋಡುವುವೆ ! ಮನೆಗೆಲಸ ಮುಗಿದೊಡನೆಯೆ ನೀಲಮ್ಮ ಕರಣಿಕರ ಮನೆಗೆ ಬರುವಳು. ಇಂದಿರೆಯೊಡನೆ, ಬೇರೆಯವರೊಡನೆ ಮಾತನಾಡುವಳು; ನಗುವಳು ; ಕೆಲೆಯುವಳು.

ರಾಮಮೂರ್ತಿ ಇಂದಿರೆಯೊಡನೆ ಮಾತನಾಡುವಂತೆ, ನೀಲಮ್ಮನೊಡನೆಯೂ ತಿಳಿಮನದಿಂದ ಮಾತನಾಡುವನು. ನಿರ್ವಿಕಾರದ ಬುದ್ಧಿಯಿಂದ ನಗೆಯಾಡುವನು. ರಾಮಮೂರ್ತಿಯ ನಿಷ್ಕಲ್ಮಷವಾದ ಆಚರಣೆಯನ್ನು ಚದುರೆಯಾದ ನೀಲಮ್ಮ ಸರಿಯಾಗಿ ಕಂಡುಹಿಡಿದಳು. ಆತನನ್ನು ಪರಕೀಯನೆಂದೆಣಿಸದೆ ಸಂಕೋಚವಿಲ್ಲದೆ ಮಾತನಾಡುವಳು. ಎಳೆಯ

ಮಗುವಿನಂತಹ ಮನಸ್ಸು, ಅಲ್ಲದೆ ಚಿನ್ನಪ್ಪನ ಸಂಬಂಗೆಯ ಗೆಳೆಯ ; ಸಾಲದುದಕ್ಕೆ ತನ್ನ ಒಡನಾಡಿಯಾದ ಇಂದಿರೆಯ ಅಣ್ಣ ; ಎಂದಮೇಲೆ ನೀಲಮ್ಮ ರಾಮಮೂರ್ತಿಯೊಡನೆ ಮಾತನಾಡಿದರೆ ವಿನೋದವಾಡಿದರೆ ಅದರಲ್ಲಿ ಅಪರಾಧವೇನು? ಅಕ್ಕ-ತಮ್ಮ, ಅಣ್ಣ-ತಂಗಿ, ತಾಯಿ-ಮಗ, ತಂದೆ-ಮಗಳು ಪರಸ್ಪರರಲ್ಲಿ ಮಾತನಾಡಿದರೆ, ವಿಪರೀತವಾಗಿ ಯಾರಾದರೂ ಭಾವಿಸುವರೇನು? ಚಿನ್ನಪ್ಪನಾದರೂ ಏತಕ್ಕಾಗಿ ಭಾವಿಸುವನು ?

೩

ಪ್ರಶಾಂತವಾಗಿರುವ ಸಾಗರವು, ಬಿರುಗಾಳಿ ಬೀಸಿ ನೋಡು-ನೋಡುವುದರಲ್ಲಿಯೆ ಉಲ್ಲೋಲಕಲ್ಲೋಲವಾಗುವುದು. ಮಿರುಗುವ ತಾರೆಗಳಿಂದ ಬೆಳಗುತಿರುವ ಮುಗಿಲನ್ನು, ನಿಮಿಷದಲ್ಲಿಯೆ ಕಾರ್ಮೋಡವು ಮುಸುಕಿಬಿಡುವುದು. ಹಸುರೆಲೆ-ಹೂ-ಕಾಯಿಗಳ ವೃಕ್ಷರಾಜಿಯಿಂದ ಮೆರೆಯುತ್ತಿರುವ ಕಾಡು, ಕಾಡುಗಿಚ್ಚಿನಿಂದ ಕ್ಷಣಾರ್ಧದಲ್ಲಿ ಸೀದು ಸೀಕರಿಗೊಳ್ಳುವುದು. ಇದೆಲ್ಲವೂ ಆ ಕಾಲರಾಯನ ಕೈಚಳಕ; ಪ್ರಕೃತಿಯ ಮಾಯೆಯ ಮಾಟ.

*  *  *

ತನ್ನಿಂದ ಬಿಡಿಸಿ ಕೃಷ್ಣರಾಯರು ತೋಟವನ್ನು ಚಿನ್ನಪ್ಪನಿಗೆ ಕೊಟ್ಟುದಕ್ಕಾಗಿ ರಾಮಯ್ಯನಿಗೆ ಎದೆಗಿಚ್ಚು. ಗೊಬ್ಬರದಲ್ಲಿಯ ಕಿಡಿಯಂತೆ, ಹೊಟ್ಟೆಯುರಿ ಒಳಗೊಳಗೆಯೆ ಹೊತ್ತುತ್ತಲಿದ್ದಿತು. ರಾಮಯ್ಯ ಸಾಹಸಿಗ, ಮೋಸಗಾರ. ಮಾತು ಮೇಣದಂತೆ ಮಿದುವು ; ಎದೆಯು ಕಬ್ಬಿಣದಂತೆ ಕಠಿನ. ಹೇಗಾದರೂ ಮಾಡಿ, ರಾಯರಿಗೂ ಚಿನ್ನಪ್ಪನಿಗೂ ಪರಸ್ಪರರಲ್ಲಿ ಕೆಡಕು ಮನಸ್ಸುಂಟಾಗುವಂತೆ ಮಾಡಬೇಕೆಂದು ರಾಮಯ್ಯನ ಹಂಬಲು. ಚಿನ್ನಪ್ಪನ ವಿರುದ್ಧವಾಗಿ ತಾನೇನು ಹೇಳಿದರೂ ರಾಯರು ಕಿವಿಗೊಡಲಾರರೆಂದು ರಾಮಯ್ಯನಿಗೆ ಎನಿಸಿತು. ಆದುದರಿಂದಲೆ ಏನುಮಾಡಬೇಕೆಂಬ ಬಗೆಹರಿಯದ ಆಲೋಚನೆಯಲ್ಲಿ ೨-೩ ವರ್ಷಗಳು ಸಂದುಹೋದುವು. ರಾಯರ ಮನೆಯ ವಿಷಯದಲ್ಲಿ ಚಿನ್ನಪ್ಪನ ಮನಸ್ಸನ್ನೆ ಕಲುಷಿತವಾಗಿ ಮಾಡುವುದು ರಾಮಯ್ಯನಿಗೆ ಹಗುರಾಗಿ ಕಂಡಿತು. ಆದುದರಿಂದ ಈಗ

ರಾಮಯ್ಯ ಚಿನ್ನಪ್ಪನಿಗೆ ಹತ್ತಿರದ ಹಿತಚಿಂತಕನು. ಕಳ್ಳನು ಕೋಶಾಗಾರದ ಕಾವಲುಗಾರನಾದ.

ಲೌಕಿಕಜನರಿಗೆ ಹೆಂಡತಿಯೆಂಬುದು ಒಂದು ಅಭಿಮಾನದ ಮೂರ್ತಿ. ಮಂದಿ ತಮ್ಮ ಜಾತಿ-ಕುಲಗಳನ್ನು ಹಳಿಯಲಿ, ಬಂಧು-ಬಾಂಧವರನ್ನು ನಿಂದಿಸಲಿ, ತಾಯಿ-ಅಕ್ಕ-ತಂಗಿಯರಿಗೆ ಹೆಸರಿಡಲಿ; ಇನ್ನಾರಿಗಾದರೂ ಹಳಿದಾಗ- ಹೆಸರಿಟ್ಟಾಗ—ಬಾರದಷ್ಟು ಕೋಪವೂ ಆಗದಷ್ಟು ತಾಪವೂ ಹೆಂಡತಿಗೆ ಹೆಸರಿಟ್ಟರೆ ಬರುವುದು; ಆಗುವುದು. ಜನರು ಆಗ ಕಣ್ಣಿದ್ದು ಕುರುಡರು; ಕಿವಿಯಿದ್ದು ಕಿವುಡರು. ಅವರ ಅರಿವು ಮರೆಯಾಗಿ ಬಿಡುವುದು.

ರಾಮಯ್ಯ ಇದನ್ನೆಲ್ಲ ಚೆನ್ನಾಗಿ ತಿಳಿದುನೋಡಿದ. ಬಹಳ ದಿವಸದ ಬಗೆಯ ಬಯಕೆಯನ್ನು ತೀರಿಸಲು ಯೋಚಿಸಿದ. ವಿಚಾರದಲ್ಲಿರುವುದನ್ನು ಮೆಲ್ಲಗೆ ಆಚಾರದಲ್ಲಿ ತರಲು ತೊಡಗಿದ :

“ಏನಲೇ ಚಿನ್ನಾ.., ನಿಮ್ಮ ಅವ್ವ ಆದೊಂದು ಅದಮುಚ್ಚೀಯಂತಾದು ! ನೀನೋ ಹೊಲಾ-ತ್ವಾಟಾ- ಅಂತ ಯಾವಾಗ ನೋಡಿದರೂ ಹೊರಗs ಇರತೀ! ನಿನ್ನ ಹೇಣತಿ ಏನವಾ.. ಇನ್ನೂ ಹರೇದ ಹುಡಿಗಿ ! ಹೆಂಗಸರಿಗೆ ಹಿಂಗೆಲ್ಲಾ ಸೊತಂತ್ರಾ ಕೊಡೂದೇನು ಪಾಡಲ್ಲ ಬಿಡು ! ಎಡಗಣ್ಣೂ ಬಲಗಣ್ಣೂ ನೋಡತಾನs ಇರಬೇಕು ಅವರನ್ನ. ‘ಹೆಂಗಸು ತಿರಿಗಿ ಕೆಟ್ಟಿತು, ಗಂಡಸು ಕೂತು ಕೆಟ್ಟಿತು’ ಅಂತಾರ.. ನೀ ಕೇಳಿಲ್ಲೇನು ಆದನ್ನ ?” ಈ ಬಗೆಯ ಮಾತುಗಳನ್ನು ರಾಮಯ್ಯ ಚಿನ್ನಪ್ಪನೆದುರಿಗೆ ನಾಲ್ಕಾರು ಸಲ ಹೇಳಿದ. “ಇವನು ಇದನ್ನೇನು ಹೇಳುತ್ತಿರುವನು ?..” ಎಂದು, ಕೇಳಿದಾಗಲೆಲ್ಲ ಚಿನ್ನಪ್ಪ ಬೆರಗುಗೊಳ್ಳುತ್ತಿದ್ದ; ಮನದೊಳಗೆ ಏನೇನನೋ ಯೋಚಿಸುತ್ತಿದ್ದ.

ಮನುಷ್ಯನ ಹೃದಯ ಕನ್ನಡಿಯಂತಿರುವುದು. ಕಲಿತವರಾದ ನಾವು, ಬುದ್ಧಿಭಾಸ್ಕರನ ಪ್ರತಾಪದಿಂದ, ಆ ಕನ್ನಡಿಯ ಪಾರಜವನ್ನೆಲ್ಲ ಹಾರಿಸಿ ಬಿಡುವೆವು. ಆದರೆ ಕಲಿಯದವರದು ದಿನದಿನಕ್ಕೂ ದಾವುಗನ್ನಡಿಯಂತಾಗುವುದು. ಯಾವುದೇ ಒಂದು ಭಾವನೆಯ ಚಿತ್ರವು ಅದರೊಳಗೆ ಭವ್ಯವಾಗಿ-ಸ್ಫುಟವಾಗಿ ಮೂಡುವುದು. ಒಮ್ಮೆ ಮೂಡಿದುದನ್ನು ಅಳಿಸುವುದೆಂದರೆ,

ಅದೆಷ್ಟೊ ಕಷ್ಟದ ಕೆಲಸ. ಚಿನ್ನಪ್ಪ ರಾಮಯ್ಯನ ಬೆಲ್ಲಬೆರೆತ ಮಾತುಗಳಿಗೆ ಬೆರಗಾದ; ಮರುಳಾದ. ಅವನಿಗೆ "ರಾಮಯ್ಯನ ಮಾತಿನಲ್ಲಿ ಹುರುಳು ಏನಾದರೂ ಇರಬಹುದೇ ?" ಎನಿಸಿತು. ಬರುಬರುತ್ತ ಚಿನ್ನಪ್ಪ ರಾಮಯ್ಯನ ಮಾತುಗಳಿಗೆ ಹೆಚ್ಚಾಗಿ ಕಿವಿಗೊಡಲು ತೊಡಗಿದ.

"ಚಿನ್ನಪ್ಪ ತನ್ನ ಬಲೆಗೆ ಬೀಳುವದು ಇನ್ನು ಕಠಿನವಿಲ್ಲ" ಎಂದು ರಾಮಯ್ಯ ಕಂಡುಹಿಡಿದ. ಚಿನ್ನಪ್ಪನ ಮನಸಿನಲ್ಲಿ, ನೀಲಮ್ಮನ ವಿಷಯದಲ್ಲಿಯೂ ರಾಮಮೂರ್ತಿಯ ವಿಷಯದಲ್ಲಿಯೂ ಸಂಶಯವುಂಟಾಗುವಂತಹ ಅದೆಷ್ಟೊ ಮಾತುಗಳನ್ನು, ಆಗಾಗ ಪರ್ಯಾಯದಿಂದ ಹೇಳುತ್ತಲಿದ್ದ. ನೀಲಮ್ಮನ ಶುದ್ಧಚಾರಿತ್ರ್ಯಕ್ಕೆ ಹೊಲಸು ಬಣ್ಣಬಳೆಯುವ ಅದೆಷ್ಟೊ ಸುದ್ದಿಗಳು– ಕರ್ಣಪರಂಪರೆಯಾಗಿ– ಚಿನ್ನಪ್ಪನ ಕಿವಿಗೆ ಬೀಳುವಂತೆ ಹಂಚಿಕೆಮಾಡಿದ. ರಾಮಯ್ಯ ಹೇಳುತ್ತಿರುವಾಗಲೆಲ್ಲ ಚಿನ್ನಪ್ಪನಿಗೆ, ಇವನ ಮಾತು ನಿಜವೇನೋ, ಎನಿಸುತ್ತಿದ್ದಿತು. ಆದರೆ ನೀಲಮ್ಮನ ನಿರ್ಮಲ ಹೃದಯವನ್ನು ನೆನೆದು, ಅವಳ ಕೃತ್ರಿಮತೆಯೇನೂ ಕಂಡುಬಾರದ ಕಣ್ಣನೋಟವನ್ನು ಕಂಡು, ಸಾತ್ವಿಕ ಮಂದಹಾಸ್ಯದಿಂದ ಕೂಡಿರುವ ಮುದ್ದುಮೊಗವನ್ನು ನಿಟ್ಟಿಸಿ, "ರಾಮಯ್ಯನ ಮಾತನ್ನು ನಂಬುವದು ನನ್ನ ಮರುಳುತನ" ಎಂದು ಮರಳಿ ಎನಿಸುತ್ತಿದ್ದಿತು.

* * *

ಸೋಮವಾರದ ದಿನ: ಚಿನ್ನಪ್ಪನಿಗೆ ತೋಟದಲ್ಲಿ ಬೇರೆ ಕೆಲಸವೇನೂ ಇರಲಿಲ್ಲ. ಬಾಳೆಯ ಬನವನ್ನು ನೋಡುತ್ತ ಸುತ್ತುತ್ತಿದ್ದನು. "ತಾನೇ ನೀರುಣಿಸಿ ಬೆಳೆಯಿಸಿದ ಬನವು, ಎಷ್ಟು ಸೊಗಸಾಗಿ ಕಾಣುತ್ತಿರುವದಲ್ಲ', ಎಂದು ಅಭಿಮಾನದಿಂದ ಹಿರಿಹಿರಿ ಹಿಗ್ಗುತ್ತಿದ್ದನು. ತನ್ನೊಳಗೆ ತಾನೇ ಕಿರುನಗೆ ನಗುತ್ತಲಿದ್ದನು. ಅಷ್ಟರಲ್ಲಿಯೇ ಅಲ್ಲಿಗೆ ರಾಮಯ್ಯ ಬಂದ. ಇಬ್ಬರೂ ಅಲ್ಲಿಯೆ ಕುಳಿತರು. ಅದೆಷ್ಟೊ ಮಾತುಗಳನ್ನಾಡಿದರು. ಮಾತನ್ನು ಮುಗಿಮುಗಿಸುವ ಸಂದರ್ಭದಲ್ಲಿ, ರಾಮಯ್ಯ ಗಡುಸುದನಿಯಲ್ಲಿ ಹೀಗೆಂದು ಹೇಳಲಾರಂಭಿಸಿದ :

"ಚಿನ್ನಾ ನೀ ಏನಾದರೂ ಯಾಕ ಅನವೊಲ್ಲಿ.., ನೀಲಮ್ಮನ ಸಲುವಾಗಿ ನನಗ ಬಲ ಹೆದರಿಕಿ ಅನಸಾಕ ಹತ್ತೇತಿ ನೋಡಪಾ ! ನೀ ಏನ

ನನಗ ದೂರದವನಽ ? ನಿನ್ನ ಮಾನಾ..ಅಂದರ ನನ್ನ ಮಾನ; ನಿನ್ನ ಅವಮಾನಾ..ಅಂದರ ನನ್ನ ಅವಮಾನ ! ಅಲ್ಲೋ, ಆ ರಾಮಪ್ಪ ನಿಮ್ಮ ಯಜಮಾನ ಆದಷ್ಟಕ್ಕಽ ಏನಾಧಾಂಗಾತು ? ನಿನಗಽ ಅಂವಗಽ ಗೆಣಿತಾನ ಇದ್ದರಾದರೂ ಏನಾತು ? ಹೆಂಗಸೂ ಗಂಡಸೂ ಅಂದಮ್ಯಾಗ ಇರೂಹಾಂಗ ಇರಬೇಕು ಏನಪಾ ! ಅಂವ್ನೇನು ಮುಂದಕಽ.. ತದಕS– ಇನ್ನೂ ಹರೇದ ಭಾರ ಏನಪಾ ! ಹಂತಾಂವನ ಸಂಗತೀ ನೀಲಮ್ಮಂದು ಸಲಿಗಿ ಇಷ್ಟ್ಯಾಕಪಾ! ಮಾತ್ಯಾಕ, ಕತೀಯಾಕ, ನಗಚಾಟಿಕಿಯಾಕ, ಏನಿದೆಲ್ಲಾ ಹುಡಗಾಟ ?.. ನನಗೇನಪಾ ಈ ರೀತಿ ಸರೀ ಕಾಣೂದಿಲ್ಲ ನೋಡು ! ''

ಚಿನ್ನಪ್ಪ ಸಹಜಸ್ವರದಲ್ಲಿ ಉತ್ತರಕೊಟ್ಟ.

'' ಏನು ಚಿಕ್ಕಪ್ಪಾ .., ಇದರಾಗೇನೈತಿ ತಪ್ಪು ? ನಾ ನಿಮ್ಮ ಪಾರೊತೀ ಜೊಡೀ ಮಾತಾಡೂದಿಲ್ಲೇನು ? ಆಕಿ ನನ್ನ ಸಂಗತೀ ನಗಾಟಾ ಆಡೂದಿಲ್ಲೇನು ? ರಾಮಪ್ಪ ನೀಲಿನ್ನ ಬೆನ್ನಲ್ಲಿ ಬಿದ್ದವಳ್ಹಾಂಗ ತಿಳಕೊಂಡಽ ದಾನು. ಈ ಮಾತಿನಾಗ ನನಗ ಏನೂ ಒಂದು ಎಳ್ಳಕಾಳಿನಷ್ಟೂ ಸಂಶೇ ಬರೂದಿಲ್ಲ ನೋಡು. ರಾಮಣ್ಣಾನ ಮನಸು ಅದೆಂತಾ ತಿಳಿನೀರಿನ್ಹಾಂಗೈತೀ ಅಂಬೂದನ್ನ ನಾ ಎಲ್ಲಾ ಚೆನ್ನಾಗೇ ಬಲ್ಲೆ. ಅಂತಽ ಅವನ ಸಲುವಾಗಿ ಅಂದರ, ನನಗ ಎಂದೆಂದೂ ಸಂಶೇ ಬರೂಹಾಂಗಿಲ್ಲೇನಪಾ ! ''

'' ಹುಚ್ಚ ಇದ್ದೀದೀ ಆತು. ಅಲ್ಲಲೇ ಚಿನ್ನಾ, ನೀ ಇನ್ನೂ ಹುಡಗ; ಪರಪಂಚೇದ ಕೆಟ್ಟ ಪೆಟ್ಟು ಇನ್ನೂ ನಿನಗ ಬಿದ್ದಿಲ್ಲ. ಅಲ್ಲಪಾ, ಹೀಂಗ ಆಡೂ ಮಾತಲ್ಲ! ಲೋಕದ ರೀತೀ ಯಾರಿಂದS ಬಿಡಿಸಲಿಕ್ಕೆ ಆದೀತು ಹೇಳು ! ಬೆಂಕೀ ಹತ್ತೀಲೆ ಬೆಣ್ಣೀ ಇಟ್ಟರ ಅದು ಕರಗದಽ ಇರತೈತೇ ? ಒಳೇ ಅರಳಿ ಕಂಪು ಸೂಸತಿರೂ ಸಂಪಿಗೀ ಹೂ ಕೈಗೆ ಸಿಕ್ಕಾಗ, ಮೂಸಿನೋಡ ಬೇಕಂತ ಯಾಂವಗ ಅನಸಾಕಿಲ್ಲಪಾ ! ಹಿರ್ಯಾರದೊಂದು ಮಾತು ಐತಿ ಕೇಳೀದೀಯೋ ಇಲ್ಲೊ ? ' ಹೆಣ್ಣು–ಹೊನ್ನು–ಮಣ್ಣು ಈ ಮೂರನ್ನ ಕಣ್ಣಿಂದ ಕಂಡು ಬಯಸದಂತಾ ಅಣ್ಣಾಂಗಳು ಯಾರು ?' ಅಂತ ! ಇನ್ನೊಂದು ಮಾತು ಕೇಳಿಲ್ಲS ! ಹರೇದ ಹೆಣ್ಣುಮಗಳ ಜೋಡೀ, ಹಡೆದ ತಂದಿ ಕೂಡಾ ಹೆಚ್ಚಾಗಿ ಮಾತಾಡಬಾರದಂತ ಶಾಸ್ತ್ರ ಐತಿ ! ಈ ಶಾಸ್ತ್ರದ ಮಾತಿಗೇನು

ಸುಳ್ಳಂತಿಯಾ?.. ಅಲ್ಲಲೇ, ರಾಮಪ್ಪಂದು ಏನು ದೊಡ್ಡಸ್ತಾನಾ ಹಚ್ಚೇದೀ? ಅವನೂ ನಮ್ಹಾಂಗs ಉಂಡುಟ್ಟ ಮನಿಸ್ಯಾ! ಅಂಥೇನ ದೇವರs, ಸಾಧೂನs, ಶಿವಶರಣs, ಸನ್ಯಾಸೇ, ಏನಪಾ ಅವಂದು ಹೆಚ್ಚುಗಾರಿಕಿ? ನೋಡಪಾ. ನಿಂದೂ ಅವಂದೂ ಜೀವಾಳದ ಗೆಣೆತಾನ. ಇಬ್ಬರದೂ ಹಾಲೂ ಹಣ್ಣಿನಂತಾ ಇಸ್ವಾಸ! ನಡುವ ನಾವ್ಯಾಕಪಾ ಹೋಗಿನವರು—ಮಾತಾಡಿ ಕೆಟ್ಟವರಾಗಬೇಕು!" ಮಾತುಮಾತೂ ಮೊನೆಮುಳ್ಳಿನಂತೆ ಇದ್ದುವು ರಾಮಯ್ಯನವು.

"ಚಿಕ್ಕಪ್ಪಾ, ನೀ ನೋಡು ನಮ್ಮ ನೀಲಿಗೆ ಏನು ಹೆಸರು ಇಟ್ಟರೂ ತಾಳಿಕೊಂಡೇನು; ಆದರ ರಾಮಣ್ಣನ ಹೆಸರಿಗೆ ಹೊಲಸು ಬಳಿಯೂದನ್ನ ನೋಡಿ ನನಗ ಕಸವಿಸೀ ಅನಸತೈತಿ. ಇನ್ನೊಮ್ಮೆ ಇಂಥಾ ಮಾತನ್ನ ನನ್ನ ಮುಂದ ಆಡಬ್ಯಾಡ, ತಿಳೀತೇನು? ನೋಡು, ರಾಮಪ್ಪ ನಮ್ಮ ನಿಮ್ಮೊಳಗಿನ ಮನಿಸ್ಯಾ ಅಲ್ಲ; ನಿಜಾ ಹೇಳಬೇಕಂದರ ಅಂವೊಬ್ಬ ಸಾಧೂನs!" ಚಿನ್ನಪ್ಪ ಚಲಿಸದ ಮನದಿಂದ ನುಡಿದ.

"ಗೊತ್ತೈತಿ ಬಿಡಲೇ. ಇಂತಾ ಕಾವುಸಾಧೂಗೋಳು ಜಗತ್ತಿನೊಳಗ ಬೇಕಾದಷ್ಟು ಮಂದಿ ಆದಾರು! ನೋಡು ಚಿನ್ನಾ, ಬರೇ ಸಾವಿರ ಸಾವಿರ ಮಾತಾಡೂದು ಯಾತಕ್ಕ ಬೇಕು? ಅದರಿಂದ ಆಗೂದಾದರೂ ಏನು? ಒಂದs ಒಂದು ಮಾತು ನಿಷ್ಟುರಾಗೇ ಹೇಳತೀನಿ ಕೇಳಿಲ್ಲೆ. ನೀಲಮ್ಮನ ಸಲುವಾಗಿ ರಾಮಪ್ಪನ ಮನಸು ತಿಳೀ ಏನೂ ಇಲ್ಲ! ನೀ ಬೇಕಾದರ ಪರೀಕ್ಷಾ ಮಾಡಿ ನೋಡು! ನಾ ನೋಡಿದ್ದನ್ನೆಲ್ಲಾ ನಿನ್ನ ಮುಂದ ಹೇಳಲಿಕ್ಕ ನನ್ನ ಮನಸು ಒಪ್ಪೂದಿಲ್ಲ. ಈಗೇನೂ ನಾ ಹೆಚ್ಚಿಗೆ ಹೇಳೂದಿಲ್ಲ. ಮನೀಗೆ ಬೆಂಕಿ ಹತ್ತೂದಕ್ಕ ಮೊದಲs ನೋಡಿಕೊಂಡು ಬಾಳೋದು ಒಳ್ಳೇದು! ಏನs ಇರಲಿ, ತಿಳೀತೇನು?—ನೀಲಮ್ಮನ ಮ್ಯಾಲ ನಿನ್ನ ಕಣ್ಣು ಇರಲೀ ಅತು!" ಎಂದು ನುಡಿದು ರಾಮಯ್ಯ, ಚಿನ್ನಪ್ಪನ ಹರಗಿ ಹದಗೊಳಿಸಿದ ಎದೆಯಲ್ಲಿ ಸಂಶಯದ ಬೀಜವನ್ನು ಬಿತ್ತಿದನು. ಕೂಡಲೆ 'ಮನೆಗೆ ಹೋಗತೀನಪಾ! ಕೆಲಸ ಬಿದ್ದೈತಿ ಹಾಂಗs ಮನ್ಯಾಗ ಇನ್ನೂ!' ಎಂದು ಹೇಳಿ ಹೊರಟುಬಿಟ್ಟನು. ಚಿನ್ನಪ್ಪ ಬಹಳ ವೇಳೆಯ

ವರೆಗೆ—ಆಲೋಚನೆಮಾಡುತ್ತ—ಕುಳಿತಲ್ಲಿಯೆ ಕುಳಿತಿದ್ದ. ರಾಮಯ್ಯನು ಊದಿದ ಮಾಟದ ಮಂತ್ರ ಅವನನ್ನು ಮಂಕುಗೊಳಿಸಿಬಿಟ್ಟಿದ್ದಿತೇನೊ !

ಎಂದಿನಂತೆ ಚಿನ್ನಪ್ಪ ನೀಲಮ್ಮನೊಡನೆ ಮಾತನಾಡುವನು; ನಗೆಯಾಡುವನು. ಆದರೆ ಅವನಿಗೀಗ ಅದಾವುದೋ ಸಂಕೋಚವೃತ್ತಿ ನಡುವೆ ಬಂದು ನಿಂತು, ಹಿಡಿದುಬಿಟ್ಟಂತೆ ಮಾಡುತ್ತಿದ್ದಿತು. ಚಿನ್ನಪ್ಪನ ಕಣ್ಣುಗಳಿಗೆ ಈಗ ಹೊಸದೊಂದು ಕೆಲಸ: ನೀಲಮ್ಮನ ಪ್ರತಿಯೊಂದು ಕೃತಿಯ ಕಡೆಗೂ ನಿಟ್ಟಿಸಿನೋಡುತ್ತಿರುವುದು. ನೀಲಮ್ಮನಿಗೆ ಇದಾವುದರ ಸುಳಿವು ಕೂಡ ತಿಳಿಯದು. ಅವಳು ತನ್ನ ಮೊದಲಿನ ದಿನಚರ್ಯೆಯಲ್ಲಿ ಕೊಂಚವೂ ಹೆಚ್ಚು ಕಡಿಮೆ ಮಾಡಿರಲಿಲ್ಲ.

೪

ರಾಮಮೂರ್ತಿಯ ತಂಗಿ ಇಂದಿರೆ, ಇದೀಗ ಅತ್ತೆಯಮನೆಯಿಂದ ಬಂದಿರುವಳು; ಆದುದರಿಂದ ನೀಲಮ್ಮನು ಕೈತೆರವು ಆದಾಗಲೆಲ್ಲ, ಕುಲಕರಣಿ ಯವರ ಮನೆಯಲ್ಲಿಯೇ ಬಂದು ಕುಳಿತುಕೊಳ್ಳುವಳು. ಇಬ್ಬರೂ ಕೂಡಿ ಅದೆಷ್ಟೋ ಮಾತನಾಡುವರು. ಏನನಾದರೂ ಆಟವನ್ನು ಆಡುವರು.

ಚಿನ್ನಪ್ಪನ ತಾಯಿ ಗಂಗಮ್ಮ ಭಾವಿಕ ಮುದುಕಿ. ಈಗಿನ ಕಾಲದಲ್ಲಿ ಅವಳಿಗೆ ಅರೆಹುಚ್ಚಿಯೆಂದು ಹೇಳಿದರೂ ನಡೆಯುವುದು. ಗಂಗಮ್ಮ ನಿಗೆ ಸೊಸೆಯು ತಪ್ಪುಮಾಡಿದುದೂ ತಿಳಿಯದು; ಒಪ್ಪುಮಾಡಿದುದೂ ತಿಳಿಯದು. ನೀಲಮ್ಮನಲ್ಲಿ ಅವಳದು ನಿರಪೇಕ್ಷವಾದ ಪ್ರೇಮ. ಮಗನ ಹೆಂಡತಿ, ಅಣ್ಣನ ಮಗಳು; ಅಲ್ಲದೆ ಗಂಗಮ್ಮನಿಗೆ ಹೆಣ್ಣುಮಕ್ಕಳಿರಲಿಲ್ಲ. ಮಗಳೆಂದರೂ ನೀಲಮ್ಮ, ಸೊಸೆಯೆಂದರೂ ನೀಲಮ್ಮ; ನೀಲಮ್ಮನೇನು ಮಾಡಿದರೂ ಅವಳಿಗೆ ಅಕ್ಕರತೆ. ನೀಲಮ್ಮ ಅಡ್ಡದಾರಿ ತುಳಿಯುವವಳಲ್ಲ ವೆಂದು, ಆ ಮುದುಕಿಯ ಭಾವಿಕ ನಂಬುಗೆ. ಅದರಂತೆಯೆ ನೀಲಮ್ಮನ ನಡೆವಳಿಕೆಯಾದರೂ ಗಂಗೆಯ ನೀರಿನಂತಹದು. ಅವಳು ಕುಲಕರಣಿ ಯರ ಮನೆಗೆ ಹೋಗಿಬರುತ್ತಿರುವುದಕ್ಕೆ ಅತ್ತೆಯದೇನೂ ಆಕ್ಷೇಪಣೆಯಿಲ್ಲ.

ಒಂದು ದಿನ ಸಂಜೆಯ ನಾಲ್ಕು ಗಂಟೆ; ಕುಲಕರಣಿಯರ ಮನೆಯಲ್ಲಿ ನೀಲಮ್ಮ-ಇಂದಿರೆ ಕೂಡಿ ಪಗಡೆಯನ್ನಾಡುತ್ತಿದ್ದರು. ರಾಮಮೂರ್ತಿ

ಬಳಿಯಲ್ಲಿಯೇ ನೋಡುತ್ತ ಕುಳಿತಿದ್ದ. ನಮ್ಮ ಅಕ್ಕ-ತಂಗಿಯರು ಆಡುತ್ತಿರುವಾಗ ನಾವು ಬಳಿಯಲ್ಲಿದ್ದು ನೋಡುವುದಿಲ್ಲವೆ ?

"ಇಂದಿರಾ, ಇಲ್ಲಿ ಸ್ವಲ್ಪ ಬಂದುಹೋಗೇ" —ಒಳಗಣಿಂದ ತಾಯಿಯ ಕೂಗು ಕೇಳಿಸಿತು. ಇಂದಿರೆಯು ಅವಸರದಿಂದ ಎದ್ದು ಹೋಗುವಾಗ ಕಾಲುತೊಡರಿ ಬೀಳುವಂತಾದಳು. "ಹಂ! ಮೆಲ್ಲಗೆ ಹೋಗವ್ಮಾ ! ಎಲ್ಲಿಯಾದರೂ ಬಿದ್ದು ಕಾಲುಗೀಲು ಮುರಿದುಕೊಂಡೆಯೆಂದರೆ, ಮತ್ತೆ ನಿನ್ನ ಗಂಡನಿಗೆ ನಾನೇನು ಹೇಳೋಣ" ಎಂದು ರಾಮಮೂರ್ತಿ ನಗುತ್ತ ನುಡಿದ. ನೀಲಮ್ಮನೂ ನಕ್ಕಳು.

ಇಂದಿರೆ ಒಳಗೆ ಹೋದಳು. ರಾಮಮೂರ್ತಿ, ನೀಲಮ್ಮ ಇಬ್ಬರೆ ನಡುಮನೆಯಲ್ಲಿ ಕುಳಿತಿದ್ದರು: ಆಗ ನಕ್ಕ ನಗೆ ಇನ್ನೂ ಇಬ್ಬರ ಮುಖದ ಮೇಲೂ ಮುಗುಳಾಗಿ ಮೂಡಿ ನಿಂತಿದ್ದಿತು.

ಚಿನ್ನಪ್ಪ ರಾಮಮೂರ್ತಿಯನ್ನು ಕಾಣಬೇಕೆಂದು ಬಂದನು. ಹಜಾರ ದಲ್ಲಿ ಇರಲಿಲ್ಲ, ನೇರವಾಗಿ ನಡುಮನೆಗೆ ಬಂದುಬಿಟ್ಟನು. ನೋಡಿದನು; ರಾಮಮೂರ್ತಿ-ನೀಲಮ್ಮ ಇಬ್ಬರೆ ಕುಳಿತಿರುವರು. ಇಬ್ಬರ ಮುಖದ ಮೇಲೂ ಮುಗುಳುನಗೆ. ಚಿನ್ನಪ್ಪನ ಎದೆ ದಡದಡಿಸಿತು: ನ್ಯೂನವಿರು ಎದ್ದು ನಿಂತಿತು. ಏನನೂ ಮಾತನಾಡದೆ, ಅದೆಂತಹದೊ ನೋಟದಿಂದ ನೀಲಮ್ಮನ ಕಡೆಗೊಮ್ಮೆ, ರಾಮಮೂರ್ತಿಯ ಕಡೆಗೊಮ್ಮೆ ನೋಡುತ್ತ ನಿಂತುಕೊಂಡನು.

"ಇದೇನೋ ಚಿನ್ನಾ ! ಹೀಂಗ್ಯಾಕ ನೋಡತಾ ನಿಂತುಕೊಂಡಿ ? ಏನು ಕೆಲಸ ಇತ್ತೇನು? ಇಂದಿರಾ, ನೀಲಮ್ಮ ಪಗಡೆಯಾಡತಿದ್ದರು. ತಮಾಷೆಗಾಗಿ ನಾನೂ ನೋಡತಾ ಕೂತೀನಿ. ಅಮ್ಮ ಕರೆದಳೂ ಅಂತ ಇಂದಿರಾ ಇದೇ ಈಗ ಒಳಗ ಹೋಗ್ಯಾಳ ! ನಿಂತುಕೊಂಡ್ಯಾಕ ? ಕೆಲಸ ಇಲ್ಲದಿದ್ದರ ನೀನೂ ಕೂತುಕೊ ! ಒಂದು ಗಳಿಗಿ ನೋಡೋಣ" ರಾಮಮೂರ್ತಿ ನಿರ್ವಿಕಾರ ಬುದ್ಧಿಯಿಂದ ನುಡಿದನು.

ಚಿನ್ನಪ್ಪನು ತನ್ನ ಬಗೆಯನ್ನು ಹೆಚ್ಚಾಗಿ ಹೊರಗೆ ತೋರಗೊಡಲಿಲ್ಲ. ನನುವೆ ತೋರಿಸಿದ್ದರೂ ಅದನ್ನು ಒಮ್ಮೆಲೆ ಕಂಡುಕೊಳ್ಳುವಷ್ಟು ರಾಮಮೂರ್ತಿಯ ಬುದ್ಧಿ ಚುರುಕೂ ಅಲ್ಲ.

"ಈಗ ಕೆಲಸ ಜಾಳ ಐತಿ ! ಕೂತುಕೊಳ್ಳೊ ಹಾಂಗ ಇಲ್ಲ. ಬಾಳೀ ಕಾಯಿಗೆ ಕಿರಾಕಿ ಬಂದ್ಯೈತಿ: ನೀವು ನಾಳೆ ಮುಂಜಾನೆ ತೋಟಕ್ಕ ಬಂದ ಬಿಡ್ರಿ ! ಇದನ್ನ ಹೇಳಿಹೋಗಬೇಕಂತs ಇಲ್ಲಿಗೆ ಬಂದಿದ್ದೆ '' ಎಂದು ನುಡಿದವನೆ ಚಿನ್ನಪ್ಪ ನಡೆದೇ ಬಿಟ್ಟ. ಅಲ್ಲಿ ನಿಲ್ಲಲೇ ಇಲ್ಲ.

ನೀಲಮ್ಮನು ಚತುರೆ. ಚಿನ್ನಪ್ಪನ ನೋಟದ ಬಗೆಯನ್ನೂ, ಮಾತಿನ ರೀತಿಯನ್ನೂ, ಅವಸರದಿಂದ ಅಲ್ಲಿ ನಿಲ್ಲದೆ ಹೋಗಿ ಬಿಟ್ಟುದನ್ನೂ ಕಂಡಳು. "ಇದೇನೋ ಹೊಸಬಗೆಯಾಗಿರುವುದು !" ಎಂದು ತಿಳಿದಳು. ಎದೆ ಗದಗದಿಸಿತು, ಮೋರೆಯ ಕಳೆ ಇಳಿಯಿತು, ಆಡುವುದಕ್ಕೆ ಮನಸ್ಸು ಒಲ್ಲೆನೆಂದಿತು. ಇಂದಿರೆಯು ಬಂದೊಡನೆಯೆ ಏನೇನೋ ಮನೆಗೆಲಸದ ಕಾರಣ ಹೇಳಿ, "ಮತ್ತೆ ಬರುತ್ತೇನೆ '' ಎಂದು ನುಡಿದು, ಮನೆಗೆ ಹೊರಟುಬಿಟ್ಟಳು.

ಚಿನ್ನಪ್ಪನು ಅಂದು ತೋಟದಿಂದ ಮನೆಗೆಬಂದ; ಮೋರೆ ಬಾಡಿದ್ದಿತು. ಏನೇನನೋ ಯೋಚಿಸುತ್ತಿರುವಂತೆ ಕಂಡಿತು. "ನೀಲೀ, ಇನ್ನಮ್ಯಾಗ ಕುಲಕರ್ಣ್ಯಾರ ಮನಿಗೆ ಕಾಲ ಹಾಕೂ ಕಾರಣೆಲ್ಲ ನೀನು ! '' ಎಂದು ಚಿನ್ನಪ್ಪನು ಬಿಟ್ಟಿತಾದ (ಕರ್ಕಶವಾದ) ಮಾತಿನಿಂದ ನೀಲಮ್ಮನಿಗೆ ಅಂದೆಯೆ ಹೇಳಿದ. ಕೇಳಿ ಅವಳೆದೆಗೆ ಸಿಡಿಲುಬಡಿದಂತಾಯಿತು. "ತನ್ನ ಗಂಡನ ಮನಸ್ಸು ಇಂದೆಯೇ ಹೀಗಾಗಲು ಕಾರಣವೇನು?" ಎಂದು ಯೋಚಿಸಿದಳು.

ರಾಮಮೂರ್ತಿಯ ವಿಷಯದಲ್ಲಿ ಚಿನ್ನಪ್ಪನ ಮನಸ್ಸು ಕಲುಷಿತವಾಗಿದ್ದರೂ ಅವನ ಸೌಮ್ಯವಾದ ಸಾತ್ತ್ವಿಕ ಮುಖವನ್ನು ನೋಡಿದಾಗ, ಮೋಸವೇನೇನೂ ಬೆರೆಯದ ಮಾತುಗಳನ್ನು ಕೇಳಿದಾಗ, ಹೃದಯದ ಹೊಲಸು ಉಡುಗುತ್ತಿದ್ದಿತು. ಮತ್ತೆ ರಾಮಮೂರ್ತಿಯ ಮುಖವು ಮರೆಯಾದೊಡನೆಯೆ, ಚಿನ್ನಪ್ಪನ ಎದೆಯಲ್ಲಿ ಚಿಂತೆಯ ಸಂತೆ ನೆರೆಯುವುದು; ಕ್ರೋಧ-ಮತ್ಸರಗಳು ಕೇಕೆಹಾಕಲು ತೊಡಗುವುವು. ರಾಮಮೂರ್ತಿಯಿಂದ ಆದಷ್ಟು ದೂರವಿರಬೇಕೆಂದು ಮನವೆಳಸುವುದು. ರಾಮಮೂರ್ತಿಯ ಪರಿಶುದ್ಧವಾದ ಪ್ರೇಮದ ನೆನಪಾದೊಡನೆಯೆ ಚಿನ್ನಪ್ಪನ ಮನವು ಮತ್ತೆ ತೂಗುಯ್ಯಾಲೆಯನ್ನಾಡುವುದು.

೫

ಕನ್ನಡಿಯು ಅದೆಷ್ಟು ಹೊಳಪುಳ್ಳದೇ ಇರಲಿ! ಚೊಕ್ಕಟವಾಗಿ ಒರಸುತ್ತಿರದಿದ್ದರೆ ದಿನಾಲು ಅಷ್ಟಷ್ಟು ಧೂಳಿ ಕುಳಿತು, ಮುಖ ಕಾಣದಂತೆ ಆಗುವುದು. ಮನುಷ್ಯನ ಒಳಗನ್ನಡಿಯದಾದರೂ ಇದೇ ರೀತಿ. ಯಾವ ವಿಷಯಕವಾಗಿಯಾದರೂ ಸಂಶಯ ಬಂದಾಗ, ಅದನ್ನು ಹೊರಗೆ ಆಡಿತೋರಿಸಿ ಸಂಶಯನಿರಸನ ಮಾಡಿಕೊಳ್ಳದಿದ್ದರೆ, ಆ ಒಳಗನ್ನಡಿಗೂ ಹೊಲಸು ಮುಸುಕುತ್ತ ಹೋಗುವುದು. ಸಂಶಯಾಸ್ಪದರಾದ ಜನರ ಪ್ರತಿಯೊಂದು ಕೃತಿಯನ್ನೂ ಮನುಷ್ಯನು ಆಗ ವಿಪರೀತವಾಗಿ ತಿಳಿಯಲಾರಂಭಿಸುವನು; ಅವರಿಂದ ಸ್ವಾಭಾವಿಕವಾಗಿ ತಪ್ಪುತಡೆಗಳಾದರೂ ಅವುಗಳನ್ನು ಅಪರಾಧವಾಗಿ ಭಾವಿಸುವನು. ಚಿನ್ನಪ್ಪನು ಮೂರು ನಾಲ್ಕು ದಿನಗಳಿಂದ ಕುಲಕರಣಿಯರ ಮನೆಗೆ ಬಂದಿರಲಿಲ್ಲ. ರಾಮಮೂರ್ತಿಗೆ ಚಿನ್ನಪ್ಪನನ್ನು ಕಾಣಬೇಕೆಂದು ಕುತೂಹಲ; ಎಂತಲೆ ತಾನಾಗಿಯೆ ಚಿನ್ನಪ್ಪನ ಮನೆಗೆ ಹೋದನು. ಚಿನ್ನಪ್ಪನಿನ್ನೂ ತೋಟದಿಂದ ಬಂದಿರಲಿಲ್ಲ; ಗಂಗಮ್ಮನೂ ಮನೆಯಲ್ಲಿರಲಿಲ್ಲ; ಎಲ್ಲಿಯೊ ಹೊರಗೆ ಹೋಗಿದ್ದಳು. ನೀಲಮ್ಮ ಕಾಳುಕಡಿ ಹಸನುಮಾಡುತ್ತ ಪಡಸಾಲೆಯಲ್ಲಿಯೆ ಕುಳಿತಿದ್ದಳು.

“ಏನು ನೀಲವ್ವಾ! ಚಿನ್ನ ಇನ್ನೂ ಮನಿಗೆ ಬಂದಿಲ್ಲೇನು?” ರಾಮಮೂರ್ತಿ ಆತುರದಿಂದ ಕೇಳಿದ.

“ಇಲ್ಲ; ಇನ್ನೂ ಬಂದಿಲ್ಲ. ಇಷ್ಟರೊಳಗ ಬೇಕಾಗಿತ್ತು! ಏನು ಕೆಲಸ ಇತ್ತೇನು?” ನೀಲಮ್ಮನು ಸ್ವಾಭಾವಿಕವಾದ ಮೆಲುನಗೆಯ ಮುಖದಿಂದ ಕೇಳಿದಳು.

“ಕೆಲಸವೇನೂ ಇರಲಿಲ್ಲ; ಮೂರು ನಾಲ್ಕು ದಿನಾ ಆಯ್ತು; ಚಿನ್ನಪ್ಪನ್ನ ನೋಡೇ ಇಲ್ಲ. ಮನೀ ಕಡೆ ಯಾಕ ಬಾದಿಲ್ಲಾ ಅಂಬೂದನ್ನ ನೋಡಬೇಕಂತ ಬಂದೆ!” ರಾಮಮೂರ್ತಿ ಹೇಳಿದ.

ನೀಲಮ್ಮನ ಮನವು ಹೇಗೆ ಹೇಗೆಯೋ ಆಯಿತು. ಅದು ಬಹಿರಂಗದಲ್ಲಿ ಒಡೆದುತೋರದಂತೆ ಅವಳು ಎಚ್ಚರಪಟ್ಟಳು. “ಮೂರು ನಾಕು ದಿನಾ ಆತು. ನನಗೂ ಬರಲಿಕ್ಕೆ ಆಗೇ ಇಲ್ಲ; ಇಂದಿರಕ್ಕ ಏನಂತಾಳೋ

ಏನೋ! ಮನಿಗೆಲಸದಾಗ ತೆರಪಃ ಸಿಗೂದಿಲ್ಲ!" ನೀಲಮ್ಮನು ವಸ್ತುಸ್ಥಿತಿಯನ್ನು ವರ್ಣನೆ ಮಾಡಿ ಹೇಳಿದಳು.

"ನೀಲಮ್ಮ ಯಾಕ ಬಂದಿಲ್ಲೋ ಏನೋ– ಅಂತ, ಇಂದಿರಾ ಯಾವಾಗಲೂ ಕನವರಿಸತಾನೇ ಇದ್ದಾಳ. ಇರಲಿ! ನೀಲವ್ವಾ, ನಾ ಇಲ್ಲಿಗೆ ಬಂದಿದ್ದೆನಂತ ಚಿನ್ನಪ್ಪಗ ಹೇಳು. ಅವನ್ನ ನಮ್ಮ ಮನೀಗೆ ಕಳಿಸು" ರಾಮಮೂರ್ತಿ ಮಾತನಾಡಿ ಮರಳಿ ನಡೆದ. ಇನ್ನೂ ಬಾಗಿಲು ದಾಟಿರಲಿಲ್ಲ; ಹೊರಗಣಿಂದ ಚಿನ್ನಪ್ಪನೂ ಬಂದ. ರಾಮಮೂರ್ತಿಯನ್ನು ಮನೆಯಲ್ಲಿ ಕಂಡು ಚಿನ್ನಪ್ಪ ಸಂತಪ್ತನಾದ.

ಚಿನ್ನಪ್ಪನು ಮಾತನಾಡುವುದಕ್ಕೆ ಮೊದಲೇ ರಾಮಮೂರ್ತಿ ನುಡಿದನು: "ಏನೋ ಚಿನ್ನಾ! ಈಗ ಮೂರು ನಾಲ್ಕು ದಿನಾ ಆತು. ಮನೀ ಕಡೆ ಬಂದೇ ಇಲ್ಲವಲ್ಲ! ಆದ್ಯಾಕ ಹೀಂಗಾತಂತ ನೋಡಿ ಬರಬೇಕಂತ ಈಗ ನಾನೇ ಬಂದಿದ್ದೆ! ಇನ್ನೂ ಊಟ ಆಗಿಲ್ಲೇನೊ! ಮೊದಲು ಊಟಾ ಮಾಡು! ಆ ಮ್ಯಾಲ ಕೆಲಸೇನೂ ಇಲ್ಲದಿದ್ದರ 'ಮನೀ ಕಡೆ ಬಂದುಬಿಡು!'

ರಾಮಮೂರ್ತಿಯು ಅಂತಃಕರಣದಿಂದಾಡಿದ ಈ ಮಾತುಗಳಿಂದ, ಚಿನ್ನಪ್ಪನ ಸಂತಾಪವು ಕೊಂಚ ಶಮನವಾಯಿತು. "ತೋಟದೊಳಗ ಕೆಲಸ ಬಾಳ ಐತಿ; ಬರಲಿಕ್ಕೆ ತೆರಪಃ ಇಲ್ಲ! ಊಟಾಮಾಡಿ ನಾ ಬರತೇನಿ; ನೀವು ನಡೀರಿ" ಎಂದು ಕುಗ್ಗಿದ ದನಿಯಲ್ಲಿ ಮಾತನಾಡಿದ ಚಿನ್ನಪ್ಪ.

ರಾಮಮೂರ್ತಿ ಹೊರಟುಬಿಟ್ಟ. ಚಿನ್ನಪ್ಪನ ಮನದಲ್ಲಿ ಮತ್ತೆ ಗಲಾಟೆಯೆದ್ದಿತು. ರಾಮಮೂರ್ತಿ ತಾನಿಲ್ಲದಾಗ– ತಾಯಿಯಿಲ್ಲದಾಗ– ತಮ್ಮ ಮನೆಗೆ ಬಂದುದಕ್ಕಾಗಿ, ಬಗೆಹರಿಯದ ಯೋಚನೆಯವನಿಗೆ. ಊಟವನ್ನು ಕೂಡ ಸರಿಯಾಗಿ ಮಾಡಲಿಲ್ಲ. "ಹೀಗೇಕೆ" ಎಂದು ನೀಲಮ್ಮ ಕೇಳಿದರೆ "ಇಂದ ಯಾಕೋ ಮೈಯಾಗ ನೆಟ್ಟಗಿಲ್ಲ" ಎಂದು ಚಿನ್ನಪ್ಪನ ಉತ್ತರ. ಹೆಚ್ಚಿಗೆ ಮಾತುಗಳಿಲ್ಲ. ನೀಲಮ್ಮನು ಇದನ್ನೆಲ್ಲ ಕಂಡು ಹುಚ್ಚಿಯಂತಾದಳು. ಊಟವಾದೊಡನೆ ಚಿನ್ನಪ್ಪನು ಕುಲಕರಣಿಯರ ಮನೆಗೆ ಹೋಗಲಿಲ್ಲ; ಮುಸುಕುಹಾಕಿಕೊಂಡು ಮಲಗಿಬಿಟ್ಟ. ಮಲಗಿದುದು ನಿದ್ರೆಯಲ್ಲಿಯೊ ಯೋಚನೆಯಲ್ಲಿಯೊ ತಿಳಿಯದು.

ಇದಾದ ಮರುದಿನದ ಸಂಜೆಯ ಕಡೆಗೆ, ರಾಮಮೂರ್ತಿ ಚಾವಡಿಯ ಕಟ್ಟೆಯ ಮೇಲೆ ಕುಳಿತುಕೊಂಡಿದ್ದ. ಬಳಿಯಲ್ಲಿ ಇನ್ನೂ ಎಷ್ಟೋ ಜನರು ಕುಳಿತಿದ್ದರು. ಅವರಲ್ಲಿ ಚಿನ್ನಪ್ಪನೂ ಇದ್ದ. ಎಲ್ಲರೂ ಕೂಡಿ ಏನೇನನೋ ಮಾತನಾಡುತ್ತಿದ್ದರು. ನಡುನಡುವೆ ಗಟ್ಟಿಯಾಗಿ ನಗುತ್ತಿದ್ದರು. ನೀರು ತರಲು ಹೋಗಿಬರುವ ದಾರಿ, ಈ ಚಾವಡಿಯ ಮುಂಬದಿಯಲ್ಲಿಯೇ ಹಾಯ್ದು ಹೋಗುವುದು. ನೀರ ಕೊಡ ಹೊತ್ತುಕೊಂಡು, ದನಗಳಿಗೆ ನೀರು ಕುಡಿಸಿಕೊಂಡು, ಅದೆಷ್ಟೋ ಜನರು ಹೋಗಿಬರುತ್ತಲಿದ್ದರು.

ನೀಲಮ್ಮನು ನೀರುತುಂಬಿದ ಕೊಡ ಹೊತ್ತುಕೊಂಡು ಬಂದಳು. ಸಂಗಡ ಬೇರೆ ನಾಲ್ಕಾರು ಜನ ಹೆಣ್ಣುಮಕ್ಕಳು: ಎಲ್ಲರೂ ಕೂಡಿ ಮಾತನಾಡುತ್ತ ಬರುತ್ತಲಿದ್ದರು. ತೀರ ಚಾವಡಿಯ ಬಳಿಗೆ ಬಂದರು. ತಮ್ಮೊಳಗೆ ಅದಾವ ಮಾತನಾಡಿದ್ದರೊ.. ಎಲ್ಲರ ಮೋರೆಯ ಮೇಲೂ ನಗೆಮಲ್ಲಿಗೆ ಅರಳಿದ್ದಿತು. ಎಲ್ಲರೂ ಚಾವಡಿಯ ಬಳಿಯಿಂದ ಹಾಯ್ದು ಹೋದರು. ಹೋಗುವಾಗ ನೀಲಮ್ಮನ ನಗೆಮೊಗದ ನೋಟ, ರಾಮಮೂರ್ತಿಯ ನೋಟ ಸ್ವಾಭಾವಿಕವಾಗಿ ಸಮ್ಮಿಲಿತವಾದುವು. ಇವರಿಬ್ಬರ ನೋಟದ ಕೂಟವನ್ನು ಚಿನ್ನಪ್ಪನು ಕಂಡುಹಿಡಿದ. ಮೈಜುಮ್ಮೆಂದಿತು, ನವಿರೆದ್ದಿತು. ಸಂಶಯಸಾಗರದಲ್ಲಿ ಬಲವಾದ ಬಿರುಗಾಳಿ ಬೀಸಿ, ತೆರೆಗಳು ತಾಕಲಾಡಿದುವು. ಹೃದಯದಲ್ಲಿ ಅಸಹ್ಯವಾದ ಗಲಿಬಿಲಿಯುಂಟಾಯಿತು. ಕೆಂಗಣ್ಣು ಕೆರಳಿದುವು. ತಲೆಯು ಕಾಯ್ದುಹೋಯಿತು. ಅದೆಲ್ಲವನ್ನು ಮುಚ್ಚಿಕೊಂಡು ಕೆಲವೇಳೆ ಹಾಗೆಯೇ ಕುಳಿತ. ಬಳಿಕ ಮನೆಗೆ ಹೋಗುವೆನೆಂದು ಹೊರಟ. ಹೋಗುವಾಗ ಚಿನ್ನಪ್ಪನು ರಾಮಮೂರ್ತಿಯನ್ನು ಹೃದಯವಿದಾರಕವಾದ ನೋಟದಿಂದ ನೋಡಿದ. ರಾಮಮೂರ್ತಿ ಇದನ್ನೇನೂ ಕಾಣಲಿಲ್ಲ.

* * *

ನೀಲಮ್ಮನ ವಿಷಯವಾಗಿ ಚಿನ್ನಪ್ಪನ ಬಗೆಯಲ್ಲಿ ಹುಟ್ಟಿದ ಸಂಶಯದ ಸಸಿಯು ಇಂದು ಬೆಳೆದು, ಮರವಾಗಿ, ಫಲಬಿಟ್ಟಿತು. ನೀಲಮ್ಮನ ಮುಗುಳು ನಗೆಯು, ಚಿನ್ನಪ್ಪನ ಕಣ್ಣಲ್ಲಿ ಮುಳ್ಳಿನಂತೆ ಚುಚ್ಚಲುತೊಡಗಿತು. ಅವಳ ಚೆಲುವಿಕೆಯು, ಚೇಳಿನಂತೆ ಎದೆಗೆ ಕುಟುಕಲು ತೊಡಗಿತು.

ನಲುಮೆಯ ಮೆಲುಮಾತುಗಳು ಕಾದ ಪಾದರಸದಂತೆ ಕಿವಿಯನ್ನು ಭೇದಿಸಲು ತೊಡಗಿದುವು. ಚಿನ್ನಪ್ಪನ ಭಾವರಾಜ್ಯದ ರಾಣಿಯಾದ ನೀಲಮ್ಮನೀಗ, ಕ್ರೂರರಕ್ಕಸಿಯಾಗಿ ತೋರಿದಳು. ಚಿನ್ನಪ್ಪನು ಹೆಂಡತಿಯೊಡನೆ ಮನಸಬಿಚ್ಚಿ ಮಾತನಾಡದಾದನು.... ಸರಸವಾಡುವುದೂ ನಗುವುದೂ ದೂರವೇ ಉಳಿಯಿತು. ನೀಲಮ್ಮ ಏನನಾದರೂ ಅಂತಃಕರಣದಿಂದ ಮಾತನಾಡಿಸಿದರೆ ಚಿನ್ನಪ್ಪನಿಗೆ ಅಸಹ್ಯವೆನಿಸಲು ತೊಡಗಿತು.

ಚಿನ್ನಪ್ಪ ಹೀಗೇಕೆ ಮಾಡುತಿರುವನೆಂಬುದು ನೀಲಮ್ಮನಿಗೆ ತಿಳಿಯದು. ಆದರೂ ತನ್ನ ವಿಷಯದಲ್ಲಿ ಇವನು ಏನನ್ನೊ ಸಂಶಯಪಟ್ಟುಕೊಂಡಿದ್ದಾನೆ-ಎಂಬುದನ್ನು ಸರಿಯಾಗಿ ಕಂಡುಹಿಡಿದಳು. ಇದನ್ನು ದೂರಮಾಡಲು ಹಂಚಿಕೆ ಹಾಕಿ ದಣಿದಳು. ಕಳವಳದಿಂದ ಕಂಬನಿಗರೆದಳು.

ಚಿನ್ನಪ್ಪನಿಗೆ ನೀಲಮ್ಮನು ದಿನದಿನಕ್ಕೂ ಹೆಚ್ಚು ಹೆಚ್ಚು ತ್ಯಾಜ್ಯಳಾಗಿ ತೋರಲು ತೊಡಗಿದಳು. ನೀಲಮ್ಮನ ಎದೆಯೊಡನೆ ಬೆಸುಗೆಯೊಂದಿದ್ದ ಚಿನ್ನಪ್ಪನ ಎದೆಯಿಗಾಗ ಬಿಟ್ಟು ಬೇರೆಯಾಯಿತು.

ಹೃದಯವು ಬಿಡುವುದಕ್ಕೂ ಕೂಡುವುದಕ್ಕೂ ಬಹಳ ವೇಳೆ ಬೇಕಾಗುವುದಿಲ್ಲ. ಅರಳಿ ನಗುತಿರುವ, ಕಂಪುಸೂಸುವ ಗುಲಾಬಿಯ ಹೂವೊಂದನ್ನು ನಾವು ನೋಡಿದೆವೆಂದರೆ, ಅದನ್ನು ತೆಗೆದುಕೊಂಡು ಮುಡಿಯಬೇಕೆಂಬ ಬಯಕೆಯುಂಟಾಗುವುದಕ್ಕೆ ಬಹಳ ವೇಳೆ ಬೇಕಾಗುವುದೇನು ! ಅದರಂತೆಯೆ ಯಾವುದಾದರೊಂದು ಒಡವೆಯು ಅಸಹ್ಯವೆಂದು ಮನಸ್ಸಿಗೆನಿಸಿದರೆ, ಅದನ್ನು ಬೀಸಾಡಿ ಬಿಡಬೇಕೆಂಬ ಭಾವನೆಯುಂಟಾಗಲಿಕ್ಕೂ ಬಹಳ ವೇಳೆ ಬೇಕಿಲ್ಲವಷ್ಟೆ ? ಇವೆರಡೂ ಭಾವನೆಗಳು ಮುಗಿಲಲ್ಲಿ ಮಿಂಚು ಮೂಡಿದಂತೆ ನಮ್ಮೆದೆಯಲ್ಲಿ ಮೂಡುವುವು. ಇದೆಲ್ಲವೂ ಆ ಕಾಲರಾಯನ ಕೈಯ ಚಳಕ !!!— ರಾಮಮೂರ್ತಿಯು ಯಾವ ಪಾಪವನ್ನೂ ಅರಿಯದವನು. "ಮೊದಲಿನಂತೆ ಚಿನ್ನಪ್ಪ ತನ್ನೊಡನೆ ಮನಸ್ಸುಬಿಚ್ಚಿ ಮಾತನಾಡನೇಕೆ? ಹೆಚ್ಚಾಗಿ ಮನೆಗೆ ಬರಲೊಲ್ಲನೇಕೆ?" ಎಂದು ಯೋಚಿಸಿ ಯೋಚಿಸಿ ಹಣ್ಣಾಗುವನು.

ನೀಲಮ್ಮನ ತವರೂರರಲ್ಲಿ ಜಾತ್ರೆ. ಎಲ್ಲರನ್ನೂ ಕರೆದುಕೊಂಡು ಹೋಗಬೇಕೆಂದು ನೀಲಮ್ಮನ ತಂದೆ ಕಲ್ಲಹಳ್ಳಿಗೆ ಬಂದನು. ಚಿನ್ನಪ್ಪನಿಗೆ ನೀಲಮ್ಮನಲ್ಲಿ ಅನಾದರವುಂಟಾಗಿದ್ದರೇನಾಯಿತು ; ಮನೆಗೆ ಬಂದ ಮಾವನನ್ನು ಆದರಿಸಿದ, ಉಪಚರಿಸಿದ. ಬಹಳ ದಿವಸಕ್ಕೆ ಅಣ್ಣ ಬಂದಿರುವನೆಂದು ಗಂಗಮ್ಮ ಸವಿಯೂಟದ ಅಡಿಗೆ ಮಾಡಿದಳು. ಚಿನ್ನಪ್ಪನು ತನ್ನ ಮನಸ್ಸಿನ ದುಗುಡವನ್ನು ನಸುವೂ ತೋರಗೊಡಲಿಲ್ಲ.

ರಾತ್ರಿಯ ಊಟವಾದೊಡನೆ ಚಿನ್ನಪ್ಪ, ಅವನ ಮಾವ ಮಾತನಾಡುತ್ತ ಕುಳಿತರು. "ಎಲ್ಲರೂ ಜಾತ್ರೆಗೆ ಬರಬೇಕು" ಎಂದು ಅದೆಷ್ಟೋ ಬಲವಂತದಿಂದ ಮಾವ ಹೇಳಿದ. ಚಿನ್ನಪ್ಪ ಸಮ್ಮತಿಸಲಿಲ್ಲ. ಏನೇನೋ ಮನೆತನದ ತೊಂದರೆಗಳನ್ನು ಮುಂದೆ ಮಾಡಿ, ತನಗೆ ಬರುವುದಾಗದೆಂದು ನುಡಿದ. ಮಾವನು ಹಂಚಿಕೆಗಾಣದವನಾಗಿ ಹೋದ. "ನೀಲಮ್ಮನನ್ನಾದರೂ ಕಳಿಸತೀಯೋ ಇಲ್ಲೋ ?" ಎಂದು ಮತ್ತೆ ದೈನ್ಯದಿಂದ ಕೇಳಿದ.

ಚಿನ್ನಪ್ಪ ಸ್ವಲ್ಪ ಕಾಲ ಏನನೋ ಯೋಚಿಸಿದ; ಬಳಿಕ ಮೆಲ್ಲಗೆ ಹೇಳತೊಡಗಿದ : "ಆಗಲಿ ಮಾವಾ, ಆಕಿನ್ನ ಕರಕೊಂಡು ಹೋಗು ಬೇಕಾದ್ಹಾಂಗ! ಇನ್ನೊಂದೆರಡು ದಿನಕ್ಕ ಆಕಿನ್ನ ನಾನs ನಿಮ್ಮ ಊರಿಗೆ ಕಳಿಸಿ ಬರಬೇಕಂತ ಮಾಡಿದ್ದೆ. ಈಗ ನೀನs ಬಂದೀದೀ ; ಒಳ್ಳೇದs ಆತು. ನನಗೂ ಆ ಕಡೆ ಈ ಕಡೆ ಹೋಗಿ ಬರಬೇಕಾಗೇತಿ ; ಅಲ್ಲೀತನಕಾ ಅಂದರ ನಾನs ಕರೀಲಿಕ್ಕೆ ಬರೂತನಕಾ ಆಕಿ ನಿಮ್ಮಲ್ಲೇ ಇದ್ದು ಬಿಡಲಿ!"

ಚಿನ್ನಪ್ಪ ಸಮಾಧಾನದ ಸೋಗಿನಿಂದ ಹೇಳಿದ ; ಆದರೆ ಅವನ ಎದೆ ಎಡೆಬಿಡದೆ ದಡದಡಿಸುತ್ತಿತ್ತು; ನಾಲಗೆ ಎಡಹುತ್ತಿತ್ತು.

ಚಿನ್ನಪ್ಪನ ಮಾತಿನ ರೀತಿ, ಮುದಿತನದ ಮಂದಬುದ್ಧಿಯ ಮಾವನಿಗೆ ತಿಳಿಯಲಿಲ್ಲವೇನೊ! ಕೇಳಿ ವಿಶೇಷವೇನೂ ಎನಿಸಲಿಲ್ಲ. ನೀಲಮ್ಮನನ್ನು ಕರೆದುಕೊಂಡು ಹೊರಟುಬಿಟ್ಟನು. ಗಂಗಮ್ಮನನ್ನು ಕರೆದರೆ ಅವಳೂ ಒಲ್ಲೆನೆಂದಳು. 'ತಾನು ಕೆಲವು ದಿನ ಕಣ್ಣುಮರೆಯಾಗಿದ್ದರಾದರೂ, ತನ್ನ ಗಂಡನ ಮನದ ತೊಡಕು ಕಡಿಮೆಯಾಗಬಹುದು' ಎಂದು ನೀಲಮ್ಮನಿಗೆ

ಎನಿಸಿತು. ಅದಕ್ಕೆಂತಲೇ ಅವಳು ಊರಿಗೆ ಹೊರಡಲು ಒಪ್ಪಿದಳು. ತನ್ನನ್ನು ಬಿಟ್ಟು ಒಬ್ಬಳೆ ಹೊರಡಲು ನೀಲಮ್ಮ ಸಮ್ಮತಿಸಿದುದೂ, ಚಿನ್ನಪ್ಪನಿಗೆ ವಿಪರೀತವಾಗಿಯೆ ಕಂಡಿತು. ಆಯಿತು, ಒಮ್ಮೆ ನೀಲಮ್ಮನು ಚಿನ್ನಪ್ಪನ ಹೊರಗಣ್ಣಿಂದ ಮರೆಯಾದಳು.

* * *

ಚಿನ್ನಪ್ಪ ರಾಮಮೂರ್ತಿಯ ನಲುವಾಗಿ ಎಷ್ಟೋ ಮನನೊಂದು ಕೊಂಡಿದ್ದನು. ಅವನಿಂದಲೆ ತಾನು ಬಾಳುವೆಗೇಡಾಗುವ ವೇಳೆಯೊದಗಿತೆಂದು ಪೂರ್ತಿಯಾಗಿ ತಿಳಿದಿದ್ದನು. ಆದರೆ ಕುಲಕರಣಿಯರ ಮನೆತನದ ಮೇಲಿನ ಮಮತೆ, ಚಿನ್ನಪ್ಪನಿಗೆ ನಸುವೂ ಕಡಿಮೆಯಾಗಿರಲಿಲ್ಲ. ಮನೆಯವರೆಲ್ಲರೊಡನೆಯೂ ಮೊದಲಿನಂತೆ ಮನಬಿಚ್ಚಿ ಮಾತನಾಡುತ್ತಿದ್ದ. ತೋಟವನ್ನಿನ್ನೂ ಬಿಟ್ಟಿರಲಿಲ್ಲ. ಆದರೆ ರಾಮಮೂರ್ತಿಯೊಡನೆ ಮಾತ್ರ, ಹೆಚ್ಚಾಗಿ ಮಾತು-ಕತೆಗಳಿಲ್ಲ. ಎಂದಾದರೂ ಕಾರಣವಿಶೇಷದಿಂದ ಮಾತನಾಡಿದರೆ ಬಾಯಿಂದಷ್ಟೇ ! ಹೃದಯದಿಂದಲ್ಲ.

* * *

ನೀಲಮ್ಮನನ್ನು ಕಳುಹಿದರೂ ಚಿನ್ನಪ್ಪನ ಜೀವಕ್ಕೆ ಸಮಾಧಾನವಿಲ್ಲ. ಮೊದಲಿಗೆ ಇಮ್ಮಡಿಯಾಗಿ ಈಗ ಅವನಿಗೆ ಯೋಚನೆ. ಒಂದೇ ಒಂದು ತಿಂಗಳಲ್ಲಿ ಆನೆಯಂತಿದ್ದ ಚಿನ್ನಪ್ಪ ಆಡಿನಂತಾದ. ಕೆಲಸಕ್ಕೆ ಒಲ್ಲದ ಮನದವನಾದ. ತುಂಬಿ ತಳತಳಿಸುತ್ತಿದ್ದ ಚಿನ್ನಪ್ಪನ ಮೋರೆ ಈಗ ಒಣಗಿದ ಸಂಡಿಗೆಯಂತಾಗಿದ್ದಿತು. ಅವನ ತಾಯಿಗೆ ಇದೆಲ್ಲದರ ಕಾರಣ ಹೇಗೆ ಗೊತ್ತಾಗಬೇಕು ? “ ಅಯ್ಯೋ ! ನನ್ನ ಮಗ ಇಷ್ಟ್ಯಾಕ ಸೊರಗಿದ. .ಯಾರೇನು ಮದ್ದು ಹಾಕಿದರೋ ! ಮಾಟಾಮಾಡಿದರೋ!–” ಎಂದು ನುಡಿದು, ತನಗಾಗದವರನ್ನು ಬೈಯುವಳು; ಗಟ್ಟಿಯಾಗಿ ಅಳುವಳು.

ರಾಮಮೂರ್ತಿ ಚಿನ್ನಪ್ಪನ ಮನವನ್ನು ಗುರುತಿಸದೆ, ಮುಂದುವರಿದು ತಾನಾಗಿಯೆ ಮಾತನಾಡಿಸುವನು. “ ಏನೋ ಚಿನ್ನಾ. ಇಷ್ಟೇಕೆ ಸೊರಗಿದೆಯೋ ? ನೀಲಮ್ಮ ಹೋದುದಕ್ಕೆ ಯೋಚನೆಯೇನು ? ನೀಲಮ್ಮ ಹೋಗಿ ಬಹಳ ದಿನಗಳಾದುವು. ಬೇಗನೆ ಕರೆಯಿಸಲೊಲ್ಲೆ

ಯೇಕೆ ? " ಎಂದು ತಿಳಿಯುವದರಿಂದ ಕೇಳುವನು. ಇದೆಲ್ಲವೂ ಚಿನ್ನಪ್ಪನ ಬೇನೆಗೆ ಅಪಥ್ಯವೆ.

ನೀಲವ್ಮು ಹೋಗಿ ನಾಲ್ಕು ತಿಂಗಳಾದುವು. ಬೇಗನೆ ನೀಲೆಯನ್ನು ಕರೆಯಿಸೆಂದು ಗಂಗವ್ಮು ಎಷ್ಟು ಹೇಳಿದರೂ, ಚಿನ್ನಪ್ಪನು ಆ ಮಾತನ್ನು ಲೆಕ್ಕಿಸುತ್ತಿರಲೇ ಇಲ್ಲ; ತಾನೂ ಕರೆಯಲು ಹೋಗಲಿಲ್ಲ. ಕಲ್ಲಹಳ್ಳಿಗೆ ಬರುವ ತನ್ನೊಬ್ಬ ಸ್ನೇಹಿತನ ಕೂಡ ಚಿನ್ನಪ್ಪನ ಮಾವ " ನೀಲವ್ಮು ಅಲ್ಲಿಗೆ ಬರುತ್ತೇನೆಂದು ಒಂದೇ ಸವನೆ ಆತುರಪಡುತ್ತಲಿದ್ದಾಳೆ; ಬೇಗನೆ ಬಂದು ಕರೆದುಕೊಂಡು ಹೋಗು ! " ಎಂದು ಹೇಳಿ ಕಳುಹಿಸಿದ. ನೀಲವ್ಮುನ ಆತುರವನ್ನು ಕೇಳಿಯೂ, ಚಿನ್ನಪ್ಪನದು ಕಠಿಯಾದ ಕಲ್ಪನೆಯೆ.

" ಅಲ್ಲೇ ಇದ್ದುಕೊಂಡು ಏನು ಮಾಡಿದರೂ, ಯಾರೂ ನೋಡಲಿಕ್ಕೆ ಬರೂದಿಲ್ಲ : ಇಲ್ಲಿಗೆ ಕರಕೊಂಡು ಬಂದು, ನನ್ನ ಮನೀ ಸೂಳಿಗೇರಿ ಮಾಡಲಾರೆ !" ಎಂದು ಚಿನ್ನಪ್ಪ ಬಂದವರೆದುರಿಗೆ ಹೇಳಿದ. ' ಇದರಂತೆಯೆ ಮಾವನಿಗೆ ಹೇಳಬೇಕು ' ಎಂತಲೂ ತಿಳಿಸಿದ.

೭

ಊರಿಗೆ ಹೋಗುವಾಗ ದಾರಿಯಲ್ಲಿಯೆ ನೀಲವ್ಮುನ ತಂದೆ ಅವಳಿಗೆಷ್ಟೋ ಮಾತುಗಳನ್ನು ಹೇಳಿದನು. ಚಿನ್ನಪ್ಪನು ಹೇಳಿದ್ದನಲ್ಲ ! " ನಾನೇ ಕರೆಯಲಿಕ್ಕೆ ಬರುವವರೆಗೆ ಕೆಲವು ದಿನ ಅವಳು ನಿಮ್ಮಲ್ಲಿಯೇ ಇರಲಿ " ಎಂದು; ಅದನ್ನೂ ಹೇಳಿದನು. ಕೇಳಿ ನೀಲವ್ಮು ನಡುಗಿದಳು; ಕಹಿ ಮೋರೆ ಮಾಡಿದಳು. ಆದರೆ ತಂದೆಗೆ ಇದರ ಸುಳಿವನ್ನು ತಿಳಿಯಗೊಡಲಿಲ್ಲ; ಮನದ ಮಾತನ್ನೂ ಒಡೆದು ಆಡಲಿಲ್ಲ.

* * *

ಈ ವರ್ಷ ಜಾತ್ರೆ ತುಂಬ ಸಡಗರದಿಂದಾಯಿತೆಂದು, ಮಂದಿಯೆಲ್ಲರೂ ಮಾತನಾಡುವರು ; ನೀಲವ್ಮು ಮಾತ್ರ ಉದಾಸೀನಳಾಗಿಯೆ ಇರುವಳು. ಜಾತ್ರೆಯಲ್ಲಿ ಹೆಚ್ಚಾಗಿ ಹೊರಕ್ಕೆ ಕೂಡ ಹೋಗಲಿಲ್ಲ. ಇವಳು ಹೀಗೇಕೆ ಮಾಡುತ್ತಿರುವಳೆಂಬುದು ಮನೆಯವರಿಗೆ ಒಡೆಯದ

ಬಿಗಟೆ. ತಾಯಿ ಹಿಡಿಸಿ ಕೇಳಿದರೆ, “ನನಗೇನಾಗೇತೇ?” ಎಂದು ಆಕೆ ಹಾರಿಸಿ ಮಾತನಾಡುವಳು.

*                    *

ನಾಲ್ಕು ತಿಂಗಳುಗಳು ಕಳೆದುವು. ನೀಲಮ್ಮನನ್ನು ಕರೆಯಲಿಕ್ಕೆ ಚಿನ್ನಪ್ಪ ತಾನೂ ಬರಲಿಲ್ಲ; ಬೇರೆಯವರನ್ನೂ ಕಳಿಸಲಿಲ್ಲ. ಕಲ್ಲಹಳ್ಳಿಯ ಕಡೆಯ ಸುದ್ದಿಯೇ ನೀಲಮ್ಮನಿಗಿಲ್ಲ. ಅವಳು ಬೆದರಿದಳು. ಕಳವಳಿಸಿದಳು. ತಂದೆ-ತಾಯಿಗಳಿಗೆ “ಅದ್ಯಾಕೋ ಏನೋ, ಇನ್ನೂ ತನಕಾ ನನ್ನ ಕರೀಲಿಕ್ಕೇ ಬರಲಿಲ್ಲ! ನಾ ಹೋಗತೀನಿ, ಲಗೂನs ಕಳಿಸಿಕೊಡ್ರಿ!” ಎಂದು ಆಗಾಗ ನುಡಿಯುವಳು. “ನಾನs ಕರೀಲಿಕ್ಕೆ ಬರತೀನಂತ ಚಿನ್ನಪ್ಪ ಹೇಳ್ಯಾನ; ಹೋದೀಯಂತ, ಅನಕಾ ತಡೀಯಲ್ಲಾ! ಇಷ್ಟ್ಯಾಂದು ಯಾಕವ್ವಾ ಅವಸರ? ನಿನ್ನ ಗಂಡ ನಿನ್ನ ಬಿಟ್ಟು ಇನ್ನೆಲ್ಲೂ ಓಡಿ ಹೋಗೂದಿಲ್ಲ..!” ಎಂದು ನೀಲಮ್ಮನ ತಂದೆ-ತಾಯಿ, ನಗೆಯ ಮೇಲೆ ಹಾಯಿಸಿ ಮಾತನಾಡಿ ಬಿಡುವರು. ಇದನ್ನು ಕೇಳಿದ ನೀಲಮ್ಮ ವಿಷಾದದ ನಗೆ ನಗುವಳು; ನಗೆಯೊಡನೆಯ ಕಣ್ಣೀರು ಸುರಿಸುವಳು. “ಸಾಕು ಬಿಡs; ಹುಚ್ಚು ಗಿಚ್ಚು ಹಿಡೀತೇನು ನಿನಗ? ಲೋಕದೊಳಗ ಯಾರಾದರೂ ಗಂಡನ್ನ ಅಗಲಿ ಮೂರು ನಾಕು ತಿಂಗಳ ಇರತಾರೋ, ನೀನs ಏನ ಹೊಸದಾಗೇ ಇದ್ದೀಯೋ? ಏನಾದರೂ ಕೆಲಸ ಇದ್ದೀತು, ಅಂತs ಕರೀಲಾಕ ಬರೂದಕ್ಕ ಆಗಿರಲಿಕ್ಕಿಲ್ಲ! ಇಷ್ಟಕ್ಕs ಎಷ್ಟು ಮನಸಿಗೆ ಹಚಿಗೊಂಡೀದೀ?” ಎಂದು ತಾಯಿ ನೀಲಮ್ಮನಿಗೆ ಸಿಟ್ಟುಮಾಡಿ ಹೇಳಿದಳು. ಇಷ್ಟೆಲ್ಲವಾದರೂ, ತನ್ನ ವಿಷಯವಾಗಿ ಚಿನ್ನಪ್ಪನ ಮನಸ್ಸು ಶುದ್ಧವಾಗಿ ಇಲ್ಲವೆಂಬುದನ್ನು, ಒಡೆದು ಆಡುವ ಧೈರ್ಯ ನೀಲಮ್ಮನಿಗೆ ಆಗಲೊಲ್ಲದು.

ನೀಲಮ್ಮನ ಈ ಆತುರಕ್ಕಾಗಿಯೆ ಅವಳ ತಂದೆ, ಅದಾರ ಕಡೆಯಿಂದಲೊ “ನೀಲಮ್ಮ ಅಲ್ಲಿಗೆ ಬರಲು ಆತುರಪಡುತ್ತಿರುವಳು. ಬೇಗನೆ ಬಂದು ಕರೆದುಕೊಂಡು ಹೋಗು!” ಎಂದು ಚಿನ್ನಪ್ಪನಿಗೆ ಹೇಳಿ ಕಳುಹಿದ. ಅದಕ್ಕೆ ಪ್ರತಿಯಾಗಿ ಚಿನ್ನಪ್ಪ ಮಾವನಿಗೆ ಹೇಳಿ ಕಳುಹಿದ ಮರುಮಾತಿನ ಸಂಗತಿ, ಓದುವವರಿಗೆ ಈ ಮೊದಲೆ ವಿದಿತವಾಗಿದೆ.

ಚೆನ್ನಪ್ಪ ಹೇಳಿ ಕಳುಹಿಸ ಮಾತುಗಳನ್ನು ಕೇಳಿ, ನೀಲಮ್ಮನ ತಂದೆ-ತಾಯಿ ಚಕಿತರಾದರು. ಮಂಗಾಣದವರಾದರು. ಮಾತೆತ್ತದೆ ಕುಳಿತರು. ಅವರು ಯಾವ ಸಂಗತಿಯನ್ನೂ ಅರಿಯದವರು.

ನೀಲಮ್ಮನಿಗೆ ಈ ಮಾತು ತಿಳಿಯಿತು. ಚರ್ರನೆ ಜರಿದಳು, ಕಣ್ಣಿಂದ ನೀರು ತುಳುಕಿತು. ಬಾಯಿಂದ ಮಾತು ಹೊರಡದಾಯಿತು, ಕಣ್ಣಿಗೆ ಕತ್ತಲು ಕವಿಯಿತು. ತಲೆ ತಿರುಗಲು ತೊಡಗಿತು. ಕೆಳಕ್ಕೆ ಬೀಳುವವಳು; ಅಷ್ಟರಲ್ಲಿಯೆ ಅವಳ ತಾಯಿ ಬಂದು, ಸಾವರಿಸಿ ಹಿಡಿದು, ತನ್ನ ತೊಡೆಯ ಮೇಲೆ ತಲೆಯನ್ನು ಮಡಗಿ ಮಲಗಿಸಿಕೊಂಡಳು. ಕೈಯಿಂದ ಮೈದಡಹುತ್ತ "ನೀಲಾ! ನೀಲಾ!" ಎಂದು ನಡುಗುವ ದನಿಯಿಂದ ಕೂಗಿದಳು. ಸ್ವಲ್ಪ ವೇಳೆಯಲ್ಲಿಯೆ ನೀಲಮ್ಮ ಎಚ್ಚರುಗೊಂಡಳು, ಎಚ್ಚತ್ತು ಬಿಸುಸುಯ್ದಳು, ಕಂಬನಿಗರೆದಳು, ಕೈಯಿಂದ ಹಣೆಗೆ ಹೊಡೆದುಕೊಂಡಳು.

"ನೀಲಾ! ಏನೇನೇ ಅಮ್ಮಾ ಇದು?" ತಾಯಿ ಮರುಕದಿಂದ, ಬೆದರುದನಿಯಲ್ಲಿ ಕೇಳಿದಳು. ನೀಲಮ್ಮ ಕಣ್ಣೀರು ಸುರಿಸುತ್ತಲೆ ಕುಗ್ಗಿದ ದನಿಯಿಂದ ಹೇಳಲು ತೊಡಗಿದಳು :

"ನನಗೇನೂ ಗೊತ್ತಿಲ್ಲವ್ವಾ; ನಾ ಇಲ್ಲಿಗೆ ಬಂದೆನಲ್ಲ, ಅದಕಿಂತಾ ಮೊದಲ ಒಂದು ತಿಂಗಳ ಹಿಡದೂ ಅವರ ಮನಸಿನೊಳಗ-ನನ್ನ ಸಲುವಾಗಿ-ಏನೋ ಸಂಶಯ ಹುಟ್ಟೇತೀ ಅಂತ ನನಗ ಅನಿಸಿತ್ತು. ಬಾಯಿ ಬಿಚ್ಚಿ ಯಾವ ಮಾತನೂ ಆಡದಿದ್ದರೂ ಒಂದುಸಾರೆ 'ಕುಲಕರ್ಣ್ಯಾರ ಮನಿಗೆ ಇನ್ನಮ್ಯಾಲ ನೀ ಕಾಲಹಾಕಕೂಡದು' ಅಂತ ಕಟ್ಟಪ್ಪಣಿ ಆತು. ನೋಟದೊಳಗ ಒಂದೇನೋ ಹೊಸಾ ರೀತಿ ಬಾತು. ಮೊದ-ಮೊದಲಿಗೆ ನನ್ನ ಜೋಡಿ ಮಾತಾಡತಿದ್ದರೂ ಎಷ್ಟು ಕೆಲಸ ಅಷ್ಟರ ಪೂರತೇನಽ! ಅದೂ ಮಾತಂದರ ಎಂಥಾದು! 'ಹೀಂಗ್ಯಾಕಿದು?' ಅಂತ ನಾ ಕಳವಳದಿಂದ ಕೇಳಿದರ 'ಹ್ಯಾಂಗ?' ಅಂತ ನನಗಽ ತಿರಿಗಿ ಪ್ರಶ್ನಿ! ಇಲ್ಲಿಗೆ ಬರೂವಕ್ಕ ಮೊದಲ ಎರಡು ದಿವಸಂತೂ ನನ್ನ ಜೋಡೀ ಮಾತಽ ಇರಲಿಲ್ಲ. 'ನೀಲಿನ್ನ ಅವರಪ್ಪನ ಮನಿಗೆ ಕಳಿಸಿ ಬಂದುಬಿಡು!' ಅಂತ ತಮ್ಮ ಅವ್ವನಿದುರಿಗೆ ಒಮ್ಮೆ ಹೇಳಿದ್ದನ್ನೂ ಕೇಳಿದೆ. ಕೇಳಿದಾಗ ನನ್ನೆದೀಗೆ ಈಟಿಂದಽ ಇರದ್ಹಾಂಗ ಆತು. ಅದಽ ಯಾಕೇದಾಗಽ ಜಾತರಿಗಂತ ಅಪ್ಪ ಕರೀಲಿಕ್ಕೆ

ಬಂದ..! ಎಷ್ಟು ಚಾಲುವರಿದು ಕರದರೂ ಬರಲಿಕ್ಕೆ ಒಪ್ಪಲೇ ಇಲ್ಲ. ‘ಏನೋ ಸೊಲ್ಪ ದಿನಾ ಕಣ್ಣಮರಿಯಾಗಿದ್ದರ ಮನಸಿನ ಸಂಶಯ ಆದರೂ ಕಡಿಮಿ ಆದೀತು..’ ಅಂತ ನನಗ ಅನಿಸಿ, ಅಪ್ಪನ ಜತಿಗೆ ಹೊರಟು ಇಲ್ಲಿಗೆ ಬರಲಿಕ್ಕೆ ನಾ ಸಮ್ಮತಿಸಿದೆ. ಬಂದು ನಾಕು ತಿಂಗಳಾದರೂ ಕರೀಲಿಕ್ಕೇ ಬರಲಿಲ್ಲ, ಅದಕ್ಕಽ ನನ್ನ ಎದೀನಽ ಒಡದ್ಹಾಂಗ ಆತು. ಅದ ಕಂತಲೇ ‘ಲಗೂನಽ ನನ್ನ ಕಳಿಸಿಕೊಡರಿ’ ಅಂತ ನಿಮ್ಮ ಬೆನ್ನುಹತ್ತ್ಯಾದೆ..” ಅಳುತ್ತಳುತ್ತಲೆ ನೀಲಮ್ಮ ಇದನ್ನೆಲ್ಲ ಹೇಳಿದಳು.

ತಂದೆ-ತಾಯಿ ಒಳಗೊಳಗೆ ನಡುಗಿದರಾದರೂ ಸಮಾಧಾನದ ಸೋಗಿನ ದನಿಯಲ್ಲಿ ಹೇಳಲು ತೊಡಗಿದರು :

“ಎಲ್ಲಾ ಗೊತ್ತಾದ್ಹಾಂಗ ಆತು ಬಿಡಽ ನೀಲಾ! ಯಾರಾದರೂ ಏನಾದರೂ ಕಿವಿಮಂತ್ರಾ ಊದಿದ್ದಾರು.. ಹಾಲಿನಾಗ ಉಪ್ಪು ಕೂಡಿಸೂ ಜನರಿಗೇನು ಕಡಿಮೆ? ಅಂತಽ ಹಿಂಗೆಲ್ಲಾ ಕತೀ ನಡದೈತಿ! ಹೇಳಿ ಕೇಳಿ ಹುಡುಗ ನಮ್ಮ ಚಿನ್ನ; ಹುಡುಗ ಬುದ್ಧಿ ಜಾರಿ ಬಿದ್ದಿ! ಹಾಂಗೇನೂ ನಮ್ಮ ಚಿನ್ನ ಮಂದೀ ಮಾತು ಕೇಳಾಂವಲ್ಲ ಬಿಡೇ; ಕೆಟ್ಟ ವಿಷವ್ಯಾಳೇ ಒಂದು ಇರತ್ಯೆತೆಲ್ಲಾ! ನೀಲಾ, ಹೋಗಲಿ ಬಿಡು; ನೀ ಏನೂ ಚಿಂತೀ ಮಾಡಬ್ಯಾಡ! ಇನ್ನೆರಡು ದಿನಕ್ಕ ನಾನಽ ನಿನ್ನ ಕರಕೊಂಡು ಹೋಗಿ ಕಳಿಸಿ ಬರತೀನಿ! ಚಿನ್ನನ ಕಿವಿ ಒಳಿತಾಗಿ ಹಿಂಡಿ, ಬುದ್ಧೀ ಕಲಿಸಿ ಬರತೀನಿ! ನೀ ಎಂತಾ ಹುಚ್ಚ ಮನಿಸ್ಯಾಳವ್ವಾ! ಅಲ್ಲೇ ನಾ ಬಂದಾಗಽ ಹೇಳಬಾರದಽ? ಆಗಽ ಎಲ್ಲಾ ಕೆಲಸಾ ಮುಗಿಸಿಬಿಟ್ಟು, ಅವನ್ನೂ ಇಲ್ಲಿಗೆ ಕರಕೊಂಡಽ ಬರತಿದ್ದೆ..” ಇತ್ಯಾದಿಯಾಗಿ ನೀಲಮ್ಮನನ್ನು ತಂದೆ ಸಮಾಧಾನಗೊಳಿಸಿದ. ಆದರೂ ನೀಲಮ್ಮನ ಎದೆಯ ಕಳವಳ ಸ್ವಲ್ಪವೂ ಕಡಿಮೆಯಾಗಲಿಲ್ಲ. ಮುಂದೆ ತಾಸೆರಡು ತಾಸುಗಳಲ್ಲಿಯೆ ಅವಳಿಗೆ ಕೆಂಡದಂತಹ ಜ್ವರ. ತಲೆ ಸಿಡಿದು ಹೋಳುವಂತಹ ನೋವು. ಹಾಸಿಗೆಯನ್ನೆ ಹಿಡಿದುಬಿಟ್ಟಳು.

ಎಂಟು ಹತ್ತು ದಿನಗಳಾದುವು. ನೀಲಮ್ಮನಿಗೆ ಅಂದು ಏರಿದ ಜ್ವರ ಇನ್ನೂ ಇಳಿದಿರಲೆ ಇಲ್ಲ. ನಡು-ನಡುವೆ ಮೈಮರೆತು ಏನೇನನೊ ಕನವರಿಸುತ್ತಿರುವಳು. ಆ ಕನವರಿಕೆಯಲ್ಲಿಯ ಮಾತುಗಳೆಂದರೆ, ಚಿನ್ನಪ್ಪನ ಒಡನೆ ತಾನು ನಗೆಯಾಟವಾಡುತ್ತಿರುವಂತೆ ; ಚಿನ್ನಪ್ಪನು ಸಿಟ್ಟಿನಿಂದ

ಮಾತನಾಡದಿರಲು, ತನ್ನ ಅತ್ತೆಯ ಮುಂದೆ ಅದನ್ನು ಹೇಳುತ್ತಿರುವಂತೆ ; ಇಂದಿರೆಯೊಡನೆ ಆಟವಾಡುತ್ತಿರುವಂತೆ ; ರಾಮಮೂರ್ತಿಯೊಡನೆ ನಗೆಯಾಡಿದಂತೆ. ನೀಲಮ್ಮ ಆಗಾಗ ಬೆಚ್ಚಿ ಬೀಳುವಳು. ಎಚ್ಚತ್ತಿರುವಾಗ ಅದಾವುದೊ ಯೋಚನೆಯಲ್ಲಿರುವಳು. ಕಣ್ಣೀರ ಕಾಲುವೆ ಹರಿಸುವಳು; ಚಡಪಡಿಸುವಳು. ನಿಟ್ಟುಸಿರು ಬಿಡುತ್ತ ಈ ಬದಿಯಿಂದ ಆ ಬದಿಗೆ ಹಾಸಿಗೆಯಲ್ಲಿ ಹೊರಳಾಡುವಳು. ಇದನ್ನೆಲ್ಲ ಕಂಡ ನೀಲಮ್ಮನ ತಾಯ್ತಂದೆಗಳಿಗೆ, ಅಳುವು ತುಂಬಿಬರುತ್ತಲಿದ್ದಿತು. ಒಬ್ಬಳೆ ಒಬ್ಬಳಾಗಿರುವ, ತಮ್ಮ ಮಗಳಿಗೊದಗಿದ ಈ ವಿಪತ್ತಿನಿಂದ, ಅವರು ದಿಕ್ಕುಗಾಣದವರಾದರು. ಹಲವು ದೇವರಿಗೆ ಹರಕೆ ಹೊತ್ತರು. ನೀಲಮ್ಮನನ್ನು ಗಂಡನ ಬಳಿಗೆ ಕಳಿಸಬೇಕೆಂದಿರಲು ನಡುವೆ ಇದೊಂದು ತೊಡಕು.

* * *

ಒಂದುದಿನ ರಾತ್ರಿ, ತಾಯಿ ನೀಲಮ್ಮನಿಗೆ ಔಷಧ ಕುಡಿಯಲು ಹಲವು ಬಗೆಯಿಂದ ಹೇಳಿ ನೋಡಿದಳು. ಆದರೂ ನೀಲಮ್ಮ ನಿರಾಕರಿಸಿಯೆ ಬಿಟ್ಟಳು :

"ಯವ್ವಾ, ಸುಮುಸುಮ್ಮನs ಯಾಕ ಒತ್ತಾಯ ಮಾಡತೀ ? ಈ ಔಸದಾ-ಕಾಡೇದಿಂದೇನೂ ನನ್ನ ಜ್ಯಾನಿ ಕಡಿಮಿ ಆಗೂದಿಲ್ಲ !" ನೀಲಮ್ಮ ಸಣ್ಣ ಸ್ವರದಲ್ಲಿ ನುಡಿದಳು.

"ಹಾಂಗಾದರ ಏನು ಮಾಡಬೇಕಂತೀ ?" ಬಿಗಿದ ಕಂಠದಿಂದ ತಾಯಿ ಕೇಳಿದಳು. ನೀಲಮ್ಮನು ಮಾತನಾಡದೆ ಇದ್ದಳು. "ನೀಲಾ ! ಮನಸಿನಾಗ ಇರೂದನ್ನಾರೇ ಹೇಳವ್ವಾ!" ಮತ್ತೆ ತಾಯಿ ಕೇಳಿದಳು.

"ಯವ್ವಾ.." ಎಂದಿಷ್ಟೇ ನುಡಿದು ನೀಲಮ್ಮ ಸುಮ್ಮಗಾಗಿ ಶೂನ್ಯದೃಷ್ಟಿಯುಳ್ಳವಳಾದಳು.

"ಏನದು, ಬಾಯಿಬಿಚ್ಚಿ ಹೇಳs ನೀಲಾ!" ತಾಯಿ ದೈನ್ಯ-ಧ್ವನಿಯಲ್ಲಿ ಕೇಳಿದಳು.

"ನೋಡು.., ಒಂದs ಒಂದು ಸಾರೆ ಅವನ ನಗಿಮಾರೀ ನೋಡಿಬಿಟ್ಟೆನೆಂದರ, ನನ್ನ ಜ್ಯಾನಿ ನಿಲ್ಲೂದೇ ಇಲ್ಲ !" ನೀಲಮ್ಮ ಮೆಲ್ಲಗೆ ನುಡಿದು ಉಸ್ಸೆಂದು ಉಸಿರುಗರೆದಳು.

ನೀಲಮ್ಮನ ತಂದೆಗೆ ಈ ಮಾತು ತಿಳಿಯಿತು. ಅವನು ಮರುದಿನವೆ ಚಿನ್ನಪ್ಪನನ್ನು ಕರೆದು ತರಲಿಕ್ಕೆಂದು, ತನ್ನ ತಮ್ಮ ಮಲ್ಲೇಶಿಯನ್ನು ಕಲ್ಲಹಳ್ಳಿಗೆ ಕಳುಹಿದ.

೮

ಮಲ್ಲೇಶಿ ಕಲ್ಲಹಳ್ಳಿಗೆ ಬಂದ. ಚಿನ್ನಪ್ಪ ಉಚಿತರೀತಿಯಿಂದ ತನ್ನ ಚಿಕ್ಕಮಾವನನ್ನು ಉಪಚರಿಸಿದ. ಬಂದ ಕಾರಣವನ್ನು ಕೇಳಿದ. ಮಲ್ಲೇಶಿ, ನೀಲಮ್ಮನ ಸ್ಥಿತಿಯನ್ನೆಲ್ಲ ವಿಸ್ತರಿಸಿ ವಿವರಿಸಿದ "ಬ್ಯಾನಿ ಬಾಳ ಜಡಾ ಐತಿ; ಬಂದ ಉರಿ ಆರಿಲ್ಲ; ಯಾವಾಗಲೂ ನಿನ್ನ ಕೂಟ ಮಾತಾಡಿದ್ಹಾಂಗ ಬಡಬಡಸ ತಾಳ; ಎಚ್ಚರದಿಂದಿದ್ದಾಗ ನಿನ್ನ ನೆನಸಿ ನೆನಸಿ ಕಣ್ಣೀರಿಡತಾಳ. ಒಮ್ಮೆ ಆದರೂ ನಿನ್ನ ನೋಡಬೇಕಂಬೂ ಹಂಬಲ ಆಕಿಗೆ. ಅಂತs ಅವಸರದಿಂದ ನಿನ್ನ ಕರೀಲಿಕ್ಕೆ ಓಡಿಬಂದೆ!" ಎಂದು ಮಲ್ಲೇಶಿ ತುಂಬ ದೈನ್ಯದಿಂದ ಹೇಳಿದನು.

ಚಿನ್ನಪ್ಪ ಇದೆಲ್ಲವನ್ನೂ ಕೇಳಿದ; ಕೇಳಿ ಎದೆಯು ಕರಗಿ ನೀರಾಯಿತು. ಮಲ್ಲೇಶನಿಗೆ ಕಾಣದಂತೆ ಕಣ್ಣೀರನ್ನು ವಿಡಿದ. ನೀಲಮ್ಮನ ಬಳಿಗೆ ಹೋಗಬೇಕೆಂದು, ಮನಸ್ಸು ಕ್ಷಣಮಾತ್ರ ಹರಿದಾಡಿತು. ಮರಳಿ ಮೊದಲಿನಂತೆಯೆ ಕಲ್ಲಾಗಿ ತನ್ನ ಸ್ಥಳದಲ್ಲಿ ಕುಳಿತುಕೊಂಡಿತು. ತನ್ನ ಮನದ ನೋವಿನ ಮಾತೆಲ್ಲವನ್ನೂ ಮಲ್ಲೇಶನಿಗೆ ಚಿನ್ನಪ್ಪನು ಹೇಳಿಬಿಟ್ಟ; ಅಲ್ಲದೆ 'ಲೀಲೆ-ರಾಮಮೂರ್ತಿಯುವರ ವಿಷಯದಲ್ಲಿದ್ದ ಸಂಶಯವು, ಧೃಢವಾಗಿ ಹೋಗಿದೆ. ನೀಲೆಯ ಬಗೆಗಂತೂ ತನ್ನ ಮನಸ್ಸು ಹೇಸಿಕೊಂಡಿದೆ. ಇನ್ನು ಅವಳ ಮೋರೆಯನ್ನು ನೋಡುವುದು ಈ ಜನ್ಮದಲ್ಲಿಯಂತೂ ತನ್ನಿಂದಾಗದು' ಎಂದು ನಿಷ್ಠುರನಾಗಿ ನುಡಿದುಬಿಟ್ಟ. ಮಲ್ಲೇಶನು ಎಷ್ಟೊಂದು ತಿಳಿಸಿ ಹೇಳಿದ; ಕೈಮುಗಿದು ಬೇಡಿಕೊಂಡ; ಆದರೂ ಚಿನ್ನಪ್ಪನು ತನ್ನ ಉಡದ ಹಿಡಿತ ಬಿಡಲಿಲ್ಲ, ಊರಿಗೆ ಬರಲು ಒಪ್ಪಲಿಲ್ಲ. ಮಲ್ಲೇಶನು ಹಂಚಿಗೆಗಾಣದವನಾಗಿ, ಬಾಡಿದ ಮುಖದಿಂದ ಬಂದಹಾಗೆಯೆ ಹೊರಟುಬಿಟ್ಟ; ಊಟವನ್ನು ಕೂಡ ಮಾಡಲಿಲ್ಲ.

ಚಿನ್ನಪ್ಪನ ಮನಸ್ಸಿಗೆ ಸಮಾಧಾನವೆ ಇಲ್ಲ. ಹೊಟ್ಟೆಯಲ್ಲಿ ಪಂಜು ಹಚ್ಚಿದಂತೆ ಉರಿ. ಊಟವನ್ನು ಮಾಡಲೆ ಇಲ್ಲ; ಮನೆಯಲ್ಲಿ ಕುಳಿತು ಕೊಳ್ಳುವುದಕ್ಕೆ ಆಗದುದರಿಂದ ತೋಟದ ಕಡೆಗೆ ಹೊರಟುಬಿಟ್ಟ.

ಅಂದು ಊರಲ್ಲಿ ಜನರ ಬಾಯಲ್ಲೆಲ್ಲ, ಸೀಲಮ್ಮ–ರಾಮಮೂರ್ತಿಯರ ವಿಷಯಕವಾದ ಮಾತುಗಳೆ. ಈ ಸುದ್ದಿ ಕರಣಿಕರ ಮನೆಯವರ ಕಿವಿಗೂ ನಿಲುಕಿತು. ಕೇಳಿ ಬೆರಗಾದರು, ಬೆಚ್ಚಿಬಿದ್ದರು.

* * *

ರಾಮಮೂರ್ತಿಯು ಬೇರೆ ಹಳ್ಳಿಗೆ ಹೋಗಿದ್ದ. ಅವನಿಗೆ ಇದಾವ ಸಂಗತಿಯೂ ತಿಳಿಯದು. ಹಳ್ಳಿಯೊಳಗಿನ ಕೆಲಸ ತೀರಿಸಿಕೊಂಡು ಮನೆಗೆ ಬರಬೇಕಾದರೆ, ಅವನಿಗೆ ಮೂರುಗಂಟೆಯ ವೇಳೆಯಾಯಿತು. ಇನ್ನೂ ಊಟವಿಲ್ಲ ಉಡಿಗೆಯಿಲ್ಲ. ಮನೆಯಲ್ಲಿ ಎಲ್ಲರ ಊಟವೂ ಮುಗಿದು ಹೋಗಿತ್ತು. ಬಂದವನೆ ರಾಮಮೂರ್ತಿ ಸ್ನಾನಮಾಡಿದ; ಊಟಕ್ಕೆ ಕುಳಿತ. ತಾಯಿ ಊಟಕ್ಕೆ ನೀಡುತಿದ್ದಳು. ರಾಮಮೂರ್ತಿಯು ಉಣ್ಣಲಿಕ್ಕೆ ಮೊದಲು ಮಾಡಿದ. ತಾಯಿಗೆ ತಡೆದುಕೊಂಡಿರಲಿಕ್ಕೆ ಆಗಲಿಲ್ಲ:

“ಪಾಪ ! ಸೀಲಮ್ಮನಿಗೆ ತುಂಬ ಕಸಾರಿಕಿಯಂತ. ಚಿನ್ನಪ್ಪನ್ನ, ಕರೆಯಲಿಕ್ಕೆ ಆತನ ಚಿಕ್ಕಮಾವ ಬಂದಿದ್ದ. ” ತುಂಬ ಕನಿಕರದ ದನಿಯಿಂದ ನುಡಿದಳು.

“ಚಿನ್ನಪ್ಪ ಹೋದನೇನು ಊರಿಗೆ ? ” ರಾಮಮೂರ್ತಿ ಆತುರದಿಂದ ಕೇಳಿದ.

“ಇಲ್ಲ, ಹೋಗಲಿಲ್ಲ! ” ತಾಯಿ ಒಂದು ವಿಧವಾದ ದನಿಯಿಂದ, ಮೆಲ್ಲಗೆ ನುಡಿದಳು.

“ಏನು ಚಿನ್ನಪ್ಪ ಹೋಗಲಿಲ್ಲವೆ? ” ರಾಮಮೂರ್ತಿಯು ಬೆರಗಾಗಿ ಕೇಳಿದ.

“ಇಲ್ಲವಪ್ಪಾ ! ಚಿನ್ನಪ್ಪ ನಿನ್ನ ಮ್ಯಾಲ ಒಂದು ಅಪವಾದಾ ಹೊರಿಸ್ಯಾನಂತ ! ” ತಾಯಿ ಮೆಲ್ಲಗಿನ ಧ್ವನಿಯಲ್ಲಿಯೆ ಹೇಳಿದಳು.

" ಅದೇನದು ? ಅಪವಾದ ಎಂತಹದು ? " ರಾಮಮೂರ್ತಿ ಬೆಚ್ಚಿಬಿದ್ದು ಕೇಳಿದ.

" ನೀಲಮ್ಮನ್ನ ನೀ ಏನೋ ಇಟ್ಟುಕೊಂಡಿದೀಯಂತ; ಅದಕ್ಕಾಗೇ ಚಿನ್ನಪ್ಪ ನೀಲಮ್ಮನ ಮುಖಾ ಕೂಡ ನೋಡುವುದಿಲ್ಲಾಂತ ಹೇಳಿ ಕಳಿಸಿಬಿಟ್ಟನಂತ " ತಾಯಿ ಕಹಿಮೋರೆಮಾಡಿ, ಕಿರುದನಿಯಲ್ಲಿ ನುಡಿದಳು.

" ಏನು?..ನೀಲಮ್ಮನ್ನ ನಾನು ಇಟ್ಟುಕೊಂಡಿದ್ದೀನಂತೆಯೆ ! ಚಿನ್ನಪ್ಪ ಹೀಗೆ ಹೇಳುವನೇ ? " ಎಂದು ಆಶ್ಚರ್ಯದ ಸ್ವರದಲ್ಲಿ ನುಡಿದು, ರಾಮಮೂರ್ತಿ ನಸು ನೇಳೆ ಹುಚ್ಚಿಟ್ಟ ಮೋರೆಯಿಂದ ಸುಮ್ಮಗೆ ಕುಳಿತ. ನಾಲ್ಕಾರು ತುತ್ತುಗಳನ್ನು ಮಾತ್ರ ಬಾಯಲ್ಲಿ ಹಾಕಿಕೊಂಡಿದ್ದ; ಹಾಗೆಯೇ ಆಪೋಶನ ತೆಗೆದುಕೊಂಡು ಎದ್ದು ಬಿಟ್ಟ.

" ಇದೇನೋ ! ಹೀಂಗ್ಯಾಕ ಎದ್ದುಬಿಟ್ಟಿಯೋ ರಾಮೂ? " ಎಂದು ಕೇಳುತ್ತಿರುವ ತಾಯಿಯ ಮಾತುಗಳ ಕಡೆಗೆ ರಾಮಮೂರ್ತಿಯ ಲಕ್ಷ್ಯವೇ ಇರಲಿಲ್ಲ. " ಅಯ್ಯೋ, ಹಸಿದುಬಂದಿದ್ದ; ನಾಯಾಕ ಈಗ ಈ ಸುದ್ದೀ ಹೇಳಿದೆನೋ ! ನನ್ನ ನಾಲಿಗೆ............ " ಎಂದು ತಾಯಿ ತನ್ನನ್ನು ತಾನೇ ಬೈಯ್ದುಕೊಂಡಳು.

ರಾಮಮೂರ್ತಿ ಬಂದು ಹಜಾರದಲ್ಲಿ ಕುಳಿತ. ಚಿನ್ನಪ್ಪನು ತನ್ನಬಳಿಗೆ ಬರುವುದನ್ನು ಬಿಟ್ಟಿದ್ದುದಕ್ಕೂ, ಹೆಚ್ಚಾಗಿ ಮಾತನಾಡದಿರುವುದಕ್ಕೂ ಕಾರಣವೇನೆಂಬುದನ್ನು ಕಂಡುಹಿಡಿದ. ಬಹಳ ಹೊತ್ತಿನವರೆಗೆ ತನ್ನೊಳಗೆ ತಾನೆ ಏನೇನನೊ ಯೋಚಿಸಿದ. ಬಳಿಕ ಎದ್ದು, ಮೈಮೇಲೆ ಒಂದೇ ಒಂದು ಕಿರಿಯಂಗಿ ಹಾಕಿಕೊಂಡು ಹೊರಬಿದ್ದು ನಡೆದ.

ರಾಮಮೂರ್ತಿ ಚಿನ್ನಪ್ಪನ ಮನೆಗೆ ಬಂದ. ಚಿನ್ನಪ್ಪನು ತೋಟದಲ್ಲಿರುವನೆಂಬುದನ್ನು ತಿಳಿದುಕೊಂಡು, ಹಾಗೆಯೆ ತೋಟದ ಕಡೆಗೆ ತೆರಳಿದ.

೯

ಮನೆಯಲ್ಲಿ ಸಮಾಧಾನವೆನಿಸದುದರಿಂದ, ಚಿನ್ನಪ್ಪ ತೋಟಕ್ಕೆ ಹೋದನೆಂದು ಈ ಮೊದಲು ಹೇಳಿದೆಯಷ್ಟೆ ! ತೋಟಕ್ಕೆ ಬಂದ; ಬಾಳೆಯ ಬನದಲ್ಲಿ ತಿರುಗಾಡಿದ; ಮಲ್ಲಿಗೆಯ ಹಂದರದ ಕೆಳಕ್ಕೆ ಕುಳಿತ;

ಚಿಂತಾ ಸಮುದ್ರದಡಿಯಲ್ಲಿ ಮಲಗಿದ; ಏನು ಮಾಡಿದರೂ ಶಾಂತತೆಯೆ ಇಲ್ಲ. ಕೊನೆಗೆ ಚಿನ್ನಪ್ಪನು ಗುಡಿಸಿಲಿಗೆ ಬಂದು, ಹಾಸಿದ್ದ ಚಾಪೆಯ ಮೇಲೆ ಬಿದ್ದುಕೊಂಡ. ಒಂದರಹಿಂದೊಂದು ಹೊಳೆದು ಸುಳಿಯುವ ಯೋಚನಾ-ತರಂಗದಲ್ಲಿ ಮುಳುಗಿಹೋದ. ಹಿಂದೆ ಎಳೆಯತನದಲ್ಲಿ ತಾನು, ನೀಲಮ್ಮ ಕೂಡಿ ಆಡಿದುದು ಆತನಿಗೆ ನೆನಪಾಯಿತು. ಮದುವೆಯ ಕಾಲದಲ್ಲಿ ನಗೆಗಣ್ಣಿನಿಂದ ನೋಡುತ್ತ ಇಬ್ಬರೂ ಒಬ್ಬರೊಬ್ಬರ ಕೈಹಿಡಿದುದು ಸ್ಮರಣೆಗೆ ಬಂದಿತು. ಕಲ್ಲಹಳ್ಳಿಗೆ ಬಂದಮೇಲೆ, ಗಂಡ-ಹೆಂಡತಿ ಕೂಡಿ ಸುಖದಿಂದಿದ್ದುದು ಜ್ಞಾಪಕಕ್ಕೆ ಬಂದಿತು. ಸಲುಗೆಯಿಂದ ನಗೆಮಾತನಾಡಿದುದು ನೆನಪಿಗೆ ಬಂದಿತು.

ಒಮ್ಮೆ ಸೀಗೆಯ ಹುಣ್ಣಿಮೆಯ ಮುಂದೆ, ಚಿನ್ನಪ್ಪನ ದೇಹಾರೋಗ್ಯ ಚೆನ್ನಾಗಿರಲಿಲ್ಲ. ಸಿಕ್ಕಿಸಿಕ್ಕಿದುದನ್ನು ತಿನ್ನುವಂತಿರಲಿಲ್ಲ. ಹುಣ್ಣಿಮೆಯ ದಿನ ಗಂಗಮ್ಮ ಮನೆಯಲ್ಲಿ ಎಷ್ಟೆಷ್ಟೊ ಸವಿಯುಣಿಸುಗಳನ್ನು—ದೇವರಿಗೆ ಎಡೆಕೊಡಲು—ಮಾಡಿದಳು. ಕೊನೆಗೆ ತಿನ್ನೆಂದು ಬೇಕಾದಷ್ಟು ಬಲವಂತಪಡಿಸಿದಳು; ಆದರೆ ನೀಲಮ್ಮ ಅವುಗಳನ್ನು ಮುಟ್ಟಲಿಲ್ಲ.—ಈ ಸಂಗತಿಯು ಚಿನ್ನಪ್ಪನ ಜ್ಞಾಪಕಕ್ಕೆ ಬಾರದೆ ಇರಲಿಲ್ಲ.

* * *

ಇನ್ನೊಮ್ಮೆ ಚಿನ್ನಪ್ಪನು ಸಂತೆಗೆ ಹೋಗಿದ್ದ. ಗುಡುಗು ಮಿಂಚು ತೋರಿ ಸಿಡಿಲುಬೀಳುವಂತಾಯಿತು. ಮನೆ ನೆಗೆದುಬೀಳುವಂತೆ ಬಿರುಗಾಳಿ ಬೀಸಿತು. ಸುರಿಮಳೆಯು ಬಲವಾಗಿ ಸುರಿಯಿತು. ಚಿನ್ನಪ್ಪನಿಗೆ ಅಂದು ನಡುದಾರಿಯ ಹಳ್ಳಿಯಲ್ಲಿಯೆ ಇರಬೇಕಾಯಿತು. ಅಂದು ರಾತ್ರಿ ನೀಲಮ್ಮ ಊಟಮಾಡಲಿಲ್ಲವಂತೆ; ನಿದ್ರೆಬಾರದೆ ರಾತ್ರಿಯುದ್ದಕ್ಕೂ ತಳಮಳಿಸುತ್ತಿದ್ದಳಂತೆ; ಬೆದರಿಬೆದರಿ ಬೀಳುತ್ತಿದ್ದಳಂತೆ. ಚಿನ್ನಪ್ಪ ಮರಳಿ ಬಂದೊಡನೆಯೆ ಇದನ್ನು ಗಂಗಮ್ಮ ಹೇಳಿದಳು.— ಇದೂ ಚಿನ್ನಪ್ಪನ ನೆನಪಿನ ಪಟದ ಮೇಲೆ ಮೂಡಿ ನಿಂತಿತು.

ಒಂದೇ ಎರಡೇ! ಇಷ್ಟು ದಿನದ ತನ್ನ ಜೀವನವನ್ನೇ ಚಿನ್ನಪ್ಪನು ಅಳೆದು ಬಳಲುತ್ತಿದ್ದನು. ಕಣ್ಣೀರು ಹಳ್ಳವಾಗಿ ಹರಿಯುತ್ತಿದ್ದಿತು. ಬಾಯಿ-ಮೂಗುಗಳಿಂದ ಬಿಸಿಯಾದ ಉಸಿರು ತಡೆತಡೆದು ಹೊರಡುತ್ತಿದ್ದಿತು.

" ನೀಲೀ ! ನೀನು . . ನಿಜವಾಗ಼್ೂ ಕೆಟ್ಟಿಲ್ಲs ? ಆ ಹಾರುವರ ಹಂದಿ ನಿನ್ನ ಮೈಯಿ ಮುಟ್ಟಿ ಮೈಲಿಗೀ ಮಾಡಿಲ್ಲs ? " ಒಮ್ಮೆಲೆ ಚಿನ್ನಪ್ಪನು ಗಟ್ಟಿಯಾಗಿ ನುಡಿದ; ನುಡಿಯೊಡನೆಯೆ ರಭಸದಿಂದ ದಿಗ್ಗನೆ ಎದ್ದು ಕುಳಿತ. ನೋಡಿದ : ಗುಡಿಸಿಲ ಬಾಗಿಲಲ್ಲಿ ರಾಮಮೂರ್ತಿ !

" ಚಿನ್ನಾ ! ಏನಿದು ನಿನ್ನ ಮರುಳತನ? . . " ಎಂದಿಷ್ಟೇ ರಾಮಮೂರ್ತಿ ನುಡಿದ. ಕೊರಳು ಬಿಗಿದುಬಂದುದರಿಂದ ಮುಂದೆ ಮಾತುಗಳೆ ಹೊರಡ-ಲಿಲ್ಲ. ಕಣ್ಣೀರು ಗಳಗಳನೆ ಸುರಿದುವು.

ಚಿನ್ನಪ್ಪ ಮಾತನೇನೂ ಆಡಲಿಲ್ಲ ; ಕೆಂಗಣ್ಣಿನ ನೋಟದಿಂದ ರಾಮಮೂರ್ತಿಯನ್ನು ನೋಡಲು ತೊಡಗಿದ.

" ಅಯ್ಯೋ, ಚಿನ್ನಾ ! . . ನನ್ನ ತಂಗಿ ಇಂದಿರೆಯು ಕೂಡ . . ನನ್ನನ್ನು ಹೊಂದಿಸಿದ ಪಾಪ ಕಟ್ಟಿಕೊಳ್ಳುತ್ತೀಯಾ? . . " ಮತ್ತೆ ದುಃಖ ಉಕ್ಕಿ ಬಂದುದರಿಂದ, ರಾಮಮೂರ್ತಿಗೆ ಮಾತನಾಡಲಿಕ್ಕೆ ಬಾರದಾಯಿತು. ಹಾಗೆಯೆ ಮುಂದೆಬಂದು, ಚಿನ್ನಪ್ಪನ ತೊಡೆಯ ಮೇಲೆ ಹಣೆಯನ್ನಿಟ್ಟು ಬಿದ್ದುಕೊಂಡ ; ಅಳುವು ನೂಕಿ ಹೊರಬಿದ್ದಿತು. ಕಣ್ಣಿಂದೆ ನೀರು ಕಾಲುವೆಯಾಗಿ ಹರಿಯಿತು. ಚಿನ್ನಪ್ಪನು ಕದಲದೆ ಕುಳಿತುಬಿಟ್ಟಿದ್ದ. ಆಗ ಅವನ ಮನಸ್ಸಿನಲ್ಲಿ ನಡೆದ ವಿಚಾರದ ಗಲಿಬಿಲಿ ಎಂತಹದೇನೊ ! ಬರುಬರುತ್ತ ಚಿನ್ನಪ್ಪನ ಮುಖ ಶಾಂತವಾಗಲು ತೊಡಗಿತು– ಕಣ್ಣಿಂದ ಕಂಬನಿ ಉದುರತೊಡಗಿದುವು.

ಚಿನ್ನಪ್ಪನ ಹೃದಯಪಟದ ಮೇಲೆ ಇದುವರೆಗೂ ಮೂಡಿರುವ ರಾಮಮೂರ್ತಿಯ ವಿಕೃತವಾದ ಚಿತ್ರವು, ರಾಮಮೂರ್ತಿಯ ನಿರ್ಮಲ ಮುಖಭಾವದಿಂದಲೂ ಆತನ ಕಂಬನಿಯಿಂದಲೂ ಅಳಿಸಿಹೋಗಿರಬಹುದು. ಅದರ ಸ್ಥಳದಲ್ಲಿ ಈಗಿನ ರಾಮಮೂರ್ತಿಯ ಶುದ್ಧ ಸಾತ್ತ್ವಿಕಮೂರ್ತಿಯು ಮೂಡಿನಿಂತಿರಬಹುದು. ಎಂತಲೆ ಆತನ ಎದೆ ಕರಗಿ, ನೀರಾಗಿ, ಉಕ್ಕೇರಿ, ಕಣ್ಣಿಂದ ಹೊರಕ್ಕೆ ಹೊರಟಿರಬಹುದು.

" ಅಯ್ಯೋ, ಚಿನ್ನಾ ! . . ನನ್ನ ತಂಗಿ ಇಂದಿರೆಯು ಕೂಡ . . ನನ್ನನ್ನು ಹೊಂದಿಸಿದ ಪಾಪ ಕಟ್ಟಿಕೊಳ್ಳುತ್ತೀಯಾ ? . . . . " ಎಂದು ನುಡಿದ

ರಾಮಮೂರ್ತಿಯ ಮಾತುಗಳ ಅಂಜನವು, ನಿಜವಾಗಿಯೂ ಚಿನ್ನಪ್ಪನ ಕಣ್ಣುಪರೆಯನ್ನು ಹರಿದುಬಿಟ್ಟಿತು. ಇದುವರೆಗೆ ಕೊಳೆಮೆಯ್ಯವಳಾಗಿ ಕಾಣುತ್ತಿದ್ದ ನೀಲಮ್ಮ, ಈಗ ಕಳೆಯುಳ್ಳ ಮೊಗದವಳಾಗಿ ತನ್ನ ಕಣ್ಣೆದುರಿಗೆ ಬಂದು ನಿಂತಂತೆ ಕಂಡಳು. ಎಷ್ಟೋ ವೇಳೆಯವರೆಗೆ ಇಬ್ಬರೂ ಮಾತನಾಡದೆ ಬರಿಯ ಕಣ್ಣೀರು ಸುರಿಸುತ್ತಲಿದ್ದರು. ಏನನ್ನೋ ಹೇಳ ಬೇಕೆಂದು ರಾಮಮೂರ್ತಿ ಮೇಲಕ್ಕೆದ್ದು ಕುಳಿತುಕೊಂಡ. ಬಾಯಿಂದ ಮಾತುಗಳು ಹೊರಡಲೊಲ್ಲವು. ಒಬ್ಬರನ್ನೊಬ್ಬರು ಕಣ್ಣು ಬಿಡಿಯದೆ ನೋಡಿಯೆ ನೋಡಿದರು. ಅವರಿಬ್ಬರ ನೋಟಗಳು ಆಗ ಆಡಿದ ಮೂಕ ಮಾತಿನ ಅರ್ಥವನ್ನು ಹೇಳುವುದು ಕಠಿನ ಕೆಲಸ.

ಚಿನ್ನಪ್ಪನು ಒಮ್ಮೆಲೆ ಮೇಲಕ್ಕೆದ್ದ; ರಾಮಮೂರ್ತಿಯ ಅಡಿಗಳೆರಡನ್ನೂ ಗಟ್ಟಿಯಾಗಿ ಹಿಡಿದುಕೊಂಡ. "ರಾಮಣ್ಣಾ ಏನೂ ತಿಳೀಲಾರದ ತಮ್ಮಂದು. . ಇದೊಂದು ತಪ್ಪನ್ನ ತಾಳಕೊಳ್ತೀಯಾ?" ನಡುಗುವ ಧ್ವನಿಯಲ್ಲಿ ನುಡಿದ. ಕಂಬನಿಯಿಂದ ಕಾಲನ್ನು ತೋಯಿಸಿದ.

"ಚಿನ್ನಾ! ಒಂದೇ ಯಾಕೆ, ಇಂಥಾ ನೂರು ತಪ್ಪುಗಳನ್ನಾದರೂ ತಾಳುತ್ತೇನೆ; ಆದರೆ ನನ್ನದೊಂದು ಮಾತನ್ನು ಮಾತ್ರ ನೀನು ನಡೆಯಿಸಬೇಕು!" ರಾಮಮೂರ್ತಿ ಸಮಾಧಾನದಿಂದ ಹೇಳಿದ.

"ಯಾವ ಮಾತು? ನೀ ಈಗ ಏನು ಹೇಳಿದರೂ ಕೇಳತೀನಿ; ರಾಮಣ್ಣಾ, ನಿನ್ನ ಹಣ್ಣಾದ ಎದೀನ ಏನೂ ತಿಳೀದs ತುಳಿದೆ. ಖಂಡಿತ ನಾನು ಪಾಪಿ!" ಚಿನ್ನಪ್ಪ ಕಣ್ಣೀರುಮಿಡಿಯುತ್ತ ನುಡಿದ.

"ಸರಿಯಷ್ಟೆ! ಹಾಗಾದರೆ ಚಿನ್ನಾ, ಉಳಿದ ರಗಳೆಯೆಲ್ಲ ಏನೇ ಇರಲಿ! ನೀನು ನೀಲಮ್ಮನನ್ನು ಕಾಣಲಿಕ್ಕೆ ನಾಳೆಯ ಬೆಳಗಿನಲ್ಲಿ ಹೋಗಲೆ ಬೇಕು! ಇದೇ ನನ್ನ ಮಾತು! ಕೇಳುತ್ತೀಯಲ್ಲವೇ ಇದನ್ನು?" ಎಂದು ರಾಮಮೂರ್ತಿ ಎದೆಕರಗುವಂತೆ ನುಡಿದ.

ಚಿನ್ನಪ್ಪನು ಕೃತಜ್ಞತೆಯಿಂದ ಕೂಡಿರುವ ನೋಟದಿಂದ, ಕಣ್ಣರಳಿಸಿ ರಾಮಮೂರ್ತಿಯನ್ನು ನೋಡಿದ. "ರಾಮಣ್ಣಾ, ಇನ್ನಮ್ಯಾಲ ನಿನ್ನ ಯಾವ ಮಾತನ್ನೂ ಮೀರೂದಂದರ, ದೊಡ್ಡ ಪಾಪಾ ಅಂತ ತಿಳೀತೀನಿ!"

ಎಂದು ನುಡಿದ. ಆಗ ರಾಮಮೂರ್ತಿಗಾದ ಆನಂದವನ್ನು ಬಣ್ಣಿಸುವವ ರಾರು ? ತಲೆಯ ಮೇಲಿದ್ದ ಗುಡ್ಡವೊಂದು ಕೆಳಕ್ಕುರುಳಿಬಿದ್ದಷ್ಟು ಹಗುರೆನಿಸಿತು ಮನಸ್ಸಿಗೆ.

೧೦

ನೀಲಮ್ಮನಿಗೆ ಜ್ವರವು ದಿನದಿನಕ್ಕೂ ಹೆಚ್ಚುತ್ತಿದ್ದಿತು. ಔಷಧ ವನ್ನಂತೂ ಆಕೆ ಮುಟ್ಟುತ್ತಿರಲಿಲ್ಲ. ಹೊಟ್ಟೆಯಲ್ಲಿ ಅಗುಳು ಅನ್ನವಿಲ್ಲ, ಹನಿ ಹಾಲಿಲ್ಲ. ಮಲ್ಲೇಶಿ ಚೆನ್ನಪ್ಪನನ್ನು ಕರೆಯಲಿಕ್ಕೆ ಹೋದ ದಿವಸ, ನೀಲಮ್ಮ ನಿಗೆ ಏನೋ ಒಂದುಬಗೆಯ ಸಮಾಧಾನ; ಅಂದು ಅವಳ ನೋಟದಲ್ಲಿ ಆಸೆಯು ತುಂಬಿತುಳುಕುತ್ತಿದ್ದಿತು. ಆಗಾಗ ಕಣ್ಣದರಿಸಿ ಸುತ್ತಲೂ ನೋಡುವಳು; ಮಲ್ಲೇಶಿ ಸಂಜೆಗೆ ಮರಳಿ ಬಂದ; ಆದರೆ ಚೆನ್ನಪ್ಪ ಒರಲೆ ಇಲ್ಲ. ಅಲ್ಲಿ ನಡೆದ ಎಲ್ಲ ಸಂಗತಿಯನ್ನೂ ಮಲ್ಲೇಶಿಯು ಅಣ್ಣನಿಗೂ ಅತ್ತಿಗೆಗೂ ಹೇಳಿದ; ಕೇಳಿ ನಡುಗಿದರು. ಕಂಬನಿಗರೆದರು. ಚೆನ್ನಪ್ಪ ಬಾರದಿದ್ದುದು ನೀಲಮ್ಮನಿಗೆ ತಿಳಿಯಿತು. ನಿರಾಶೆಯ ನಿಟ್ಟುಸಿರನ್ನು ಬಿಟ್ಟಳು. ಮುಖ ಮುದುಡಿಸಿದಳು. ಮನದಲ್ಲಿ ಮರುಗಿದಳು. ಅಂದು ರಾತ್ರಿಯಲ್ಲಿ ನೀಲಮ್ಮನಿಗೆ ದಿನಕ್ಕೆ ಇಮ್ಮಡಿಯಾಗಿ ಜ್ವರ. ಮೈಮುಟ್ಟಿದರೆ ಕಾದಹಂಚನ್ನು ಹಿಡಿದಂತೆ; ಮೈಮೇಲೆ ಜೋಳವನ್ನಿಟ್ಟರೆ ಅರಳಾಗುವಂತೆ.

ಮರುದಿನ ನಾಲ್ಕು ತಾಸು ಹೇಳೆಯಾಗಿದೆ. ನೀಲಮ್ಮ ಜ್ವರದಿಂದ ಹೊಯ್ದು ಹೋಳಿಗೆಯಾಗುತ್ತಿದ್ದಾಳೆ. ಅಸಹ್ಯವಾದ ಸಂಕಟಪಡು ತ್ತಿದ್ದಾಳೆ. ಮನೆಯವರು ಅವಳ ಸಂಕಟವನ್ನು ನೋಡಲಾರದವರಾಗಿದ್ದರು. ನೀಲಮ್ಮನ ತಂದೆ-ತಾಯಿಗಳ ಎದೆಯಳಲನ್ನಂತೂ ಬಣ್ಣಿಸಲಿಕ್ಕಾಗದು. ಎಲ್ಲರೂ ನೀಲಮ್ಮನ ಬಳಿಯಲ್ಲಿ ಜೋಲುಮೋರೆಯಿಂದ ಕುಳಿತಿರಲು, ಒಮ್ಮಿಂದೊಮ್ಮೆ ಚೆನ್ನಪ್ಪ ಒಳಕ್ಕೆ ಬಂದ. ಅಲ್ಲಿ ಕುಳಿತವರಿಗೆಲ್ಲ ಆಶ್ಚರ್ಯ; ಅದರೊಡನೆಯೆ ಆನಂದ. ನೀಲಮ್ಮನ ತಂದೆ-ತಾಯಿಗಳಿಗಂತೂ ಬಾಯಿಂದ ಮಾತುಗಳೆ ಹೊರಡಲಿಲ್ಲ.

ಚೆನ್ನಪ್ಪ ಬಂದವನೆ ಆತುರದಿಂದ, ನೀಲಮ್ಮನ ಹಾಸಿಗೆಯ ಬಳಿ ಹೋದನು. ತೀರ ಪಕ್ಕದಲ್ಲಿಯೆ ಕುಳಿತನು. “ ನೀಲೀ ! ನೀ ಬಂದು

ಹೂವು!..ನೀ ಒಂದು ದೇವತೆ..! ನಾನು ಪಾಪಿ!..ನನ್ನ ಮುಕದ ಕಡೆ ನೋಡಿ.." ಚಿನ್ನಪ್ಪನಿಗೆ ಮಾತನಾಡುವುದಕ್ಕಾಗಲಿಲ್ಲ. ನೀರವನಾಗಿ ಕಣ್ಣೀರು ಸುರಿಸಲು ತೊಡಗಿದನು.

"ನೀಲೀ" ಎಂದು ಕರೆದ ಚಿನ್ನಪ್ಪನ ದನಿ ಕಿವಿದೆರೆಗೆ ಬಿದ್ದಿತು; ನೀಲಮ್ಮ ಬೆಚ್ಚಿಬಿದ್ದಳು. ಬಾಡಿದ್ದ ಕಣ್ಣುಗಳನ್ನರಳಿಸಿ ಚಿನ್ನಪ್ಪನ ಕಡೆಗೆ ನೋಡಿದಳು; ಆವೇಶಬಂದಂತಾಗಿ, ಚಕ್ಕನೆ ತಲೆಯನ್ನೆತ್ತಿ ಚಿನ್ನಪ್ಪನ ತೊಡೆಯಮೇಲೆ ಮಡಗಿದಳು. ಆನಂದಾತಿರೇಕದಿಂದಲೇನೊ-ಮೈಮರೆತು ಹಾಗೆಯೆ ಕಣ್ಣುಮುಚ್ಚಿದಳು: ನಿಶ್ಚಲಳಾಗಿ ಮಲಗಿಬಿಟ್ಟಳು. ಚಿನ್ನಪ್ಪನಾಗ ನೀಲಮ್ಮನ ಮುಖದತ್ತ ಕಣ್ಣು ಒಡಿಯದೆ ನೋಡುತ್ತಲಿದ್ದ. ಕೈಯಿಂದ ಎಡೆಬಿಡದೆ ಮೈದಡಹುತ್ತಲಿದ್ದ. ಆಗಿನ ಅವನ ಕಂಬನಿಗಳು ದುಃಖದುವೊ ಆನಂದದುವೊ ಎಂಬುವನ್ನು ಸರಿಯಾಗಿ ಹೇಳುವುದು ನೀಗದ ಕೆಲಸ.

ಅಂದು ಚಿನ್ನಪ್ಪನಿಂದ ನೀಲಮ್ಮನನ್ನು ಅಗಲಿಸಿದ ಕೈಯೆ, ಇಂದು ಮರಳಿ ಅವರಿಬ್ಬರನ್ನೂ ಒಂದಾಗಿ ಬೆರೆಯಿಸಿಬಿಟ್ಟಿತು. ಅದಾವುದು ಆ **ಕಾಣದ ಕೈ**? ಆ ಕೈಯನ್ನು ಕಂಡವರು ಲೋಕದಲ್ಲಿ ಯಾರಾದರೂ ಇರುವರೆ? ಬರೆದು ಬರೆದು ಬೇಸತ್ತು ನೋಯುತ್ತಿರುವ ನನ್ನ ಕೈಮಾತ್ರ ನನಗೆ ಕಾಣುತ್ತಿರುವುದು: ಇದಕ್ಕೇನು ಬೆಲೆ?

# ಮಮತೆಯ ಮುಡಿಪು

ಮಿ. ಹಾರ್ಸ್‌ಮನ್ ಸಾಹೇಬರು ಆರು ತಿಂಗಳ ರಜೆಯನ್ನು ಪಡೆದು-ಕೊಂಡು ಸೀಮೆಗೆ ಹೋದುದರಿಂದ, ಅವರು ಬರುವವರೆಗೆ ಜಿಲ್ಲೆಯ ಮುಖ್ಯಾಧಿಕಾರದ ಸೂತ್ರವು ಶ್ರೀ. ನಾಗೇಂದ್ರರಾಯರ ವಶಕ್ಕೆ ಬಂದಿತು. ಈ ಅಧಿಕಾರ ಫಲಪ್ರಾಪ್ತಿಗಾಗಿ ರಾಯರು ಎಷ್ಟೊಂದು ಸತ್ಯನಾರಾಯಣನ ಪೂಜೆಗಳನ್ನು ಮಾಡಿಸಿದ್ದರೊ! ಎಷ್ಟೆಷ್ಟು ದೇವರಿಗೆ ಮುಡಿಪು ಸಲ್ಲಿಸುವುದಾಗಿ ಬೇಡಿಕೊಂಡಿದ್ದರೊ! ಅವರ ಹೆಂಡತಿ ಹತ್ತಿ- ತುಪ್ಪಗಳನ್ನೆಷ್ಟು ಸುಟ್ಟುಬಿಟ್ಟಿದ್ದರೋ! ಕೊನೆಗೆ ಮುಡುಪಿನಾಶೆಯ ಎಲ್ಲ ದೇವತೆಗಳು ಕಣ್ಣು ತೆರೆದುವು; ರಾಯರ ಹೆಂಡತಿಯು ಹಚ್ಚುತ್ತಿದ್ದ ತುಪ್ಪದ ದೀಪದ ಬೆಳಕಿನಲ್ಲಿ, ರಾಯರ ಮನದ ಬಯಕೆಯನ್ನು ಕಂಡುಹಿಡಿದುವು. ಕೆಲವು ದಿನಗಳ ಮಟ್ಟಿಗಾದರೂ ರಾಯರಿಗೆ ಆ ಅಧಿಕಾರವನ್ನು ಒದಗಿಸಿಕೊಟ್ಟುವು. "ದೇವರ ಆಡಳಿತದಲ್ಲಿ—ತ್ಯಾಗ-ಸೇವೆಗಳ ಸಾಮರ್ಥ್ಯದಿಂದ—ಅಸುರನಾದ ಬಲಿಯು ಅಸುರೇಂದ್ರನ ಪದವಿಯನ್ನು ಪಡೆಯಬಲ್ಲ; ಸ್ಪರ್ಶಶಕ್ತಿಮಾತ್ರವುಳ್ಳ ವಾಯುವು ಸೃಷ್ಟಿಕರ್ತನಾದ ಬ್ರಹ್ಮನ ಪಟ್ಟವನ್ನು ಆಕ್ರಮಿಸಬಲ್ಲ; ಎಂದ ಮೇಲೆ ಡೆಪ್ಯುಟಿ ಕಲೆಕ್ಟರರಾಗಿದ್ದ ತಾವು ಜಿಲ್ಲಾಕಲೆಕ್ಟರ್ ಆಗುವುದೊಂದು ದೊಡ್ಡ ಮಾತೇ?" ಎಂದು ನಾಗೇಂದ್ರರಾಯರಿಗೆ ಆಗಾಗ ಎನಿಸುತ್ತಿದ್ದಿತು. ಸದ್ಯಕ್ಕಂತೂ ಅವರ ಎನಿಸಿಕೆ ನಿಜವಾಯಿತು.

ಈಗ ರಾಯರ ತಲೆಯಲ್ಲಿ ನಿರಂತರವೂ ಒಂದು ಯೋಚನೆ: 'ಕೈಗೆ ದೊರೆತ ಈ ತಪಃಫಲವನ್ನು, ಕೊನೆಯವರೆಗೆ ದಕ್ಕಿಸಿಕೊಳ್ಳುವಂತೆ ತಾವು ಯಾವ ಯಾವ ಉಪಾಯಗಳನ್ನು ಮಾಡಬೇಕು?' ಎಂದು. ರಾಷ್ಟ್ರೀಯ ಸಭೆಯ ಅನುಯಾಯಿಗಳನ್ನು ಬಗ್ಗುಬಡಿದು, ಚಿಕ್ಕ ಅಧಿಕಾರಗಳಿಂದ ಒಮ್ಮೆಲೆ ದೊಡ್ಡ ಅಧಿಕಾರಗಳಿಗೆ ಬೇರೆ ಬೇರೆಯವರು ಹಾರುತ್ತಿರುವುದನ್ನು ರಾಯರು ಆಗಾಗ ಪತ್ರಿಕೆಗಳಲ್ಲಿ ಓದುತ್ತಿದ್ದರು.

ರಾಯರಿರುವ ಪಟ್ಟಣದಲ್ಲಿಯೂ ವಿದೇಶೀಯ ವಸ್ತ್ರಗಳ ಬಹಿಷ್ಕಾರದ ಚಳುವಳಿಯು ಅದೆಷ್ಟೋ ದಿನಗಳಿಂದ ಸಾಗಿದ್ದಿತು. ಎಲ್ಲ ಅಂಗಡಿಗಳ ಮುಂದೆಯೂ ಸ್ವಯಂಸೇವಕರು ಜಾಗರೂಕತೆಯಿಂದ ಕಾವಲು ಮಾಡುತ್ತಲಿದ್ದರು. ವರ್ತಕರೆಲ್ಲರೂ ಸೇರಿ ತಮ್ಮ ತೊಂದರೆಗಳನ್ನು ಬಹಳವಾಗಿ ಬಿನ್ನವಿಸಿಕೊಂಡುದರಿಂದಲೋ, ಪೋಲಿಸ ಅಧಿಪತ್ಯದ ಒತ್ತಾಯದಿಂದಲೋ, ಮೊದಲಿನ ಸಾಹೇಬರು, ಅಂಗಡಿಗಳ ಮುಂದೆ ಕಾವಲು ಮಾಡುವುದು ನಿಯಮಬಾಹ್ಯವೆಂದೂ ಹಾಗೆ ಮಾಡುವವರನ್ನು ತಪ್ಪುಗಾರರೆಂದು ಭಾವಿಸಿ ತಕ್ಕ ಶಿಕ್ಷೆಯನ್ನು ವಿಧಿಸಲಾಗುವುದೆಂದೂ ಹುಕುಮನ್ನು ಹೊರಡಿಸಿದ್ದರು. ಜನರು ಆ ಹುಕುಮನ್ನು ಮೂಲೆಗೊತ್ತಿ, ಮೊದಲಿಗಿಮ್ಮಡಿಯಾದ ಹುಮ್ಮಸಿನಿಂದ ತಮ್ಮ ಕೆಲಸವನ್ನು ನಡೆಯಿಸಿದರು. ಕಲೆಕ್ಟರ್ ಸಾಹೇಬರ ಹುಕುಮು ದಿನದಿನವೂ ಹತ್ತಿಪ್ಪತ್ತು ಜನ ಸ್ವಯಂಸೇವಕರನ್ನು ಸೆರೆಮನೆಗೆ ಕಳಿಸಲು ತೊಡಗಿತು. ಇದರಿಂದ ಜನರಿಗೆ ಇನ್ನಿಷ್ಟು ಉತ್ಸಾಹ; ಜಿಲ್ಲೆಯೊಳಗಿನ ಬೇರೆ ಬೇರೆ ಕಡೆಗಳಲ್ಲಿಯ ಸ್ವಯಂಸೇವಕರ ಪಥಕಗಳು ಒಂದರ ಹಿಂದೆ ಒಂದರಂತೆ ಅಲ್ಲಿಗೆ ಬಂದು, ವ್ಯವಸ್ಥಿತವಾಗಿ ಕಾವಲಿನ ಕೆಲಸವನ್ನು ಮುಂದುವರಿಸುತ್ತಿದ್ದುವು. ಇದೇ ಸಂದರ್ಭದಲ್ಲಿಯೆ ಮಿ. ಹಾರ್ಸ್‌ಮನ್ ಸಾಹೇಬರು ರಜೆಯಮೇಲೆ ಹೊರಟುಹೋದರು. ನಾಗೇಂದ್ರರಾಯರು ಅವರ ಆಸನವನ್ನು ಅಲಂಕರಿಸಿದರು.

* * *

ಈ ಹೊತ್ತು ಮತ್ತೆ—ಅನೇಕ ಜನ— ಮುಖ್ಯ ವರ್ತಕರ ಅಂಕಿತಗಳನ್ನು ಒಳಗೊಂಡ ಬಿನ್ನವತ್ತಳೆಯೊಂದು ಬಂದಿದ್ದಿತು. ಅದರಲ್ಲಿ ಅವರು ತಮ್ಮ ಕಷ್ಟ-ನಷ್ಟಗಳನ್ನೆಲ್ಲ ವಿವರಣಾಪೂರ್ವಕವಾಗಿ ನಿವೇದಿಸಿದ್ದರಲ್ಲದೆ "ಸರಕಾರದಿಂದ ಬೇಗನೆ ಯೋಗ್ಯವಾದ ಸಹಾಯ ದೊರೆಯುವ ಏರ್ಪಾಡಾಗದಿದ್ದಲ್ಲಿ, ನಾವು ನಮ್ಮ ನಮ್ಮ ಅಂಗಡಿಗಳನ್ನು ಮುಚ್ಚಿ ಎಲ್ಲಿಗಾದರೂ ದೇಶಾಂತರ ಹೊರಟುಹೋಗಬೇಕಾಗುವುದು" ಎಂಬ ಕಳವಳದ ಅಭಿ-ಪ್ರಾಯವನ್ನೂ ವ್ಯಕ್ತಪಡಿಸಿದ್ದರು. ಇದಕ್ಕಾಗಿ ತಾವು ಹೇಗೆ ಹಜ್ಜೆಯಿಡಬೇಕೆಂಬ ವಿಚಾರದಲ್ಲಿ ರಾಯರು ನಾಲ್ಕೈದು ಘಂಟೆಗಳ ಕಾಲವನ್ನು ಕಳೆದಿದ್ದರು; ಬಳಿಕ ಒಂದು ನಿರ್ಣಯಕ್ಕೆ ಬಂದವರಾಗಿ, ಟೆಲಿಫೋನ್

ಮುಟಾಂತರವಾಗಿ ಪೋಲೀಸ್ ಸುಪರಿಂಟೆಂಡೆಂಟರನ್ನು, ಕೂಡಲೆ ತಮ್ಮಲ್ಲಿಗೆ ಬರುವಂತೆ ಹೇಳಿ ಕಳುಹಿಸಿದರು.

ಪೋಲೀಸ್ ಸಾಹೇಬರು ಬಂದರು. ರಾಯರು ಅವರನ್ನು ಸತ್ಕಾರವಿತ್ತು ಕುಳ್ಳಿರಿಸಿಕೊಂಡು, ಮುಕ್ಕಾಲು ಘಂಟೆಯುವರೆಗೆ ಚರ್ಚೆಮಾಡಿದರು. ಕೊನೆಗೆ ಹೇಳಿದರು:

"ಇನ್ನು ಸಡಿಲುಬಿಟ್ಟು ಉಪಯೋಗವಿಲ್ಲ. ನಮ್ಮ ಆಡಳಿತದ ಸಾಮರ್ಥ್ಯವನ್ನು ತೋರಿಸಲೆ ಬೇಕು. ಅನೇಕ ಕಡೆಗಳಲ್ಲಿಯಂತೆ ಇಲ್ಲಿಯೂ ಲಾಠೀಪ್ರಹಾರದ ಪ್ರಯೋಗವನ್ನು ತಂದು ಬಿಡಲಿಕ್ಕೆ ಬೇಕು. ಅದರ ಹೊರತು ಜನರು ಹಣ್ಣಿಗೆ ಬರುವದಿಲ್ಲ."

೨

ಅಂದು ಎಂಟುಘಂಟೆ ರಾತ್ರಿಯಾಗಿರಬಹುದು. ನಾಗೇಂದ್ರರಾಯರು ತಮ್ಮ ಬಂಗಲೆಯ ದಿವಾನ್‌ಖಾನೆಯಲ್ಲಿ, ಒಂದು ವಿಶ್ರಾಮಾಸನದ ಮೇಲೆ ಸಡೆದು ಕುಳಿತುಕೊಂಡಿದ್ದಾರೆ. ಮುಖದಲ್ಲಿ ಒಂದು ಸಲ ಉತ್ಸಾಹವು ತುಂಬಿ ತುಳುಕುವುದು; ಇನ್ನೊಂದು ಸಲ ಅತೃಪ್ತಿಯು ಮೊಗದೋರುವುದು. ಮಾಡಬೇಕಾಗಿದ್ದ ಕಾರ್ಯವನ್ನು ಮಾಡಿದೆನೆಂಬ ಸಮಾಧಾನವು ಅವರ ಮನಸ್ಸನ್ನು ಹಿಗ್ಗಿಸುತಿದ್ದಿತಾದರೂ, ಇನ್ನಾವುದೊ ಒಂದು ಅಸಮಾಧಾನದ ಮುಸುಕುರೂಪು, ಅವರ ಹಿಗ್ಗನ್ನು ಕೊಂಚಕಾಲ ಜಗ್ಗಿ ನಿಲ್ಲಿಸುತ್ತಿದ್ದಿತು; ಮತ್ತೆ "ಇನ್ನೇನು! ಈ ಅಧಿಕಾರವಿನ್ನು ನನ್ನ ಕೈಯನ್ನು ಬಿಟ್ಟು ಹೋಗುವುದಿಲ್ಲ!" ಎಂಬ ವಿಚಾರವು ರಾಯರ ನರನರಗಳನ್ನೂ ನಕ್ಕು ನಲಿದಾಡಿಸುತ್ತಿದ್ದಿತು; ಅತೃಪ್ತಿ-ಅಸಮಾಧಾನಗಳನ್ನು ಮನೋಮಂದಿರದಿಂದ ದಬ್ಬಿ ಹೊರದೂಡುತ್ತಿದ್ದಿತು.

ಪೋಲೀಸ್ ಸುಪರಿಂಟೆಂಡೆಂಟ್ ಸಾಹೇಬರೂ ಬೇರೆ ಇಬ್ಬರು ಪೋಲೀಸ್ ಅಧಿಕಾರಿಗಳೂ ರಾಯರ ಅಪ್ಪಣೆಯನ್ನು ಪಡೆದುಕೊಂಡು ಅವರು ಕುಳಿತಲ್ಲಿಗೆ ಬಂದರು. ರಾಯರಿಂದ ಸುಸ್ವಾಗತವನ್ನು ಹೊಂದಿ, ಉಚಿತ ಸ್ಥಳಗಳಲ್ಲಿ ಕುಳಿತುಕೊಂಡರು. ಸುಪರಿಂಟೆಂಡೆಂಟರ ಜೊತೆಗೆ ಬಂದ ಅಧಿಕಾರಿಯೊಬ್ಬನು ಹೇಳತೊಡಗಿದನು:

“ ಸಾಹೇಬರ ಹುಕುಮನ್ನು ಇಂದು ಚೆನ್ನಾಗಿ ಜಾರಿಯಲ್ಲಿ ತರಲಾಯಿತು. ಮಕ್ಕಳು! ಜೇಲಿನಲ್ಲಿ ಸುಖವಾಗಿ ಕುಳಿತು ದೇಶಭಕ್ತರಾಗಿ ಮೆರೆಯುತ್ತಿದ್ದರು; ಈ ಹೊತ್ತು ಜನರಲ್ಲಿಯ ದೇಶಭಕ್ತಿಯ ಪರೀಕ್ಷೆಯಾಗಿ ಹೋಯಿತು ! ”

ಗಾಂಭೀರ್ಯದ ಕಿರುನಗೆಯೊಂದಿಗೆ ರಾಯರು ಕೇಳಿದರು;

“ ಏನೇನಾಯಿತು ? ”

ಪೋಲೀಸ್ ಇನ್‌ಸ್ಪೆಕ್ಟರು ಹೇಳಲು ತೊಡಗಿದರು:

“ ಮೊದಲು ನಾವು ಒಂದು ಒಳ್ಳೆಯ ಉಪಾಯಮಾಡಿದೆವು. ಪೇಟೆಯಲ್ಲಿ ಸಾಕಷ್ಟು ಜನರು ಸೇರುವವರೆಗೆ ಎಲ್ಲರೂ ಸುಮ್ಮನಿರಬೇಕೆಂದು ಹೇಳಿಬಿಟ್ಟಿದ್ದೆವು. ತುಂಬ ಜನರು ಸೇರಿದಮೇಲೆ ಒಮ್ಮೆಲೆ ಲಾಠಿಯ ಪ್ರಯೋಗಕ್ಕೆ ಅಪ್ಪಣೆಕೊಟ್ಟೆವು. ಪೋಲೀಸರು ಚೆನ್ನಾಗಿ ಕೆಲಸ ಮಾಡಿದರು; ಹತ್ತೆಂಟು ನಿಮಿಷಗಳಲ್ಲಿಯೆ ಜನರು ಚೆಲ್ಲಾಪಿಲ್ಲಿಯಾದರು. ”

ರಾಯರು ಕೇಳಿದರು :

“ ಯಾರಿಗಾದರೂ ವಿಶೇಷವಾಗಿ ಏಟುಗಳು ಬಿದ್ದುವೇನು ? ”

“ ಬೀಳದೇನು ಮಾಡಿಯಾವು ರಾವ್‌ಸಾಹೇಬ್ ! ನಲವತ್ತು ಜನ ಪೋಲೀಸರ ಲಾಠಿಗಳು ಒಂದೇಸಮನೆ ತಿರುಗುತ್ತಿದ್ದುವು ! ಗಾಯಪಟ್ಟ ಇಪ್ಪತ್ತು ಇಪ್ಪತ್ತೈದು ಜನರನ್ನು, ನಾವೇ ನಮ್ಮ ಪೋಲೀಸ್ ಲಾರಿಯಲ್ಲಿ ಹಾಕಿ ಆಸ್ಪತ್ರೆಗೆ ಕಳುಹಿಸಿದೆವು. ನಾಲ್ಕೈದು ಜನ ಸ್ವಯಂಸೇವಕರಿಗಂತೂ ವಿಪರೀತವಾಗಿ ಗಾಯಗಳಾಗಿವೆ. ಅಲ್ಪಸ್ವಲ್ಪ ಏಟು ತಗುಲಿ, ಮನೆಗೆ ಓಡಿದವರೆಷ್ಟು ಜನರೊ ! ಜನರಮೇಲೆ ಇದರ ಪರಿಣಾಮವಾಗದೆ ಬಿಡದು. ನಾಳೆಯಿಂದ ಕಾವಲು ನಡೆದರೆ ನನ್ನನ್ನು ಕೇಳಿ ! ”

ರಾಯರು ತಮ್ಮ ಅಧಿಕಾರಕ್ಕೆ ತಕ್ಕ ಸ್ವರದಲ್ಲಿ ಹೇಳಿದರು.

“ ಒಳ್ಳೆಯ ಕೆಲಸಮಾಡಿದಿರಿ ! ನಿಮ್ಮೆಲ್ಲರ ಕಾರ್ಯನಿರ್ವಹಣದ ಬಗ್ಗೆ ತಕ್ಕ ಪ್ರತಿಫಲವು ದೊರೆಯದೆ ಇರದು. ಇಂದೆಯೆ ನಾನು ಮೇಲಕ್ಕೆ ಬರೆದು ತಿಳುಹಿಸುವೆನು ! ”

ತೃಪ್ತ ಪುನಸ್ಕರಾದ ರಾಯರು, ಬಂದಿದ್ದವರೊಡನೆ ತಮ್ಮ ಅಂತಸ್ತಿನಿಂದ ಕೆಳಕ್ಕಿಳಿದೂ- ನಕ್ಕು ಕೆಲಿದು- ಮಾತನಾಡಿದರು. ತಮ್ಮ ಅಂದಿನ ಕಾರ್ಯಕ್ಕಾಗಿ ಜಿಲ್ಲೆಯ ಅಧಿಕಾರಿಗಳ ಮುಕ್ತಕಂಠದ ಪ್ರಶಂಸೆಯ ಮಾತುಗಳನ್ನು ಕೇಳಿ, ಪೋಲೀಸ್ ಅಧಿಕಾರಿಗಳೂ ಸಂತೋಷಸಾಗರದಲ್ಲಿ ಈಜಾಡುತ್ತಿದ್ದರು. ಅಂದು ಅವರು, ತಮಗೆ ಹೆಚ್ಚಿನ ಸ್ಥಾನಪ್ರಾಪ್ತಿಯಾಗಿ, ಹೆಚ್ಚು ದುಡ್ಡು ದೊರೆಯಲಿರುವುದೆಂಬುದನ್ನು ತಮ್ಮ ತಮ್ಮ ಸಲ್ಲೆಯರ ಮುಂದೆ ಬಣ್ಣಿಸಿ ಹೇಳಿ, ಅವರಿಂದ ಹೆಚ್ಚಿನ ಉಪಚಾರ-ಪ್ರೀತಿಗಳನ್ನೂ ಪಡೆದಿರಬಹುದು.

೩

ನಾಗೇಂದ್ರರಾಯರಿಗೆ ಸುಲೋಚನೆ ಒಬ್ಬಳೆ ಒಬ್ಬಳು ಮಗಳು. ತಾಯಿ-ತಂದೆಗಳಿಬ್ಬರಡೂ ನಿರತಿಶಯವಾದ ಪ್ರೀತಿಯವಳಲ್ಲಿ. ಮೊದಲನೆಯ ಗಂಡುಮಗುವನ್ನು ಹೆತ್ತು, ಈಗ ಇಪ್ಪತ್ತು ದಿನಗಳಿಗೆ ಮೊದಲೆ ಸುಲೋಚನೆ ಗಂಡನ ಮನೆಗೆ ಹೋಗಿದ್ದಳು. ಮಗಳನ್ನು ಅಗಲಿ ಇರುವುದಕ್ಕೆ ತಂದೆ-ತಾಯಿಗಳಿಬ್ಬರಿಗೂ ಮನಸ್ಸಿಲ್ಲ. ಅಳಿಯ ಮಗಳು ಇಬ್ಬರೂ ಸೇರಿ ತಮ್ಮ ಮನೆಯಲ್ಲಿಯೆ ಇರಬೇಕೆಂದು ಅವರಿಗೆ ತುಂಬ ಆಸೆ; ಆದರೆ ಗಿರೀಶನ ತಂದೆಗೆ— ಸುಲೋಚನೆಯ ಮಾವನಿಗೆ—ಈ ಮಾತು ಒಪ್ಪಿಗೆ ಇರಲಿಲ್ಲ. ಮಾಡುವುದೇನು ? ಕಲೆಕ್ಟರ್ ಇರಲಿ; ಕಮಿಶನರ್ ಇರಲಿ; ನಾಗೇಂದ್ರರಾಯರು ಹೆಣ್ಣು ಹೆತ್ತ ಹಿಂದುಗಳಲ್ಲವೇ ?

ಗಿರೀಶನು ಜೂನಿಯರ್ ಎಲ್ ಎಲ್. ಬಿ. ಫೇಲಾಗಿ, ಮನೆಯಲ್ಲಿಯೆ ಇದ್ದುಕೊಂಡು, ಮತ್ತೆ ಅದರ ಓದನ್ನು ನಡೆಯಿಸಿದ್ದನು. ನಾಗೇಂದ್ರ-ರಾಯರೂ ಅವರ ಹೆಂಡತಿಯೂ—ಒಬ್ಬಳೇ ಒಬ್ಬಳು—ಮಗಳ ಗಂಡನಾದ ಗಿರೀಶನನ್ನು ತಮ್ಮ ಕಣ್ಣ ಬೊಂಬೆಯಂತೆ ಭಾವಿಸಿದ್ದರು. ಮಗಳನ್ನೂ ಅಳಿಯನನ್ನೂ ಆಗಾಗ ತಮ್ಮಲ್ಲಿಗೆ ಕರೆಯಿಸಿಕೊಂಡು, ತಮ್ಮ ನಿಃಸೀಮವಾದ ಮಮತೆಯ ಮಹಾಸಾಗರದಲ್ಲಿ ಅವರನ್ನು ತೇಲಾಡಿಸುತ್ತಿದ್ದರು. ಸುಲೋಚನಾ-ಗಿರೀಶರ ದಾಂಪತ್ಯಪ್ರೇಮವನ್ನು ಕಣ್ಣಿಂದ ಕಂಡು ಕೃತಾರ್ಥರಾಗುತ್ತಿದ್ದರು. ಮಗಳ, ಅಳಿಯನ ಮೇಲಿನ ಮೋಹವು,

ರಾಯರ ಮನವನ್ನು ಅವಿರತವಾಗಿ ಕೊರೆಯುತ್ತಲಿರುವ ಅಧಿಕಾರದ ಆಕಾಂಕ್ಷೆಯನ್ನೂ ಕೊಂಚಕಾಲ ಮರೆಯಾಗಿಸಿ ಬಿಡುವುದು.

ಹಗಲು ಒಂಬತ್ತು ಘಂಟೆಯಾಗಿರಬಹುದು. ರಾಯರು ತಮ್ಮ ದಿನದ ಸ್ಥಳದಲ್ಲಿ ಕುಳಿತುಕೊಂಡು, ಏನೇನೋ ಕಾಗದ ಪತ್ರಗಳನ್ನು ನೋಡುತ್ತಿದ್ದರು. ಆಳು ಅಂದಿನ ಅಂಚೆಯನ್ನು ತಂದು— ಭಯಭಕ್ತಿಯಿಂದ—ಮೆಲ್ಲಗೆ ರಾಯರ ಟೇಬಲ್ಲಿನ ಮೇಲಿಟ್ಟು ಹೊರಟು ಹೋದನು. ಕೈಯಲ್ಲಿದ್ದ ಕೆಲಸವನ್ನು ತೀರಿಸಿ ರಾಯರು ಅಂಚೆಯನ್ನು ಮುಂದಕ್ಕೆ ಸರಿಸಿಕೊಂಡರು; ಬಂದಿದ್ದ ಕಾಗದಗಳನ್ನು ಒಂದೊಂದಾಗಿ ನೋಡಲು ತೊಡಗಿದರು. ನಾಲ್ಕೈದು ಕಾಗದಗಳನ್ನು ಓದಿ ಮುಗಿಸಿ ಕೆಳಕ್ಕಿಟ್ಟರು. ಕವರೊಂದನ್ನು ನೋಡಿ ರಾಯರ ಮುಖವು ಆನಂದದಿಂದ ಅರಳಿತು. ಸುಲೋಚನೆಯು ಬರೆದ ಕಾಗದವದು; ರಾಯರು ಕಟ್ಟನ್ನು ಒಡೆದು, ಆತುರದಿಂದ ಕಾಗದ ಓದಲು ತೊಡಗಿದರು:

“ ತೀರ್ಥರೂಪರ ಚರಣಗಳಿಗೆ ಪ್ರೀತಿಯ ನಮಸ್ಕಾರಗಳು.

ನಾನಿಲ್ಲಿ ಸೌಖ್ಯವಾಗಿದ್ದೇನೆ. ಮಗುವು ಆರೋಗ್ಯವಾಗಿದೆ. ಇಲ್ಲಿಗೆ ಬಂದಾಗಿನಿಂದ ಅದು ಎಷ್ಟೊಂದು ಆಟವಾಡುತ್ತಿದೆಯೆನ್ನುವಿರಿ! ತನ್ನ ತಂದೆಯನ್ನು ಕಂಡರೆ, ಅದೆಷ್ಟೋ ದಿನದ ಪರಿಚಿತರನ್ನು ಕಂಡಂತೆ ಅವರ ಬಳಿಗೆ ಹೋಗಲು ಹವಣಿಸುತ್ತಿದೆ. ನಾನಿಲ್ಲಿ ಬಂದಾಗಿನಿಂದ ಮಗುವಿನ ಮುಖವೇ ಅವರ ಅಭ್ಯಾಸದ ಪುಸ್ತಕವಾಗಿದೆ. ಯಾವಾಗಲೂ ಬಳಿಯಲ್ಲಿ ಕರೆದುಕೊಂಡೆ ಇರುವರು. ಪಾಪ! ಮಗುವನ್ನು ನಿದ್ದೆ ಮಾಡಲಿಕ್ಕೆ ಕೂಡ ಬಿಡುವುದಿಲ್ಲ. ಇದೆಲ್ಲವನ್ನೂ ಅಮ್ಮನಿಗೆ ಓದಿ ಹೇಳಬೇಕು.

ಇನ್ನೊಂದು ವಿಶೇಷ ಸಂಗತಿ: ರಾಷ್ಟ್ರೀಯ ಚಳುವಳಿಯ ಬಗ್ಗೆ ಅವರಲ್ಲಿ ತುಂಬ ಆದರವೆಂಬ ಮಾತು ನಿಮಗೂ ಗೊತ್ತಿದೆ; ಅದರಲ್ಲಿ ತಾವೂ ಪ್ರತ್ಯಕ್ಷ ಭಾಗ ತೆಗೆದುಕೊಳ್ಳಬೇಕು ಎಂದು ಎಂದಿನಿಂದಲೂ ಹವಣಿಸುತ್ತಲಿದ್ದರು. ತಂದೆಯ ಒಪ್ಪಿಗೆಯ ಆವಶ್ಯಕತೆಯೂ ಅವರಿಗಿರಲಿಲ್ಲ. ಕೇವಲ ನನ್ನ ಅಸಮ್ಮತಿಯನ್ನು ಕಂಡೇ ಮತ್ತೆ ಮತ್ತೆ ತಮ್ಮ ಮನಸ್ಸನ್ನು ಬಿಗಿದು ಹಿಡಿಯುತ್ತಿದ್ದರು. ಅವರ ಹೃದಯದ ಕಳವಳವನ್ನು ಕಣ್ಣಿಂದ ನೋಡುವುದಾಗದೆ—ಈಗ ಎರಡು ಮೂರು ದಿನಗಳ ಹಿಂದೆ—ಗಟ್ಟಿ ಮನಸ್ಸು ಮಾಡಿ ನನ್ನ ಸಮ್ಮತಿಯನ್ನು ಕೊಟ್ಟೆನು. ನಿಮ್ಮ ಪಟ್ಟಣದಲ್ಲಿ ನಡೆದ ವಿದೇಶೀಯ ವಸ್ತ್ರಗಳ ಬಹಿಷ್ಕಾರದ ಕಾರ್ಯಕ್ಕಾಗಿ, ಅಂದೆಯೆ ಈ ಊರಿಂದ ಹೊರಡಲಿರುವ ಸ್ವಯಂಸೇವಕ ಪಥಕದಲ್ಲಿ ಸೇರಿಕೊಂಡು ಅಲ್ಲಿಗೆ ಬಂದಿದ್ದಾರೆ. ಅವರು

ಎಲ್ಲಿಗೆ ಹೋಗಿದ್ದಾರೆಂಬ ಸಂಗತಿ ನನ್ನೊಬ್ಬಳ ಹೊರತು ಮತ್ತಾರಿಗೂ ಗೊತ್ತಿಲ್ಲ. ಆಗೇನೋ ಹೊರಡುವುದಕ್ಕೆ ಸಮ್ಮತಿಯನ್ನು ಕೊಟ್ಟೆ, ಆದರೆ ಈಗ ಹಗಲಿರುಳೂ ಅವರ ಯೋಚನೆಯೆ. ಊಟದಲ್ಲಿ ರುಚಿಯಿಲ್ಲ, ಕಣ್ಣಿಗೆ ನಿದ್ದೆಯಿಲ್ಲ. ಮೊನ್ನೆಯ ಸಾಯಂಕಾಲದಲ್ಲಿಯೆ ಅವರು ಅಲ್ಲಿಗೆ ಬಂದಿರಬಹುದು. ನೀವು ಅವರ ಯೋಗ-ಕ್ಷೇಮವನ್ನು ಸರಿಯಾಗಿ ವಿಚಾರಿಸಬೇಕೆಂಬುದನ್ನು ನಾನೇನೂ ಹೇಳಬೇಕಾಗಿಲ್ಲ. ಅಲ್ಲಿಯ ಎಲ್ಲ ಸಂಗತಿಗಳನ್ನೂ ಕಾಗದ ಬರೆದು ತಿಳುಹಿಸಿ.

ನಿಮ್ಮ ಪ್ರೀತಿಯ,
ಪುಟ್ಟು ಅಥವಾ ಸುಲೋಚನಾ

ಪತ್ರವನ್ನು ಓದುತ್ತಿರುವಾಗಲೆ ರಾಯರ ಎದೆ ಧಸ್ಸೆಂದಿತು. ಮುಖವು ಹುಚ್ಚು ಪೆಚ್ಚಾಯಿತು. ಟೆಲಿಫೋನಿನಿಂದ ಯಾರಿಗೋ ಏನನ್ನೋ ಹೇಳಿ ಕಳುಹಿಸಿದರು. ಬಳಿಕ ಕೂಗುಗಂಟೆಯನ್ನು ಬಾರಿಸಿದರು. ಆಳು ಒಳಕ್ಕೆ ಬಂದೊಡನೆಯೆ ಆತುರದಿಂದ ಹೇಳಿದರು:

" ಡ್ರೈವರನಿಗೆ ಬೇಗನೆ ಕಾರು ತೆಗೆದುಕೊಂಡು ಬರುವಂತೆ ಹೇಳು!"

ರಾಯರ ಆತುರಕ್ಕೆ ಇಮ್ಮಡಿಯಾದ ಆತುರವನ್ನು ತೋರಿಸುವ ನಡಿಗೆಯಲ್ಲಿ ಆಳು ಹೊರಟುಹೋದನು.

೪

ಜಿಲ್ಲೆಯ ಅಧಿಕಾರಿಗಳು ಆಸ್ಪತ್ರೆಯ ನಿರೀಕ್ಷಣೆಗೆ ಬರಲಿರುವುದರಿಂದ ಆಸ್ಪತ್ರೆಯಲ್ಲಿ ವಿಪರೀತ ಗಲಾಟೆ. ಡಾಕ್ಟರ್ ಜನರು, ಕಾಂಪಾವುಂಡರುಗಳು, ನರಸಮ್ಮಗಳು, ಆಳುಗಳು ಎಲ್ಲರೂ ತಮ್ಮ ತಮ್ಮ ಕಾರ್ಯದಲ್ಲಿ ಆಸಕ್ತರಾಗಿದ್ದಾರೆ. ಆಸ್ಪತ್ರೆಯ ಮುಖ್ಯಾಧಿಕಾರಿಗಳು ಸಾಹೇಬರ ಸ್ವಾಗತದ ಸಿದ್ಧತೆಯಲ್ಲಿದ್ದಾರೆ. ನಾಗೇಂದ್ರರಾಯರ ಕಾರು ಸರ್ರೆಂದು ಅಂಗಣದಲ್ಲಿ ಬಂದು ನಿಂತಿತು. ಮುಖ್ಯ ಡಾಕ್ಟರು ಆದರದಿಂದ ಸ್ವಾಗತ-ಮಾಡಿದರು. ಪರಸ್ಪರ ಕೈಕುಲುಕಾಟವಾದೊಡನೆಯೆ ರಾಯರು ಆತುರ ಭಾವದಿಂದ ಮುಖ್ಯ ಡಾಕ್ಟರೊಂದಿಗೆ ಹೇಳಿದರು. "ಮೊದಲು ನಾನು.. ನಿನ್ನೆಯ ಗಲಾಟೆಯಲ್ಲಿ ಗಾಯಪಟ್ಟು ಬಂದವರನ್ನು ನೋಡಬೇಕಾಗಿದೆ."

" ಆಗಬಹುದು ಸರ್ " ಎಂದು ಮುಖ್ಯ ಡಾಕ್ಟರು ಹೇಳಿ, ರಾಯರನ್ನು ಆಸ್ಪತ್ರೆಯ ಒಂದು ಭಾಗದೊಳಕ್ಕೆ ಕರೆದುಕೊಂಡು ಬಂದರು.

ಅಲ್ಲಿ ಸಾಲಾಗಿ ಮಲಗಿಕೊಂಡಿದ್ದವರಲ್ಲಿ ಒಬ್ಬೊಬ್ಬರನ್ನೆ ಅವರಿಗೆ ತೋರಿಸುತ್ತಾ ಬಂದರು. ರಾಯರು ದಡದಡಿಸುವ ಎದೆಯಿಂದ, ಭೀತಿಬೆರೆತ ಆತುರದೃಷ್ಟಿಗಳಿಂದ ಎಲ್ಲರನ್ನೂ ನಿಟ್ಟಿಸಿ ನಿಟ್ಟಿಸಿ ನೋಡುತ್ತಾ ಬಂದರು. ಆ ಸಾಲೆಲ್ಲ ಮುಗಿದ ಮೇಲೆ ಕೊಂಚ ಸಮಾಧಾನಸ್ವರದಲ್ಲಿ ಕೇಳಿದರು.

" ಆಯಿತೇ ?.. ಇಷ್ಟೇ ಜನರೇ ? "

" ಇನ್ನಿಬ್ಬರು ಅತ್ತ ಕಡೆಯ ಕೋಣೆಗಳಲ್ಲಿದ್ದಾರೆ. ಅವರಿಗೆ ಏಟು ಅತಿಶಯವಾಗಿ ತಗುಲಿದೆ. ಒಬ್ಬನಂತೂ ತೀರ ಅತ್ಯವಸ್ಥೆಯಲ್ಲಿದ್ದಾನೆ."

ರಾಯರ ಎದೆಗೆ ಮತ್ತೆ ವಜ್ರಾಘಾತವಾದಂತಾಯಿತು. ಕುಗ್ಗಿದ ಕಂಠದಿಂದ ನುಡಿದರು :

" ಅವರನ್ನಷ್ಟು ನೋಡಿ ಬಿಡುವ ! "

ಇಬ್ಬರೂ ಸೇರಿ ಆ ಕೋಣೆಗಳ ಕಡೆಗೆ ಬಂದರು. ಒಂದು ಕೋಣೆಯೊಳಗಿಂದ ಹೊರಕ್ಕೆ ಬಿದ್ದ ವಾರ್ಡ್ ಡಾಕ್ಟರಿನ ಮುಖವು ಕಳವಳದಿಂದ ಕೂಡಿದ್ದಿತು. ಆತನು ರಾಯರಿಗೂ ಮುಖ್ಯಡಾಕ್ಟರಿಗೂ ವಿನಯದಿಂದ ನಮಸ್ಕಾರ ಮಾಡಿದ. ನಮಸ್ಕಾರ ಸ್ವೀಕರಿಸುತ್ತಿರುವಾಗಲೆ ಮುಖ್ಯ ಡಾಕ್ಟರು ಕೇಳಿದರು : " ಏನ್ರೀ, ಇಪ್ಪತ್ತೆಂಟನೆಯ ನಂಬರಿನ ಪೇಶಂಟ್ ಹೇಗಿದೆ ? "

" ಒಳ್ಳೆಯ ಸ್ಥಿತಿಯಲ್ಲಿಲ್ಲ; ಎದೆಯ ಮೇಲಿನ ಏಟು ತುಂಬ ಬಲವಾದುದು. ಕಣ್ಣುಗುಡ್ಡೆಗಳೆರಡೂ ಒಡೆದುಹೋಗಿವೆ; ಮೈಮೇಲೆ ಎಚ್ಚರವೇ ಇಲ್ಲ. ನಾಡಿಗಳು ಹೆಚ್ಚು-ಕಡಿಮೆಯಾಗುತ್ತ ನಡೆದಿವೆ. "

ನಾಗೇಂದ್ರರಾಯರ ಹೃದಯ ಇನ್ನೂ ನಡುಗಿತು. ಅಸ್ಥಿರಚಿತ್ತರಾಗಿ ಕೋಣೆಯೊಳಕ್ಕೆ ಪ್ರವೇಶಿಸಿದರು. ಬಾಗಿಲಿಗೆದುರಾಗಿಯೆ ಒಂದು ಮಂಚವಿದೆ. ಅದರ ಮೇಲೆ ಮಲಗಿದ್ದ ರೋಗಿಯ ಬಳಿಯಲ್ಲಿಯೆ ಕುಳಿತುಕೊಂಡು ನರಸಮ್ಮನೊಬ್ಬಳು ರೋಗಿಯ ಎದೆಗೆ ಶಾಕಕೊಡುತ್ತಲಿದ್ದಾಳೆ.

ರಾಯರು ಒಳಕ್ಕೆ ಬಂದು ಮಲಗಿದವನನ್ನು ನೋಡಿದರು, ಇನ್ನಿಷ್ಟು ಮುಂದೆ ಬಂದು ಪರೀಕ್ಷಿಸಿ ನೋಡಿದರು, ಕಂಗೆಟ್ಟವರಾದರು. ತಾನು

ಕನಸಿನಲ್ಲಿದ್ದೇನೋ, ಎಚ್ಚರದಲ್ಲಿದ್ದೇನೋ — ಎಂಬುದನ್ನು ತಿಳಿದುಕೊಳ್ಳಲಾರದವರಾದರು. ಅವರಿಗೆ ತಿಳಿಯದ ಹಾಗೆಯೆ ಬಾಯಿ ತೊದಲು-ತೊದಲಾಗಿ ನುಡಿಯಿತು: "ಗಿ-ರೀ-ಶ!..ನ-ನ್ನ..ಗಿ-ರೀ-ಶ!!"

ರಾಯರ ಈ ಅವಸ್ಥೆಯನ್ನು ಕಂಡು ಅಲ್ಲಿ ಇದ್ದವರಿಗೆಲ್ಲ ಆಶ್ಚರ್ಯವಾಯಿತು. ಮುಖ್ಯ ಡಾಕ್ಟರೂ ವಾರ್ಡ್ ಡಾಕ್ಟರೂ ಅವರನ್ನು ಸಾವರಿಸಿ ಹಿಡಿಯದಿದ್ದರೆ ರಾಯರು ಕೆಳಕ್ಕೆ ಬಿದ್ದುಬಿಡುತ್ತಿದ್ದರು. ಎರಡು ಮೂರು ನಿಮಿಷಗಳಾದ ಮೇಲೆ ಮೆಲ್ಲಮೆಲ್ಲನೆ ನಸು ಎಚ್ಚರಬಂದಂತಾಗಿ, ಆ ರೋಗಿಯು ಮಲಗಿದ್ದ ಮಂಚದ ತುದಿಗೆ ಕುಳಿತು, ಅವನ ಕೈಯನ್ನು ತಮ್ಮ ಕೈಯಲ್ಲಿ ಹಿಡಿದು "ಗಿರೀಶಾ! ಗಿರೀಶಾ!" ಎಂದು ರಾಯರು ಕೂಗಲು ತೊಡಗಿದರು. ನಾಗೇಂದ್ರರಾಯರೀಗ ತಮ್ಮ ಕಲೆಕ್ಟರ್ ಅಧಿಕಾರದ ಘಟ್ಟದಿಂದ ಕೆಳಕ್ಕಿಳಿದಿದ್ದರು. ಅವರೀಗ ಮನುಷ್ಯವರ್ಗದಲ್ಲಿ ಸೇರಿ, ಸುಲೋಚನೆಯ ಸಲುಗೆಯ ತಂದೆಯಾಗಿದ್ದರು; ಗಿರೀಶನ ಪ್ರೀತಿಯ ಮಾವನಾಗಿದ್ದರು.

ಮಾವನ ಕೂಗಿಗೆ 'ಓ' ಕೊಡುವಂತಹ ಸ್ಥಿತಿಯಲ್ಲಿ ಗಿರೀಶನು ಇರಲಿಲ್ಲ. ರಾಯರು ಹುಚ್ಚುಹಿಡಿದವರಂತೆ ಥಟ್ಟನೆ ಅಲ್ಲಿಂದೆದ್ದರು, ಮುಖ್ಯ ಡಾಕ್ಟರಿನ ಅಡಿಯ ಬಳಿಯಲ್ಲಿ ಧೊಪ್ಪೆಂದು ಕುಕ್ಕರಿಸಿ ಕಣ್ಣೀರು ಸುರಿಸುತ್ತ ಬಿನ್ನವಿಸಿದರು :

"ಡಾಕ್ಟರ್! ಹೇಗಾದರೂ ಮಾಡಿರಿ! ನನ್ನ ಗಿರೀಶನನ್ನು ಬದುಕಿಸಿ ಕೊಡಿರಿ!"

ಡಾಕ್ಟರು ಕಳವಳದಿಂದ ಕೇಳಿದರು.

"ಇವರು ನಿಮಗೇನಾಗಬೇಕು ರಾಯರೇ!"

"ನನ್ನ ಅಳಿಯ ಡಾಕ್ಟರ್! ನನ್ನ ಮುದ್ದು..ಸುಲೋಚನೆಯ ಗಂಡ!"

ರಾಯರು ಮತ್ತೆ ಮೊದಲಿನಂತೆಯೆ ಒಮ್ಮೆಲೆ ಎದ್ದರು; ಮಂಚದ ಮೇಲೆ ಕುಳಿತರು. ಕಲ್ಲೆದೆಯವರ ಕರುಳೂ ಕರಗುವಂತೆ ಹಂಬಲಿಸ ತೊಡಗಿದರು:

"ಗಿರೀಶಾ..ಸುಲೋಚನೆಯು ಕಾಗದ ಬಂದಿದೆಯಪ್ಪಾ!..ನಾನು ನಿನ್ನ ಯೋಗಕ್ಷೇಮ ನೋಡಿಕೊಳ್ಳಬೇಕಂತೆ..ಅದಕ್ಕಂತೆಯೇ ಬಂದಿದ್ದೇನೆ. ನನ್ನೊಡನೆ ಮಾತನಾಡಪ್ಪಾ........!"

ರಾಯರ ಸ್ಥಿತಿಯನ್ನು ನೋಡಿ ಅಲ್ಲಿದ್ದವರ ಕರುಳುಗಳೆಲ್ಲವೂ ಉಕ್ಕೇರಿ ಬಂದುವು. ಮುಖ್ಯ ಡಾಕ್ಟರು ಅವರನ್ನು ಸಮಾಧಾನಗೊಳಿಸಿ ಅಲ್ಲಿಯೇ ಒಳಿಯಲ್ಲಿ ಒಂದು ಕುರ್ಚಿಯ ಮೇಲೆ ಕುಳ್ಳಿರಿಸಿದರು; ರೋಗಿಯನ್ನು ತಾವೇ ಸೂಕ್ಷ್ಮ ರೀತಿಯಿಂದ ಪರೀಕ್ಷಿಸತೊಡಗಿದರು. ಕೋಣೆಯಲ್ಲಿ ಎಲ್ಲೆಲ್ಲಿಯೂ ನಿಶ್ಶಬ್ದ!

ಕರುಣಾಸ್ವರದಲ್ಲಿ ಗಿರೀಶನು ಕನವರಿಸಿದನು:

"ಸುಲೋಚನಾ, ನನ್ನ ಕಣ್ಣುಗಳು ಹೋದುವು....! ಇನ್ನು ನಿನ್ನ ಮುಖವನ್ನೂ..ಮಗುವಿನ ಮುಖ.. ನಾನು ನೋಡಲಾರೆ!!"

ರಾಯರು ಮುಂದುವರಿದು ಬಂದು "ಗಿರೀಶಾ! ಗಿರೀಶಾ!" ಎಂದು ಕೂಗಲು ತೊಡಗಿದರು. ಡಾಕ್ಟರು ಮತ್ತೆ ಸಮಾಧಾನಗೊಳಿಸಿ, ಅವರನ್ನು ಹಿಂದಕ್ಕೆ ಸರಿಸಿ ಕುಳ್ಳಿರಿಸಿದರು. ಡಾಕ್ಟರ ಹೇಳಿಕೆಯಂತೆ ನರ್ಸು ಮತ್ತೆ ಮೈಗೆ ಶಾಕಕೊಡಲು ತೊಡಗಿದಳು. ಡಾಕ್ಟರಿಬ್ಬರೂ ಯಾವುದೋ ಒಂದು ಔಷಧಿಯ ಇಂಜಕ್ಶನ್ ಕೊಡಬೇಕೆಂಬ ಉದ್ಯಮದಲ್ಲಿ ತೊಡಗಿದರು. ಮತ್ತೆ ಕೋಣೆಯಲ್ಲೆಲ್ಲ ಗಂಭೀರತೆಯು ತುಂಬಿ ಬಿಟ್ಟಿತು.

ಗಿರಿಧರನು ಇನ್ನೊಮ್ಮೆ ಕನವರಿಸಿದನು:

"ನಾನು ಬರುವಾಗ..ಮಗುವನ್ನೆತ್ತಿ ಮುತ್ತಿಟ್ಟು ಬರಲೇ ಇಲ್ಲ!.. ಸುಲೋಚನಾ!..ನೀನು ನನಗೆ ಹೋಗಬೇಡವೆಂದು ಈಸಲ ಏತಕ್ಕೆ ಹೇಳಲಿಲ್ಲ..?"

ರಾಯರು ಮತ್ತೆ ಎದ್ದು ಮುಂದೆ ಬಂದರು. ಡಾಕ್ಟರು ಅವರನ್ನು ತಡೆದು ಕುಳ್ಳಿರಿಸಿದರು. ಒಂದು ಜಿಲ್ಲೆಯ ಆಡಳಿತವನ್ನು ತೂಗಿಸುವ ಸಾಮರ್ಥ್ಯವುಳ್ಳ ನಾಗೇಂದ್ರರಾಯರ ಮನಸ್ಥಿತಿಯು ಇಂದು ಒಬ್ಬ ಹಸುಮಗುವಿನಂತೆ ಆಗಿಬಿಟ್ಟಿದ್ದಿತು. ಮುಖ್ಯ ಡಾಕ್ಟರು ಜೊತೆಯ ಡಾಕ್ಟರರಿಗೆ ಹೇಳಿದರು:

"ಹೃದಯದ ಮೇಲೆ ತುಂಬ ಪರಿಣಾಮವಾಗಿದೆ."

ಜೊತೆಯ ಡಾಕ್ಟರು ಮಾತನೇನೂ ಆಡದೆ ಮುಖ ಕಿವುಚಿ ನಿಟ್ಟುಸಿರೊಂದನ್ನು ಹಾಕಿದರು.

ಗಿರೀಶನು ಒಮ್ಮೆಲೆ ಕಿರಿಚಿಕೊಂಡ:

"ನನ್ನ ಸುಲೋಚನೆಯಿಂದ.. ನನ್ನನ್ನು ಅಗಲಿಸಬೇಡಿರೊ...."

ಮುಖ್ಯ ಡಾಕ್ಟರು ಓಡಿ ಬಂದು ಮತ್ತೆ ನಾಡಿಯನ್ನು ನಿದಾನವಾಗಿ ನೋಡಿದರು. ನಿರಾಶಾಭಾವದ ಇಳಿಮೊಗದಿಂದ ಕಣ್ಣೀರನ್ನು ಸುರಿಸುತ್ತ ರಾಯರನ್ನು ಕುರಿತು ಹೇಳಿದರು:

"ರಾಯರೇ, ನಿಮ್ಮ ಅಳಿಯನನ್ನು ಬದುಕಿಸಿ ಕೊಡುವ ಭಾಗ್ಯ ನಮ್ಮ ಹಣೆಯಲ್ಲಿ ಬರೆದಿಲ್ಲ!"

ರಾಯರು ಗಾಬರಿಗೊಂಡವರಾಗಿ ಎದ್ದು ಮುಂದೆ ಬಂದರು. ಮಂಚದ ಮೇಲೆ ಕುಳಿತು ಗಿರೀಶನನ್ನವರು ನೋಡುತ್ತಿರುವಾಗಲೆ ಆತನ ಬಾಯಿ ಸೊಟ್ಟಗಾಯಿತು. ಕಣ್ಣುಗುಡ್ಡೆಗಳಂತೂ ಮರಣದ ಕುರುಹನ್ನು ಸೂಚಿಸಲಿಕ್ಕೆ ಹೆದರಿ, ಲಾರಿಯ ಏಟಿನ ಘಾಯದಲ್ಲಿ ಲೀನವಾಗಿ ಹೋಗಿದ್ದುವು. ರಾಯರು ಗಿರೀಶನ ತಲೆಯನ್ನೆತ್ತಿ ತಮ್ಮ ತೊಡೆಯ ಮೇಲೆ ಇಟ್ಟುಕೊಂಡು ಕೂಸಿನಂತೆ ಅಳುತ್ತ ಹೇಳಿದರು.

"ಗಿರೀಶಾ! ಸುಲೋಚನೆಗೆ ಏನೆಂದು ತಿಳಿಸಲಪ್ಪಾ! ನಿನ್ನ ಯೋಗಕ್ಷೇಮವನ್ನು ನಾನೇ ಚೆನ್ನಾಗಿ ತೆಗೆದುಕೊಂಡೆನೆಂದು ತಿಳಿಸಲೇ?"

ಎಂದೂ ಕಾಣದಿದ್ದ ದುಃಖವು ರಾಯರನ್ನು ಆವರಿಸಿ, ಅವರನ್ನು ಮೈಮರೆಯಿಸಿ, ಗಿರೀಶನ ಎದೆಯ ಮೇಲೆ ಅವರ ಮುಖವನ್ನು ಒರಗಿಸಿ ಬಿಟ್ಟಿತು.

*   *   *

ನಾಗೇಂದ್ರರಾಯರಿಗೆ ಅವರು ಇಚ್ಛಿಸಿದ ಅಧಿಕಾರವನ್ನು ಒದಗಿಸಿ ಕೊಟ್ಟ ದೇವತೆಗಳು ಅಂತಿಂತಹ ಕಿರುಕುಳ ಮುಡಿಪುಗಳಿಂದ ಏತಕ್ಕೆ ಶಾಂತರಾದಾರು? ಅವರಿಗೆ ಬೇಕಾಯಿತು—ರಾಯರ ಮಮತೆಯ ಮೂರ್ತಿ-ಮತ್ತಾದ ಮುಡಿಪು!

# ಮಾಲ್ಕೀ ಹಕ್ಕು

## ಪರಿಚಯ

ಲಿಂಗಣ್ಣನ ಹೆಂಡತಿ ನಾತಮ್ಮನು ಅಂದು ಹಾಗೆ ಮಾಡಿದುದು ತಪ್ಪೋ..?—ಎಂಬ ಯೋಚನೆಯು ಈಗ ಮೇಲಿಂದಮೇಲೆ ಬರುತ್ತದೆ. ಅವಳದೇನು ತಪ್ಪು..?—ಎಂಬ ಬಗೆಹರಿಯದ ಪ್ರಶ್ನೆಯೂ ಆಗಾಗ ಮನದ ಕಣ್ಣೆದುರು ಎದ್ದುನಿಲ್ಲುತ್ತದೆ.

ನಮ್ಮ ಊರ ಮುಂದಣ ತೋಟವನ್ನು, ಲಿಂಗಣ್ಣನೇ ಪಾಲಿನಿಂದ ಮಾಡಿದ್ದನಾಗ. ಈ ತೋಟವು ನಮ್ಮ ಮನೆತನಕ್ಕೆ ಉಂಬಳಿಯಾಗಿ ದೊರೆತ ಸನದು ನಮ್ಮ ಮನೆಯಲ್ಲಿ ಇದುವರೆಗೂ ಇದೆ. ತಾಳಿಯ ಕೋಟಿಯ ಕಾಳಗದ ತರುವಾಯ ನಮ್ಮ ನಾಡು ವಿಧರ್ಮಿಯರ ಅಧೀನಕ್ಕೆ ಹೋಯಿತಲ್ಲವೇ? ಆಗ, ಮರಳಿ ಹಿಂದೂರಾಜ್ಯವನ್ನು ಸಂಸ್ಥಾಪಿಸಿ ಕಳೆದುಹೋದ ಸ್ವಾತಂತ್ರ್ಯವನ್ನು ಸಂಪಾದಿಸಬೇಕೆಂದು ಅಲ್ಲಲ್ಲಿ ಪ್ರಯತ್ನಗಳು ನಡೆದುವಂತೆ. ಇಂತಹ ಪ್ರಯತ್ನಮಾಡುವವರಲ್ಲಿ, ನಮ್ಮ ಪೂರ್ವಜರ ದಾಯಾದಿಯೊಬ್ಬನು ಮುಂದಾಳಾಗಿದ್ದನಂತೆ. ವಿಜಾಪುರದ ಬಾದಶಹನು ಆತನನ್ನು ಹಿಡಿದಿಡಬೇಕೆಂದು ಎಷ್ಟೆಷ್ಟೋ ಉಪಾಯಗಳನ್ನು ಮಾಡಿದನಂತೆ. ಆದರೂ ಆ ಸ್ವಾತಂತ್ರ್ಯಭಕ್ತನು ಸಿಕ್ಕಲಿಲ್ಲವಂತೆ. ಕೊನೆಗೆ ನಮ್ಮ ಮನೆತನದ ಮೂಲಪುರುಷನು ಮೋಸದಿಂದ—ಅಲ್ಲಲ್ಲ—ಯುಕ್ತಿ-ಚಾತುರ್ಯಗಳಿಂದ ತಮ್ಮ ದಾಯಾದಿಯನ್ನು ಹಿಡಿದುಕೊಟ್ಟನಂತೆ. ಆ ಮಹತ್ಕಾರ್ಯಕ್ಕೆ ಪ್ರತಿಫಲವಾಗಿ, ಬಾದಶಹನು ಈ ತೋಟವನ್ನು ಸಿಕ್ಕಾಮೋರ್ತಬಿನೊಂದಿಗೆ ಸನದುಹಾಕಿ ಕೊಟ್ಟನಂತೆ. ಇದೆಲ್ಲವೂ ಆ ಸನದಿನಲ್ಲಿ ನೋಡಲಿಕ್ಕೆ ದೊರೆಯುತ್ತದೆ. ಇತಿಹಾಸಸಂಶೋಧಕರಾರಾದರೂ ಆ ಸನದನ್ನು ನೋಡಬೇಕೆಂದು

ಅಪೇಕ್ಷೆಪಟ್ಟರೆ, ಅತ್ಯಗತ್ಯವಾಗಿ ತೋರಿಸುತ್ತೇನೆ. ಅವರು ತಮ್ಮ ಸಂಶೋ-ಧನಪತ್ರಿಕೆಯಲ್ಲಿ, ನಮ್ಮ ಮನೆತನವು ಇತಿಹಾಸಪ್ರಸಿದ್ಧವಾದುದೆಂದು ಬರೆದು ಪ್ರಕಟಿಸಿದರೆ, ಅದೊಂದು ನನಗೆ ಹೆಮ್ಮೆಯ ವಿಷಯವೇ ಅಲ್ಲವೇ?

* * *

ಲಿಂಗಣ್ಣನು ಬಡವನೇ ಸರಿ! ಅದೇತಕ್ಕೆಂದರೆ, ಹೆಂಡತಿ-ಮಕ್ಕಳೊಂದಿಗೆ—ವರುಷವೆಲ್ಲವೂ—ಮೈಮುರಿದು ದುಡಿದಾಗಲೆ ಆತನ ಕುಟುಂಬದ ಹೊಟ್ಟೆಗೆ ಹಿಟ್ಟು, ಮೈಗೆ ಬಟ್ಟೆ ದೊರೆಯುವುದು. ಲಿಂಗಣ್ಣನ ಆಸ್ತಿಯೆಂದರೆ ಇರುವ ಮುರುಕು ಮನೆಯೊಂದು; ಎರಡು ಎತ್ತುಗಳು; ಬೇಸಾಯಕ್ಕೆ ಬೇಕಾಗುವ ಕೆಲವು ಸಾಧನಗಳು; ಹಗ್ಗ ಕಣ್ಣಿಗಳು. ಇವು ಎಲ್ಲವುಗಳನ್ನೂ ಮೆಟ್ಟಿ ಮೀರುವ ಆಸ್ತಿಯೆಂದರೆ—ಆತನ ಮತ್ತು ಹೆಂಡತಿ-ಮಕ್ಕಳ—ಬೇಸರವಿಲ್ಲದೆ ದುಡಿಯುತ್ತಲಿರುವ ಕಷ್ಟಸಹಿಷ್ಣುತೆಯು.

ಬೆಳುವಲುನಾಡಿನ ಬೇಸಗೆಯ ತಾಪವನ್ನು ಅನುಭವಿಸಿಯೇ ಅರಿತುಕೊಳ್ಳಬೇಕು. ಮಧ್ಯಾಹ್ನದ ಬಿಸಿಲಲ್ಲಿ, ನೀರು ಅಕ್ಕಿ ಬೆರಸಿ ಇಟ್ಟರೆ ಐದಾರು ನಿಮಿಷಗಳಲ್ಲಿ ಅನ್ನವಾಗಿಬಿಡಬಹುದು—ಅಷ್ಟೊಂದು ಬಿಸಿಲಿನ ಕಾವು. ಬಿಸಿನೀರಿನ ಸ್ನಾನವನ್ನು ಮಾಡಲು ಬಯಸುವವರು ಈ ಕಾಲದಲ್ಲಿ ಉರುವಲಿನ ವೆಚ್ಚವನ್ನು ಉಳಿಸಿಕೊಳ್ಳಬಹುದು; ಆದರೆ ಆಗ ಬಿಸಿನೀರನ್ನು ಬಯಸುವ ಮಹಾತ್ಮರಾದರೂ ಯಾರು?

ಇಂತಹ ಉರಿಬೇಸಗೆಯ ಬಿರುಬಿಸಿಲಲ್ಲಿ ಲಿಂಗಣ್ಣನು ಬರಿಯ ಮೈಯಿಂದಲೇ ತೋಟದಲ್ಲಿ ಉಳುವ ಕೆಲಸ ಮಾಡುತ್ತಿರುವನು. ಉಂಡ ಅನ್ನವೂ ಕುಡಿದ ನೀರೂ ಬೆವರಿನ ರೂಪದಲ್ಲಿ ಮೈಯಿಂದ ಹೊರಬೀಳುತ್ತಿರುವುದಾಗ. ನಡುಬಾನಿಗೆ ಬಂದ ನೇಸರು ತನ್ನ ಕೆಂಡದ ಕಿರಣಗಳಿಂದ, ಲಿಂಗಣ್ಣನ ಮೈಯನ್ನು ಚುಚ್ಚಿ ಚುಚ್ಚಿ, ಕೊನೆಗೆ ತಾನೇ ಸೋತು ಕೆಳಗಿಳಿಯತೊಡಗಿದನು... ಸೂರ್ಯನು ಇಷ್ಟೊಂದು ತನಗೆ ವಿರೋಧಿಯಾಗಿ ನಡೆದುಕೊಂಡರೂ, ಲಿಂಗಣ್ಣನು ಪ್ರತಿದಿನವೂ ಬೆಳಗಿನ ಸೂರ್ಯನಿಗೆ ಭಕ್ತಿಯಿಂದ ಕೈಮುಗಿಯುವುದನ್ನು ಎಂದೂ ಬಿಡುತ್ತಿರಲಿಲ್ಲ. ನನಗೆ ಒಂದೊಂದು ಸಲ ಹೀಗೂ ಎನಿಸುತ್ತಿದ್ದಿತು—ಸೂರ್ಯನು

ಲಿಂಗಣ್ಣನ ಕರ್ಮಯೋಗಕ್ಕೆ ಮೆಚ್ಚಿ, ಆತನ ಕಡೆಗೆ ತನ್ನ ಅಮೃತಕಿರಣಗಳನ್ನಷ್ಟೇ ಕಳುಹಿಸುತ್ತಿರಬಹುದೇನೋ—ಎಂದು.

* * *

ಒಂದು ಸಲ ಏನಾಯಿತೆಂದಿರಿ! ಪುನರ್ವಸು ನಕ್ಷತ್ರದ ಮಳೆಯು ವಿಪರೀತವಾಗಿ ಹತ್ತಿಬಿಟ್ಟಿದ್ದಿತು. ನಮ್ಮ ಮನೆಯಲ್ಲಿ ಗೌರಿಯ ಪೂಜೆಗಾಗಿ ಹೂವು-ಪತ್ರೆ ಬೇಕಾದುವು. ಮಳೆಯಲ್ಲಿ ತೋಟಕ್ಕೆ ಯಾರು ಹೋಗಬೇಕು? ನಾನಾಗ ಚಿಕ್ಕವನು; ತಾಯಿ ನನಗೇ ಹೇಳಿದರು. ಮಳೆಯಲ್ಲಿ ನಾನು ಹೋಗಲಾರೆನೆಂದು ಹಟಮಾಡಿದೆ. ತಾಯಿ ಏನೇನನೋ ತಿಂಡಿಯ ಆಶೆಗಳನ್ನು ಹಚ್ಚಿದುದರಿಂದ-ಮನಸ್ಸಿಲ್ಲದಿದ್ದರೂ-ಕೊಡೆ ಹಿಡಿದುಕೊಂಡು ತೋಟದ ಕಡೆಗೆ ಹೋದೆ.

ಲಿಂಗಣ್ಣನ ಹಿರಿಯ ಮಗನು ನನ್ನ ಸರಿಸರಯದವನು. ನಾನು ತೋಟಕ್ಕೆ ಹೋದಾಗ ಆತನು ಬಾಳೆಯ ತೋಟದಲ್ಲಿ ಕುಳಿತು ಕಳೆಯನ್ನು ತೆಗೆಯುತ್ತಿದ್ದನು. ಮೇಲೆ ಏಕಪ್ರಕಾರವಾಗಿ ಸುರಿಯುತ್ತಿರುವ ಜಡಿಮಳೆ; ಕೆಳಕ್ಕೆ ಕಿಚಿಕಿಚಿಯಾದ ಕೆಸರು; ತೊಟ್ಟಿದ್ದ ಅರೆದೋಳಿನ ಅಂಗಿಯು ತೊಯ್ದು ತಪ್ಪಡಿಯಾಗಿದ್ದಿತು. ಚಳಿಯಿಂದ ನಡುಕ ಹಿಡಿದು ಹಲ್ಲುಗಳು ಬಾರಿಸುತ್ತಿದ್ದುವು. ಆದರೂ ಅವನು ತನ್ನ ಕಳೆಯನ್ನು ತೆಗೆಯುವ ಕೆಲಸ ನಡೆಯಿಸಿದ್ದ. ನಾನು ಕೇಳಿದೆ :

“ ಏನೋ ಇದು ? ಮಳೆಯಲ್ಲಿಯೇ ಕೆಲಸಮಾಡುತ್ತಿದ್ದೀಯಲ್ಲಾ? ”

ಲಿಂಗಣ್ಣನ ಮಗನು ವಿನಯದಿಂದ ಹೇಳಿದ:

“ ಮಾಡದಿದ್ದರ ಹ್ಯಾಂಗ ನಡದೀತು ರಾಯರs! ಮಳೀ ಒಂದs ಸವನs ಹೊಡೀಲಾಕ ಹತ್ತೈತಿ. ಈಗ ಹಾಂಗs ಬಿಟ್ಟರ, ಯಾಡ್ಡ ದಿನದಾಗ ತ್ವಾಟದ ತುಂಬ ಕಸಾ ಬೆಳೀತೈತಿ. ಅಂತs ಈಗ ಬೆಳಗ್ಗೆದ್ದವನs ಬಂದು ಬಿಟ್ಟೇನಿ. ”

ನಾನು ಯಾವ ಯೋಚನೆಯೂ ಇಲ್ಲದೆ ಹೂಗಳನ್ನು ತೆಗೆಯಲು ತೊಡಗಿದೆ. ಲಿಂಗಣ್ಣನ ಮಗನು ಮಾತನಾಡಿದ:

“ ರಾಯರs! ಅವ್ವನವರಿಗೆ ಹೇಳಿ, ಉರೀಗೆ ಔಸಧಾ ಕೊಡನರೀ!”

“ ಉರಿಯ ಔಷಧ ಯಾರಿಗೋ ? ”

“ ನನಗರ್ರೀ ! ನಾಕೈದು ದಿನಾ ಆತು; ಉರೀ ಚಳೀ ಬರಲಾಕ ಹತ್ತೈತ್ರಿ. ನಿನ್ನೆ ರಾತ್ರೀ ಉರೀ ಬಂದು ಬಿದ್ದರ ಮೈಮ್ಯಾಗ ಎಚ್ಚರ ಕೂಡಾ ಇದ್ದಿದ್ದಿಲ್ಲ ನೋಡ್ರಿ! ”

ನನಗೆ ಆಶ್ಚರ್ಯವಾಯಿತು. ಒಮ್ಮೆಲೆ ಕೇಳಿದೆನು :

“ ನಿನ್ನೆ ರಾತ್ರಿಯಲ್ಲಿ ಜ್ವರ ಬಂದಿದ್ದವನು ಈಗ ಮಳೆಯಲ್ಲಿ ಕೆಲಸಕ್ಕೆ ಬಂದಿದ್ದೀಯಾ ? ”

“ ಏನ್ ಮಾಡೂದರಿ ರಾಯರ ! ನಿವಾರ್ಣ ಇಲ್ಲದ ಮ್ಯಾಗ ಮಾಡಲಾಕ ಬೇಕಲ್ರಿ. ನಿಮ್ಹಾಂಗ ನಾವೇನು ಸಿರಿಮಂತರ ಮಕ್ಕಳ ? ಉರೀ ಬರಲಿ, ಚಳೀ ಬರಲಿ; ಮೈಮುರಿ ದುಡದಾಗ ಒಂದ ರೊಟ್ಟಿ ತಿನ್ನಾಕ ಸಿಗತೈತ್ರಿ! ”

‘ ಪಾಪ ! ತಾಯಿಯವರಿಂದ ಔಷಧ ಕೊಡಿಸಬೇಕು ’ ಎಂಬ ಮರುಕವುಂಟಾಯಿತು. ಆ ಮರುಕದ ಕ್ಷಣದಲ್ಲಿ ಔಷಧ ಕೊಡಿಸುವೆನೆಂದು ಲಿಂಗಣ್ಣನ ಮಗನಿಗೆ ಹೇಳಿಯೂ ಬಿಟ್ಟೆ. ಮನೆಗೆ ಬಂದಮೇಲೆ ಹಬ್ಬದ ಗಲಾಟೆಯಲ್ಲಿ ಔಷಧಿಯ ವಿಚಾರವು ಮರವೆಯಾಗಿ ಬಿಟ್ಟಿತು. ಲಿಂಗಣ್ಣನ ಮಗನೂ ಮತ್ತೊಮ್ಮೆ ನೆನಪುಮಾಡಲಿಲ್ಲ.

* * *

ಸಂಜೆಯ ಕಡೆಗೆ ನಾನು ಹೋದಾಗಲೆಲ್ಲ ಲಿಂಗಣ್ಣನು ಮೋಟೆ ಹೂಡಿರುತ್ತಿದ್ದನು. ಸಾತಮ್ಮನು ತನ್ನ ಎಳಗೂಸನ್ನು ಗುಡಿಸಿಲಲ್ಲಿ ಮಲಗಿಸಿ, ಬೆಳೆಗಳಿಗೆ ನೀರು ಹಾಯಿಸುತ್ತಿರುವಳು. ಕೂಸು ನಿದ್ದೆಯಿಂದ ಎಚ್ಚತ್ತು—ಗುಡಿಸಿಲ ಕಂಡಿಗಳೊಳಗಿನ—ಸಂಜೆಯ ಸೂರ್ಯನ ಚೆಂಬೆಳಕನ್ನು ನೋಡುತ್ತ—ಆಟವಾಡುತ್ತ ಬಿದ್ದುಕೊಂಡಿರುವುದು. ನಾನು ಏತದ ಮೇಲೆ ನೀರಹರಿಯಲ್ಲಿ ಕಾಲುಗಳನ್ನು ಬಿಟ್ಟುಕೊಂಡು ಕುಳಿತು ಆಟವಾಡುತ್ತಲಿರುವೆನು. ಸಂಜೆಯ ಶಾಂತವಾದ ವೇಳೆ; ನೀರಿನ ಮೋಟೆಯು ಮೇಲಕ್ಕೇರಿ ಬಂದು ಹರಿಯಲ್ಲಿ ಸುರಿಯುತ್ತಿರುವಾಗ, ಮೇಲೆ ಹಾರುತ್ತಿರುವ ತುಷಾರಮಂಡಲದ ಮೇಲೆ, ಹೊಂಬಿಸಿಲು ಅಂದವಾದ ಚಿತ್ರ

ಗಳನ್ನು ಬರೆಯುತ್ತಿರುವುದು. ತೋಟದ ಬೇಲಿಯಿಂದ ಹೊರಡುತ್ತಿರುವ ಶ್ಯಾಮಲಚ್ಛಾಯೆಯು ಮೇಲುಮೇಲುಮೊಗವಾಗಿ ನಡೆದಿರುವುದು. ಆಗ ಲಿಂಗಣ್ಣನು, ತನ್ನ ಬಾಳಿನ ತಿರುಳು ತುಂಬಿದ ತುಂಡುಹಾಡುಗಳನ್ನು ರಾಗ ಎಳೆದೆಳೆದು ಹೇಳುತ್ತಿರುವನು. ನಾನಾಗ ಚಿಕ್ಕವನಾಗಿದ್ದರೂ ಇಂತಹ ಸಂಜೆಯ ಸುಖಸಮಯಗಳನ್ನು ಆಗಾಗ ಬಯಸುತ್ತಿದ್ದೆನು. ಎಂತಲೆ ದಿನದಿನವೂ ತಪ್ಪದೆ ತೋಟಕ್ಕೆ ಹೋಗುತ್ತಿದ್ದೆನು.

* * *

ಒಂದುಸಲ ನಮ್ಮ ಮನೆಯವರೆಲ್ಲರೂ ಸೇರಿ ತೋಟವನ್ನು ನೋಡ ಲಿಕ್ಕೆಂದು ಹೋಗಿದ್ದೆವು. ಲಿಂಗಣ್ಣನ ಮನೆಯವರಿಗೆಲ್ಲ ಅದೆಷ್ಟು ಸಂತೋಷ ! ನಾತವ್ವನು ತನ್ನ ಎಳಗೂಸನ್ನು ಕೆಳಕ್ಕಿಟ್ಟು, ನಮ್ಮ ಚಿಕ್ಕತಂಗಿಯನ್ನು ಕಂಕುಳಲ್ಲೆತ್ತಿಕೊಂಡಳು. ಅದೆಷ್ಟೋ ಪ್ರೀತಿಯನ್ನು ತೋರಿಸುತ್ತ ತೋಟದಲ್ಲೆಲ್ಲ ತಿರುಗಾಡಿದಳು. ಬಳಿಕ ನಮ್ಮೆಲ್ಲರದೂ ತಿಂಡಿ-ತಿನಿಸಿನ ಸಂಭ್ರಮವು ಆಯಿತು. ಮನೆಗೆ ಮರಳಿ ಬಂದಾಗ ಆರು ಗಂಟೆಯಾಗಿದ್ದಿತು. ಮನೆಗೆ ಬಂದ ನಾಲ್ಕಾರು ನಿಮಿಷಗಳಲ್ಲಿಯೇ ಚಿಕ್ಕ ತಂಗಿಯ ಒಂದು ಕೈಯಲ್ಲಿಯ ಚಿನ್ನದ ಬಳೆಯು ಇಲ್ಲದಂತಾದುದು ಗೊತ್ತಾಯಿತು. ನಾತವ್ವ ತಂಗಿಯನ್ನೆತ್ತಿಕೊಂಡು ಮುತ್ತಾಡಿದುದು ಎಲ್ಲರಿಗೂ ಗೊತ್ತು. ಮನೆಯವರೆಲ್ಲರೂ ಅವಳ ಮೇಲೆಯೇ ಸಂಶಯವನ್ನು ವ್ಯಕ್ತಪಡಿಸಿದರು. ತಂದೆಯವರು ಮತ್ತೊಮ್ಮೆ ತೋಟಕ್ಕೆ ಹೋಗಿ ನೋಡಿಕೊಂಡು ಬರಬೇಕೆಂಬ ವಿಚಾರದಲ್ಲಿದ್ದರು. ಅಷ್ಟರಲ್ಲಿಯೆ ನಾತ ವ್ವನು ಆತುರದ ನಡಿಗೆಯಲ್ಲಿ ನಡೆಯುತ್ತ ಅಲ್ಲಿಗೆ ಬಂದಳು. ಬಂದವಳೇ ಕೈಯಲ್ಲಿದ್ದ ಚಿನ್ನದ ಬಳೆಯನ್ನು ತಾಯಿಯ ಎದುರಿಗಿಟ್ಟು ಹೇಳಿದಳು :

" ಬಾವೀ ಕಟ್ಟೀ ಮ್ಯಾಗ ನೀವೆಲ್ಲಾರೂ ಕುಂತಿದ್ರೆಲ್ಲಾ ! ಅಲ್ಲೇ ಈ ಬಳೀ ಬಿದ್ದಿತ್ತು ಯವ್ವಾ ! ನಾ ಬುತ್ತೀ ಅರಿವೀ ತೊಳಿಕೊಂಡು ಬರಬೇಕೂ ಅಂತ ಹೋಗೂದಕ್ಕ ಇದು ನನ್ನ ಕಣ್ಣಿಗೆ ಬಿತ್ತು. ಲಗೂನ ಹೋಗಿ ಅವರದವರಿಗೆ ಕೊಟ್ಟು ಬಾ; ಮನ್ಯಾಗ ಹುಡಿಕ್ಯಾಡಲಾಕ ಹತ್ತಿದ್ದಾರಾದೀತು – ಅಂತ ಅವ್ವಾ ಹೇಳಿದ; ಅದಕ್ಕs ನಾ ಓಡತೋಡತs ಬಾದೆ. "

ನಮ್ಮ ಮನೆಯವರೆಲ್ಲರೂ ಒಂದೊಂದು ಒಳ್ಳೆಯ ಮಾತನಾಡಿ, ಸಾತಮ್ಮನ ಮನಸವನ್ನು ತಣಿಸಿದರು. ಅವಳು ತಾನಾಗಿಯೇ ಚಿಕ್ಕತಂಗಿಯ ಕೈಗೆ ಆ ಬಳೆಯನ್ನಿಡಿಸಿ, ಪ್ರೀತಿಯಿಂದ ಎತ್ತಿಕೊಂಡು ಮುತ್ತಿಟ್ಟು ಕೆಳಕ್ಕಿಳಿಸಿದಳು; ಆಗ ಸಾತಮ್ಮನಿಗೆ ನೂರು ಯಜ್ಞಮಾಡಿದಂತಹ ಸಮಾಧಾನವುಂಟಾಗಿರಬಹುದು.

* * *

ತೋಟದಲ್ಲಿ ರಾಶಿರಾಶಿಯಾಗಿ ಕಾಯಿಪಲ್ಲೆ ಬೆಳೆಯುತ್ತಿದ್ದಿತು ! ನಮ್ಮ ಮನೆಗೆ ಅದರ ಉಪಯೋಗ ಬೇಕಾದಷ್ಟು ಆಗುತ್ತಿದ್ದಿತು. ಲಿಂಗಣ್ಣನ ಮನೆಯವರ ಊಟವನ್ನು ನಾನು ಎಷ್ಟೋಸಲ ನೋಡಿದ್ದೆನಲ್ಲಾ: ಜೋಳದ ರೊಟ್ಟಿ, ನುಚ್ಚು, ಕಾರ, ಈರುಳ್ಳಿ ಇವಿಷ್ಟೇ ! ಕಾಯಿಪಲ್ಲೆಗಳ ಮಾರಾಟದಿಂದ ನಡುನಡುವೆ ದುಡ್ಡೇನಾದರೂ ಬಂದರೆ, 'ಗೊಬ್ಬರಕ್ಕೆ ಬೇಕು' 'ಬಿತ್ತುವ ಬೀಜಕ್ಕೆ ಬೇಕು' 'ಎತ್ತಿನ ಹೊಟ್ಟೆಯ ಕಾಳಿಗೆ ಬೇಕು' 'ಮೊಟ್ಟೆಯ ಚರ್ಮಕ್ಕೆ ಬೇಕು' ಎಂದು ಗಂಟು ಹಾಕಿಹಾಕಿ ಇಡುವುದರಲ್ಲಿಯೇ ಲಿಂಗಣ್ಣನಿಗೆ, ಸಾತಮ್ಮನಿಗೆ ಸಮಾಧಾನ. ಬಾದಶಹನಿಗೆ ಸಹಾಯಮಾಡಿ, ನಮ್ಮ ಪೂರ್ವಜರು ಪಡೆದ ಭೂಮಿಗೆ ನಾವಿಂದು ಒಡೆಯರಾಗಿ, ಕೈಕೆಸರು ಮಾಡಿಕೊಳ್ಳದೆ ಕುಳಿತಲ್ಲಿಯೇ ಮೊಸರನ್ನವನ್ನು ಉಣ್ಣುತ್ತಿದ್ದೆವು; ಅಲ್ಲದೆ ಲಿಂಗಣ್ಣನು ನಮ್ಮ ಸೇವಕನೆಂಬ ಕೀಳ್ನೋಟಕ್ಕೆ— ನಮ್ಮೆಲ್ಲರ ಹೃದಯದಲ್ಲಿಯೂ— ಇಂಬುಗೊಟ್ಟಿದ್ದೆವು.

## ಪರಿಣಾಮ

ಬಾಳೆಯ ತೋಟವು ಹಳೆಯದಾದುದರಿಂದ, ಹೊಸನೆಲದಲ್ಲಿ ಮರಿಗಳನ್ನು ನೆಡಬೇಕೆಂಬ ವಿಚಾರವು ನಡೆಯಿತು. ಲಿಂಗಣ್ಣನೊಡನೆ ಮುಂದಿನ ಹತ್ತು ವರ್ಷಗಳ ಗೇಣಿಯ ಬಗೆಗೆ ಮಾತುಕತೆಯೂ ಆಗಿಬಿಟ್ಟಿತು. ಹೊಸ ನೆಲಕ್ಕೆ ಹೆಚ್ಚಾಗಿ ಗೊಬ್ಬರ ಬೇಕಾಯಿತು. ಲಿಂಗಣ್ಣನು ಕೂಡಿಸಿಟ್ಟಿದ್ದ ಹಣವು ಅರ್ಧಕ್ಕೂ ಸಾಲಲಿಲ್ಲ. ಹೆಚ್ಚಿನ ಗೊಬ್ಬರಕ್ಕಾಗಿ ಅವನು ಸಾವುಕಾರರಲ್ಲಿ ಬಡ್ಡಿಯಿಂದ ಸಾಲತೆಗೆಯಬೇಕಾಯಿತು. ಲಿಂಗಣ್ಣನು ಕಷ್ಟಪಟ್ಟು ಉತ್ತು, ಕುಣಿಗಳನ್ನು ಅಗಿದು, ಮರಿಗಳನ್ನು ನೆಟ್ಟು, ಹೊಸ

ತೋಟವನ್ನು ಮಾಡಿದನು. ಅದರ ಭವಿಷ್ಯತ್‌ಕಾಲದ ಫಲಪ್ರಾಪ್ತಿಯನ್ನು ಎಣಿಕೆಹಾಕುತ್ತ ಮನಸಿನಲ್ಲಿ ಹಿರಿಹಿರಿ ಹಿಗ್ಗುತ್ತಿದ್ದನು.

ಶ್ರಾವಣದ ಕೊನೆಯ ಸೋಮವಾರಕ್ಕೆ ನಮ್ಮೂರ ಸಂಗನಬಸವಣ್ಣನ ಜಾತ್ರೆ. ಊರಲ್ಲಿ ಎಲ್ಲೆಲ್ಲಿಯೂ ಜಾತ್ರೆಯ ಸಿದ್ಧತೆಯ ಉತ್ಸಾಹವು ಪ್ರವಹಿಸತೊಡಗಿತು. ಜಾತ್ರೆಯ ದಿನ ಹೊಸ ಬಟ್ಟೆಗಳನ್ನು ಧರಿಸಿದ ಒಕ್ಕಲಿಗರ ಮಕ್ಕಳು, ದಿಲ್ಲೀಶ್ವರನ ರಾಜವಸ್ತ್ರಗಳು ದೊರೆತಾಗಿನಷ್ಟು ತೃಪ್ತಿಪಟ್ಟುಕೊಂಡು ಇರುತ್ತಾರೆ. ಎಂತಲೇ ನಮ್ಮ ಹಳ್ಳಿಯ ಸಿಂಪಿಗನ ಮನೆಯಲ್ಲಿ ಹೊಸಬಟ್ಟೆಗಳು ರಾಶಿರಾಶಿಯಾಗಿ ಬಿದ್ದಿರುವುವು. ರೇಲ್ವೆ ಸ್ಟೇಶನ್ನಿನಲ್ಲಿ ಟಿಕೆಟ್ಟಿಗಾಗಿ ಆತುರರಾಗಿ ನಿಂತ ಪ್ರಯಾಣಿಕರ ಹಾಗೆ-ಸಿಂಪಿಗನ ಮನೆಯ ಬಾಗಿಲಲ್ಲಿ 'ನನ್ನದು ಮೊದಲು, ನನ್ನದು ಮೊದಲು' ಎಂದು ಆತುರಪಡಿಸುತ್ತ—ಹುಡುಗರ ನೆರವಿ ನಿಂತಿರುವುದು.

ಲಿಂಗಣ್ಣನ ಮಕ್ಕಳೂ ಜಾತ್ರೆಯ ಹೊಸಬಟ್ಟೆಗಾಗಿ ಕಾಡಲು ತೊಡಗಿದರು; ಆದರೆ ಕೈಯಲ್ಲಿ ಒಂದು ಕಾಸೂ ಇರಲಿಲ್ಲ–ಇಷ್ಟೇ ಅಲ್ಲ; ಲಿಂಗಣ್ಣನ ತಲೆಯ ಮೇಲೆ— ಗೊಬ್ಬರಕ್ಕಾಗಿ ಮಾಡಿದ್ದ— ಸಾಲದ ಹೊರೆಯಿದ್ದಿತು. ಅವನು ಮಕ್ಕಳ ಬಯಕೆಯನ್ನು ಈಡೇರಿಸಲಾರದವನಾಗಿ ಒಳಗೊಳಗೆಯೆ ಕಳವಳಪಡುತ್ತಿದ್ದನು. ಸಾತಮ್ಮನ ಮನಸ್ಸಂತೂ ಹೊಗೆಯ ಮನೆಯಲ್ಲಿ ಸಿಕ್ಕು ಉಸಿರುಗಟ್ಟಿದವರಂತಾಗಿರಬಹುದು. ವರುಷಕ್ಕೊಂದು ಸಲ ಬರುವ ಜಾತ್ರೆ; ಅಂದು ತನ್ನ ಮಕ್ಕಳಿಗೆ ಉಡು-ತೊಡುವುದಕ್ಕೆ ಹೊಸಬಟ್ಟೆಗಳನ್ನು ಒದವಿಸಿಕೊಡುವ ಯೋಗ್ಯತೆ ತನಗಿಲ್ಲದುದನ್ನು ಕಂಡು ಅವಳು ಎಷ್ಟೊಂದು ವ್ಯಥೆಗೊಂಡಿರಬೇಡ ?

* * *

ಜಾತ್ರೆಯ ಸಂತೆಗೆಂದು ಊರಿಗೆ ಊರೇ ನೆರೆಯೂರಿಗೆ ಹೋಯಿತು. ಸಾತಮ್ಮನೂ ಹೋಗಿರುವಳೆಂಬುದು, ನಾನು ಸಂಜೆಯ ಕಡೆಗೆ ತೋಟಕ್ಕೆ ಹೋದಾಗ ಗೊತ್ತಾಯಿತು. ತಮ್ಮ ತಾಯಿ ನಾಳೆಗೆ ಜಾತ್ರೆಗಾಗಿ ಹೊಸಬಟ್ಟೆ ತರುತ್ತಾಳೆಂದು, ಲಿಂಗಣ್ಣನ ಮಕ್ಕಳೆಲ್ಲರೂ ಉಬ್ಬಿ ಉಬ್ಬಿ ಕುಣಿದಾಡುತ್ತ ನನಗೆ ಹೇಳಿದರು.

* * *

ಮರುದಿನ ಹಗಲು ನಾಲ್ಕುಗಂಟೆಯಾಗಿರಬಹುದು. ಬಾಡಿಗೆಯ ಬಂಡಿಯ ಬಸಪ್ಪನು—ತನ್ನ ದುಡ್ಡು ಕೇಳಲಿಕ್ಕೆ ಇರಬಹುದು—ನಮ್ಮ ತಂದೆಯ ಕಡೆಗೆ ಬಂದಿದ್ದ. ಏನೋ ಮಾತಿಗೆ ಮಾತು ಹೊರಟು ಅವನು ಕೇಳಿದನು :

“ ನಿನ್ನಿನ ಬಾಳೀಗೊನಿಗೆ ಎಷ್ಟು ಹಣಾ ಬಂತು ರಾಯರs ! ”

ತಂದೆ ಆತುರಭಾವದವರಾಗಿ ಕೇಳಿದರು :

“ ಎಲ್ಲಿಯ ಬಾಳೆಯ ಗೊನೆಗಳೋ ಬಸಪ್ಪಾ ? ”

“ ಸಾತವ್ವ ನಿನ್ನೆ ಸಂತಿಗೆ ನಾಕು ಗೊನೀ ತಗೊಂಡು ಬಂದಿದ್ದಳಲ್ರಿ; ಅವು ? ”

“ ಸಾತವ್ವ ನಿನ್ನೆ ಸಂತೆಗೆ ತೆಗೆದುಕೊಂಡು ಬಂದಿದ್ದಳೇ ? ”

“ ನಿಮಗ ಗೊತ್ತs ಇಲ್ಲೇನ್ರಿ ? ನನ್ನ ಬಂಡೀವಳ್ಗಾಗs ಇಟ್ಟಿದ್ದಳಲ್ರಿ ಹೋಗೂವಾಗ ! ”

“ ನನಗ ಗೊತ್ತೇ ಇಲ್ಲ ಬಿಡು ; ಲಿಂಗ ನನಗ ಹೇಳದೆ ಎಂದೂ ಕಾಯಿ ಕೊಯ್ಯುತ್ತಿರುವುದಿಲ್ಲವೋ ಬಸಪ್ಪಾ ! ”

“ ಏನ್ರೀ, ನಾ ಏನ ಸುಳ್ಳs ಹೇಳತೀನೇನು ? ವಿಚಾರಮಾಡಿ ನೋಡ್ರಿ, ಬೇಕಾದರ ! ”

ಬಸಪ್ಪ ಇಷ್ಟು ಮಾತನಾಡಿ ತನ್ನ ಹಣ ತೆಗೆದುಕೊಂಡು ಹೊರಟು ಹೋದ. ನಮ್ಮ ತಂದೆಯವರದು ವಿಚಿತ್ರವಾದ ಸ್ವಭಾವ; ಬಸಪ್ಪನ ಮಾತಿನಿಂದ ಅವರು ತುಂಬ ಕೋಪಗೊಂಡಿದ್ದಂತೆ ಕಂಡಿತು. ಆಳು ಮನೆಯಲ್ಲಿ ಇರಲಿಲ್ಲವಾದುದರಿಂದ ನನ್ನನ್ನು ಕೂಗಿ ಕರೆದು, ಗಡುಸಾದ ನುಡಿಯಲ್ಲಿ ಹೇಳಿದರು :

“ ನೀನು ಹೀಗೆಯೇ ಹೋಗಿ ಲಿಂಗನನ್ನು ಕರೆದುಕೊಂಡು ಬಾ ! ”

ನಾನು ಹುಲ್ಲೆಯ ನೆಗೆತದಿಂದ ಹಾರುತ್ತ ಹೋಗಿ ಲಿಂಗಣ್ಣನನ್ನು ಕರೆದೆ; ಆತನನ್ನೊಡಗೊಂಡು ತಂದೆಯ ಒಳಗೆ ಬಂದೆ. ತಂದೆಯವರು ಮುಖ ಗಂಟುಹಾಕಿಕೊಂಡೇ ಕುಳಿತಿದ್ದರು. ಲಿಂಗಣ್ಣನು ಬಂದೊಡನೆಯೆ ಸಿಡಿನುಡಿಯಲ್ಲಿ ಕೇಳಿದರು :

“ ಏನಪ್ಪಾ ಲಿಂಗಾ! ನಿನ್ನೆ ಸಂತೆಗೆ ಬಾಳೆಯಗೊನೆ ಎಷ್ಟು ಕಳುಹಿಸಿ ಕೊಟ್ಟಿದ್ದಿ ? ”

ಲಿಂಗಣ್ಣನು ಗಾಬರಿಯ ದನಿಯಲ್ಲಿ ಕೇಳಿದ :

“ ಎಲ್ಲೀದ್ರೀ ಯಪ್ಪಾ ! ಗೊನೀ ಕೊಯ್ಯೊದಾದ್ರ ನಿಮಗ ಹೇಳದs ಕೊಯ್ಯತೀನೇನ್ರಿ ? ”

“ ನಿನ್ನೆ ನಿನ್ನ ಹೆಂಡತಿ ನಾಲ್ಕು ಗೊನೆಗಳನ್ನು ತೆಗೆದುಕೊಂಡು ಹೋಗಿರಲಿಲ್ಲವೇ ಸಂತೆಗೆ ? ’

ಲಿಂಗಣ್ಣನು ಏನೂ ತಿಳಿಯದವನಾಗಿ ಸುಮ್ಮನೆ ಕುಳಿತ. ಮತ್ತೆ ತಂದೆ ಮಾತನಾಡಿದರು :

“ ಸುಳ್ಳು ಹೇಳಬೇಡ; ನನಗೆಲ್ಲವೂ ಗೊತ್ತಾಗಿದೆ. ಸಂಭಾವಿತ ನೆಂದು ನಿನ್ನ ಮೇಲೆ ನಂಬುಗೆಯನ್ನಿಟ್ಟರೆ, ಒಳ್ಳೆಯ ಕೈತೋರಿಸಲಿಕ್ಕೆ ಹತ್ತೀದಿ....ಹೇಳು ! ನಿಜ ಹೇಳು..! ಕಳುಹಿಸಿದ್ದಿಯೋ ಇಲ್ಲವೋ ? ”

“ ನಂಗನಬಸವಣ್ಣನ ಆಣೆಂದರೂ ನನಗ ಗೊತ್ತಿಲ್ಲ ರಾಯರs ! ”

“ ಗೊತ್ತಿಲ್ಲವೇ ? ಹಾಗೆಯೆ ಹೇಗೆ ಗೊತ್ತಾದೀತು ? ಬೆನ್ನ ಮೇಲೆ ಬಾರುಕೋಲಿನೇಟು ಬಿದ್ದಾಗ ಗೊತಾಗುತ್ತದೆ–ಅಲ್ಲವೇ ? ”

ಲಿಂಗಣ್ಣನ ಕಣ್ಣುಗಳಿಂದ ನೀರುಗಳು ಹರಿದುವು. ಧ್ವನಿಯು ನಡುಕ ವನ್ನು ಪಡೆಯಿತು. ಕುಗ್ಗಿದ ದನಿಯಲ್ಲಿ ತಡೆಯುತ್ತ ಹೇಳಿದನು :

“ ನತ್ತಾ ನೂರಿಸಿ ಹೇಳತೀನು ನನ್ನ ಒಡ್ಯಾ ! ನನಗೇನೂ ಗೊತ್ತಿಲ್ಲ. ಬೇಕಾದರ ಆಕಿನ್ನ ಇಲ್ಲೇ ಕರಿಸಿ, ಸುಳ್ಳು ಖರೆ ಯಿಚಾರಾ ಮಾಡಿಬಿಡ್ರಿ ! ”

ನಾತಮ್ಮನನ್ನು ಕರೆದುತರುವಂತೆ ತಂದೆಯವರ ಆಜ್ಞೆಯಾಯಿತು. ಕೂಡಲೆ ಓಡಿದೆ ; ತಂದೆಯವರು ಕರೆಯುತ್ತಾರೆಂದು ನಾತಮ್ಮನಿಗೆ ಹೇಳಿದೆ. ಒಡನೆಯೆ ಆಕೆಯ ಮುಖವು ಕಪ್ಪಿಟ್ಟಿತು. ಎದೆಯು ಡಡ- ಡಡಿಸುತ್ತಿರುವಂತೆ ತೋರಿತು. ಎಳೆದೆಳೆದು ಹೆಜ್ಜೆಗಳನ್ನು ಹಾಕುತ್ತ ನನ್ನೊಡನೆ ಮನೆಗೆ ಬಂದಳು. ಲಿಂಗಣ್ಣನ ದೈನ್ಯಭಾವದ ಮುಖವನ್ನೂ ನಮ್ಮ ತಂದೆಯವರ ಕ್ರೋಧಭಾವದ ಮುಖವನ್ನೂ ಕಂಡು ನಾತಮ್ಮನು

ಗಡಗಡನೆ ನಡುಗಿರಬಹುದು. ಬಂದವಳು ಲಿಂಗಣ್ಣನ ಹಿಂಬದಿಗೆ ಮುಖ ತಗ್ಗಿಸಿ ಕುಳಿತುಕೊಂಡಳು. ತಂದೆಯವರ ಗುಡುಗೊಂದು ಕೇಳಿಸಿತು.

"ಏನವ್ವಾ! ನಿನ್ನೆ ಸಂತೆಗೆ ನೀನು ಬಾಳೆಯಗೊನೆಗಳನ್ನೆಷ್ಟು ಒಯ್ದಿದ್ದೆ?" ಸಾತಮ್ಮನು ಬೆದರಿದ ಒಗೆಯವಳಾಗಿ, ಯಾವ ಮಾತನ್ನೂ ಆಡದೆ, ಸುಮ್ಮನೆ ಕುಳಿತುಕೊಂಡಳು. ಮತ್ತೆ ತಂದೆಯವರು ಕೇಳಿದರು :

"ಎಷ್ಟು ಒಯ್ದಿದ್ದೆ? ಹೇಳುವುದಿಲ್ಲವೆ?"

ಹೆದರಿ ಹುಚ್ಚಾದ ದನಿಯಲ್ಲಿ ಸಾತಮ್ಮನ ಬಾಯಿಂದ ಒಂದು ಶಬ್ದವು ಹೊರಬಿದ್ದಿತು :

"ನಾ—ಕು....!"

ತಂದೆಯವರು ಮೂದಲಿಸುವ ಚುಚ್ಚುನೋಟದಿಂದ ಲಿಂಗಣ್ಣನ ಕಡೆಗೆ ನೋಡಿದರು; ಅವನು ಸತ್ತವನಂತಾಗಿದ್ದ. ತಂದೆ ರೇಗಿದವರಾಗಿ ಕೇಳಿದರು.

"ಏನು ಲಿಂಗಪ್ಪಣ್ಣಾ! ನಿಮಗೆ ಗೊತ್ತಿಲ್ಲವಲ್ಲವೇ?"

ಲಿಂಗಣ್ಣನು ಮುಖ ಕೆಳಕ್ಕೆ ಬಾಗಿಸಿ, ಕಂಬನಿ ಮಿಡಿಯುತ್ತಲಿದ್ದ. ಸಾತಮ್ಮ ಕೊಂಚ ಧೈರ್ಯತಂದುಕೊಂಡವಳಾಗಿ ಹೇಳಿದಳು :

"ಅವನಿಗೇನೂ ಗೊತ್ತಿಲ್ಲ ರಾಯರಃ! ಎಲ್ಲಾ ತಪ್ಪೂನೂ ನಾನಃ ಮಾಡೀದೀನಿ."

"ಅಂದರೆ....?" ತಂದೆಯವರು ಕೇಳಿದರು.

ಸಾತಮ್ಮನಿಗೆ ಉತ್ತರಕೊಡುವುದಕ್ಕಾಗಲಿಲ್ಲ ; ಕಣ್ಣಿಂದ ಧಾರೆ-ಧಾರೆಯಾಗಿ ನೀರು ಸುರಿದುವು. ಕೊರಳ ನಿರಗಳು ಬಿಗಿದು ಬಂದುವು. ತಂದೆಯವರು ಮತ್ತೆ ಕೂಗಿದರು :

"ಬರೇ ಅಳುತ್ತ ಕುಳಿತರೆ ಏನು ಮಾಡಿದಹಾಗಾಯಿತು? ಏನೇನಾಯಿತೆಂಬುದನ್ನು ಹೇಳು!"

ಸಾತಮ್ಮನು ಅಳುತ್ತಳುತ್ತಲೆ ಹೇಳಲು ತೊಡಗಿದಳು.

"ಮಕ್ಕಳು ಜಾತರಿಗೆ ಹೊಸಾ ಅಂಗೀ ಬೇಡಿದೂ. ಕೊಂಡು

ತರಲಾಕ ಮನ್ಯಾಗ ಒಂದು ಕಾಸೂ ಇರಲಿಲ್ಲ. ಅಲ್ಲೆ ಇಲ್ಲೆ ಕೈಗಡ ಕೇಳಿದರ ಎಲ್ಲ್ಯಾ ಒಂದು ಕಾಸೂ ಹುಟ್ಟಲಿಲ್ಲ. ಏನು ಮಾಡೂದೂ ಅಂತ ಇವನ್ನ ಕೇಳಿದೆ. 'ಹೊಸಾ ಅಂಗೀ ತೊಟಕೊಂಡಾಗs ಜಾತ್ರಿ ಆಗತಯ್ಯೇನು?' ಅಂತ ಕಾಡೂ ಮಕ್ಕಳನೆಲ್ಲಾ ಬೆದರಿಸಿ ಸುಮ್ಮಗs ಕುಂದ್ರಿಸಿ ಬಿಟ್ಟ. ನನ್ನ ಹೊಟ್ಯಾಗ ಮಾತ್ರ ನುಚ್ಚು ಕುದ್ದ್ಯಾಂಗ ಆಗಲಾಕ ಹತ್ತಿತು. ಏನೇನೋ ಯೋಚನೀ ಹಾಕೇ ಹಾಕಿದೆ. ಮಂದೀ ಮಕ್ಕಳು ಹೊಸಾ ಅರಿವೀ ತೊಟಗೊಂಡು ತಿರಗ್ಯಾಡತಿರುವಾಗ, ನನ್ನ ಮಕ್ಕಳು ತಿರಕರ‍್ಯಾಂಗ ಹರಕರವೀ ತೊಟಗೊಂಡು ತಿರಗ್ಯಾಡಬೇಕಾತಲ್ಲಾ.... ಅಂತ ಕೆಟ್ಟನಿಸಿತು. ಇಂವಗ ಹೇಳಿದರ ಬ್ಯಾಡಂತಾನಂತ ತಿಳದು, ತ್ವಾಟದಾಗ ಇಂವ ಇಲ್ಲದ ಯಾಳೇ ನೋಡಿ, ನನ್ನ ಹಿರೇಮಗನ ಕಡಿಂದ ಹಳೇಬಾಳ್ಯಾಗ ನಾಕು ಗೊನೀ ಕೊಯ್ಸಿಕೊಂಡು ಮುಚ್ಚಿ ಇಟ್ಟಿದ್ದೆ. ಸಂತಿಗೆ ಹೋಗೂವಾಗ ತ್ವಾಟದ ಬದೀಲೇನs ತೇಬಿಸಿ, ಬಸಪ್ಪನ ಬಾಡೀ ಒಳಗ ಇಟಕೊಂಡು ಹೋದೆ. ಎಡ್ಡುರುಪಾಯಿ ಮೂರು ಪಾವಲಿ ಬಂದೂ. ಅದರಿಂದನs ಎಲ್ಲಾ ಹುಡುಗೋರಿಗೆ ಒಂದೊಂದು ಅಂಗೀ ಹೊಲಿಸಿಕೊಂಡು ಬಂದೇನಿ. ಇದೊಂದು ಸಾರಿಗೆ ನನ್ನ ತಪ್ಪು ಮಾಫ್ ಮಾಡ್ರಿ ಯಪ್ಪಾ! ಇನ್ನೊಮ್ಮೆ ಎಂದೂ ಹಿಂತಾ ಕೆಲಸಾ ಮಾಡಲಾಕಿಲ್ಲ...."

"ಇದೊಂದೇ ಸಾರೆಯೋ? ಹಿಂದೆ ಎಷ್ಟು ಸಲ ಮಾಡಿದುದು ಮುಚ್ಚಿಹೋಗಿದೆಯೋ?" ನಮ್ಮ ತಂದೆಯವರು ಕೋಪವನ್ನೇ ಕಾರಿದರು.

ಲಿಂಗಣ್ಣನಿಗೆ ಹುಚ್ಚು ಹಿಡಿದಂತೆ ಆಗಿದ್ದಿತು. ತಾನೀಗ ಏನು ಮಾಡಬೇಕು? ಹೇಗೆ ಮಾತನಾಡಬೇಕು?—ಎಂಬುದೇ ತಿಳಿಯದಾಯಿತು.

ಸಾತಮ್ಮ ಕಳವುಮಾಡಿದವಳೆಂದು ನಮ್ಮ ಮನೆಯವರೆಲ್ಲರೂ ಬೇಕಾದಹಾಗೆ ಅವಳನ್ನು ಬೈದರು. ಸಾತಮ್ಮ ಸುಮ್ಮನೆ ಕುಳಿತು ಎಲ್ಲವನ್ನೂ ಕೇಳುತ್ತಲಿದ್ದಳು. ನನಗೂ ಆಕೆಯ ಕಳ್ಳತನದ ಬಗೆಗೆ ಅಂದು ತಿರಸ್ಕಾರವುಂಟಾಯಿತು.

ಮುಂದೆ ಏನು ನಡೆಯಿತೆಂದು ಕೇಳುವುದಿದೆಯೇ? ಪಂಚಾಯತಿ

ಕೂಡಿತು. ಎರಡು ರೂಪಾಯಿಗಳ ಸಲುವಾಗಿ ಲಿಂಗಣ್ಣನು ಎಷ್ಟೋ ರೂಪಾಯಿಗಳ ದಂಡವನ್ನು ತೆರಬೇಕಾಯಿತು. ವರುಷದ ಕೊನೆಯಲ್ಲಿಯೆ ತೋಟವನ್ನು ಬಿಟ್ಟುಕೊಡಬೇಕಾಯಿತು. ಹೊಸತಾಗಿಯೆ ನೆಟ್ಟು ಸೀರುಗೆಸಿದ ಬಾಳೆಯತೋಟದ ಸಲುವಾಗಿ, ಹಾರಯಿಸಿದುದೆಲ್ಲವೂ ಹಳವಂಡವಾಗಿ ಹೋಯಿತು.

* * *

ಆ ಹಿಂದಣ ಸಂಗತಿಯೆಲ್ಲವೂ ಇಂದು ನೆನಪಾದಾಗಲೆಲ್ಲ, ಲಿಂಗಣ್ಣನ ಹೆಂಡತಿಯು ಕಳವಿನ ಅಪರಾಧದ ಬಗ್ಗೆ ಗೊಂದಲದಲ್ಲಿ ಬಿದ್ದುಬಿಡುತ್ತೇನೆ. ಹಿಂದೆ ಎಂದೋ ಒಂದು ಕಾಲದಲ್ಲಿ ನಮ್ಮ ಪೂರ್ವಜರು, ಸ್ವಾತಂತ್ರ್ಯ-ಪ್ರೀತಿಯ ದಾಯಾದಿಯೊಬ್ಬನನ್ನು ಸೆರೆಹಿಡಿದುಕೊಟ್ಟರು; ಅದಕ್ಕಾಗಿ ಜಗತ್ತು ಹುಟ್ಟಿದಾಗಲೇ ಹುಟ್ಟಿದ್ದ ಈ ತೋಟದ ನೆಲವನ್ನು— ಇನ್ನಾವ ದೇಶದಿಂದಲೋ ಬಂದ— ಬಾದಶಹನು ಅವರಿಗೆ ಇನಾಮವಾಗಿ ಕೊಟ್ಟ. ಆ ಪೂರ್ವಜರ ರಕ್ತಸಂಬಂಧಿಕರೆಂದು ಆ ನೆಲದ ಪೂರ್ಣ ಸ್ವಾಮ್ಯಹಕ್ಕು ನಮಗೆ ಬಂದಿತು. ಆದರೆ ಬಿಸಿಲೆನ್ನದೆ, ಬಿರುಗಾಳಿಯೆನ್ನದೆ, ಮಳೆಯೆನ್ನದೆ, ಚಳಿಯೆನ್ನದೆ, ಹಗಲಿರುಳೂ ಕಷ್ಟಪಟ್ಟು ದುಡಿದು ಬೆಳೆಯಿಸಿದ ಲಿಂಗಣ್ಣನ ಕುಟುಂಬದವರು, ಒಂದೆರಡು ಬಾಳೆಯ ಗೊನೆಗಳಿಗೂ ಹಕ್ಕುದಾರರಾಗುವಂತಿಲ್ಲವೇ? ತನ್ನ ಹೊಟ್ಟೆಯ ಕರುಳುಗಳ ಬಾಯನ್ನು ಮುಚ್ಚುವುದಕ್ಕೆ, ಸಾತಮ್ಮನು ತನ್ನ ದುಡಿತದ ಫಲವನ್ನು ಉಪಯೋಗಿಸಿದ ಮಾತ್ರಕ್ಕೆ ಅದನ್ನು ಕಳವು ಎಂದೇ ಕರೆಯಬಹುದೆ?

---

# ಜಾಡರ ಜಾನಪ್ಪ

## ಇದು ಓದುವವರಿಗೆ ಹೇಳೋ ಮಾತು !

ಸಂಪಾದಕರು ಇದನ್ನ ಓದದ ಅಚ್ಚು ಮಾಡಿದರ ಒಳ್ಳೇದಾಗತದ ಖರೇ ! ಆದರ..ಎಲ್ಲಿ ಓದಿ ಬಿಟ್ಟು ನಮ್ಮ ಗುಟ್ಟೆಲ್ಲಾ ರಟ್ಟಾಗಿ ಹೋಗತದೋ ಯಾರಿಗೆ ಗೊತ್ತು ! ಯಾರಾದರೂ ಕೇಳಬಹುದು:– ‘ ಅಲ್ರೆಪಾ ! ಪತ್ರಿಕೀಯೊಳಗ ಅಚ್ಚು ಮಾತಲಿಕ್ಕಂತ ಕೊಟ್ಟ ಮ್ಯಾಲ.. ಸಂಪಾದಕರು ಓದಬಾರದಂದರ ಹ್ಯಾಂಗ ನಡಿದೀತ್ರೀ ? ’ ಅಂತ. ಹೀಂಗ ಯಾರಾದರೂ ಕೇಳವರಿದ್ದರ, ಅವರಿಗೆ ನಂದೊಂದು ಸವಾಲು:–ಈಗ ನಮ್ಮ ದೇಶದಾಗ ಪತ್ರಿಕೆಗಳೊಳಗ ಪ್ರಕಟವಾಗೂ ಲೇಖಗಳನ್ನೆಲ್ಲಾ ಎಲ್ಲಾ ಸಂಪಾದಕರೂ ಓದೇ ಪ್ರಕಟಿಸತಾರ–ಅಂಬೋದನ್ನ ಸಿದ್ಧ ಮಾಡಿ ತೋರಿಸೂ ಧೈರ್ಯ ಯಾರಿಗಾದರೂ ಅದ ಏನು ? ಇನ್ನು ಈದ ದೇಶದಲ್ಲಿರೋ ಸಂಪಾದಕರನ್ನ ತಕ್ಕೊಂಡು ನಾವೇನು ಮಾಡಬೇಕಾಗೇದ ? ನಮ್ಮ ಕನ್ನಡ ನಾಡಿನ್ಯಾಗ ಮಾತ್ರ, ಐದರೊಳಗ ನಾಕೂವರೀ ಜನ ( ನೂರಕ್ಕ ತೊಂಬತ್ತರಂತೆ–ಅಂತ ಹೇಳಬಹುದಾಗಿತ್ತು. ಆದರ ಸಣ್ಣ ಬಾಯಿಗೆ ದೊಡ್ಡ ತುತ್ತು ಯಾತಕ್ಕ ? ನಮ್ಮ ಸಣ್ಣ ಸಂಪಾದಕರ ಸಂಖ್ಯಾಕ್ಕ, ಅಷ್ಟೊಂದು ದೊಡ್ಡ ಅಂಕೀ ಯಾಕ ಎಳದು ತರಬೇಕು..? ) ಸಂಪಾದಕರು, ಬರದ ಲೇಖನಾನ ಕಣ್ಣಿಂದ ಕೂಡ ನೋಡದ ಪ್ರಕಟಿಸತಿರತಾರ– **ಅಂತ** ನಂದಂತೂ ಖಂಡಿತ ಭಾವನಾನ ಆಗಿ ಬಿಟ್ಟದ. ‘ ಪ್ರೂಫು ನೋಡೂ ಮಂದಾರೇ ಓದಿ ನೋಡಲಿಕ್ಕಿಲ್ಲರಿ ! ’ ಅಂತ ಯಾರಾದರೂ ಅಡ್ಡ ಮಾತು ಹಾಕೀರಿ ಮತ್ತ. ನೀವ ಹೇಳ್ರಿ; ಕನ್ನಡ ಪತ್ರಿಕಿಗಳೊಳಗ ಪ್ರೂಫು ಕರೆಕ್ಷನ್ ಮಾಡೂ ಪದ್ಧತೀ ಅದ–ಅಂತ ಅನಸತದೇನು ನಿಮಗ ? ಅಂತಲೇ ನನಗೊಂದು ಸ್ವಲ್ಪ ಧೈರ್ಯ: ಓದುವರಿಗೆ ಹೇಳಬೇಕಾಗಿರೂ ನನ್ನ ಮಾತನ್ನ, ಸಂಪಾದಕರೇನೂ ಓದಲಿಕ್ಕಿಲ್ಲಾ..ಅಂತ.

ಈಗ ನಮ್ಮ ಕನ್ನಡ ಪತ್ರಿಕೆಗಳ ಸಂಪಾದಕರೆನ್ನಿಸಿಕೊಂಬೋರು ಎಲ್ಲಾರೂ–ಮಾಸಪತ್ರಿಕೆಯಿರಲಿ, ವಾರಪತ್ರಿಕೆಯಿರಲಿ, ದಿನಪತ್ರಿಕೆಯಿರಲಿ-- " ನಮಗೊಂದು ಕಥೀ ಬರೆದು ಕೊಡ್ರೀ " ಅಂತ ಒಂದು ಒಂದು ಜೀಂವಾ ಹಿಂಡತಾರ. ಈಗ ನಮ್ಮ ಪ್ರಾಂತದೊಳಗ, ಬರಿಯೂ ಅವರಿಗೆ ಏನು ಲಾಭ ಅದ.. –ಅಂಬೂದಂತೂ ಎಲ್ಲಾರಿಗೂ ಗೊತ್ತಿದ್ದ ಮಾತs ಆಗೇದ. ಉಳಿದ ಯಾವ ಲಾಭ ಇಲ್ಲದಿದ್ದರೂನೂ ಒಂದೇನೋ ಇದ್ದಾಂಗ ನನಗ ಕಾಣಸತsದ: ಅದೇನಂದರ:–ಬರಿಯೂದರೊಳಗ ಮೈಮರೆತು ಕೂತರ, ಆಗಷ್ಟು ಹೊಟ್ಟೀಯೊಳಗಿನ ಹಸಿವೀ ಕಸವಿಸಿ ಕಡಿಮಿ ಆಗಬಹುದು.. ಇದೊಂದs ಲಾಭ.

ಸಾಹಿತ್ಯದೊಳಗ ಕಥೀ ಕಾದಂಬರೀಗೆ ಒಂದು ಮಹತ್ತ್ವದ ಸ್ಥಾನ ಅದs ಏನ್ರೆಪಾ! ಆದರ ಈ ಕಥೀ, ಕಾದಂಬರೀ, ಯಾರಿಗೆ ಬೇಕು? ಯಾತಕ್ಕ ಬೇಕು? ಹೊಟ್ಟಿ ಬಿರೀ ತಿಂದು, ಹೊತ್ತು ಹೋಗಲಾರದs ಮೆತ್ತಗಿನ ಗಾದೀಮ್ಯಾಲ ಹೊರಳಾಡತಾ ಇರೋ ಹಣವಂತರಿಗೆ–ಮನೋರಂಜನಕ್ಕಂತ–ಬೇಕು. ಈಗ ನಾಡಿನೊಳಗ ನಾಕೂ ಕಡಿಂದೂನೂ 'ಕೂಳು! ಕೂಳು!' ಅಂತ ಕಿರಚತೀರೋ ಕೂಗೊಂದs ಕೇಳಬರತಿರೂವಾಗ, ಮನೋರಂಜನ ಯಾರಿಗೆ ಬೇಕಾಗೇದ? ಗಾದೀ ಮಾತೊಂದು ಅದs, ಗೊತ್ತದs ಇಲ್ಲೋ! 'ಅನ್ನ ಇದ್ದಾಗs ತನ್ನನ್ನತೋಂ' ಅಂತ.

ಒಂದು ಮಾತಿನ ಸಲುವಾಗಿ ಮಾತ್ರ, ನನಗ ಮತ್ತ ಮತ್ತ ಮಜಾ ಅನಸತೀರತsದ:– ಇಷ್ಟೆಲ್ಲಾ ಕೂಳಿನ ಕೂಗು ದೇಶದೊಳಗ ತುಂಬಿದ್ದರೂ–ದೇಶದ ಸಂಪತ್ತನ್ನ ಪೆಟ್ರೋಲಿನ ಹೊಗೀ ಮಾಡಿ ಹಾರಿಸಿ ಬಿಡೋ–ಮೋಟಾರಿನ ಕೂಗು, ಕೂಳಂತ ಕೂಗೂ ಜನರ ದನಿ ಕೇಳಿಸದ್ಹಾಂಗ, ನಮ್ಮ ಕಿವಿಗಳನ್ನ ಕಿಂವಡಗೊಳಸತಾ ಅದs–ಅಲ್ಲಾ! ಮಾತಾಡೂ ಸಿನೇಮಾದ ಮಾತೂ–ಕಥೀ ಕೇಳಲಿಕ್ಕೆ, ದಿನಕ್ಕೊಂದು ದುಡ್ಡಿನ ಗುತ್ತ ಕರಗಿ ನೀರಾಗತsದಲ್ಲಾ! ಬೀಡಿ ಸಿಗರೇಟುಗಳ ಯಜ್ಞ ಬಾಧೆಯಿಲ್ಲದs ನಡದs ಬಿಟ್ಟsದಲ್ಲಾ! ಚಹಾ ಕಾಫೀ ಸೋಡಾ ಡ್ರಿಂಕುಗಳಿಗಾಗಿ– ಸರಿ ರಾತ್ರ್ಯಾಗ ಸುದ್ಧಾ–ರೊಕ್ಕದ ಸುರಿಮಳೀ ಆಗೂ ಸಪ್ಪಳ ಕೇಳಸತಿರತsದಲ್ಲಾ! ಈ ಎಲ್ಲಾ ಹೃದಯರಂಜನ, ಮನೋರಂಜನ ನಿರಂತರ ನಡದs–

ದಂದಪ್ಪಾಲ. ಕತೆಗಾರರ್ನ್ಯಾಕ ಸುಮ್ಮನೇ ಕೂತುಕೋ ಬೇಕು! ಅವರೂ ನಡಸಲೆಲಾ ಮಂದೀ ಮನಸ್ಸನ್ನ ರಂಜೀಸೂ ಕೆಲಸಾನ! ದುಡ್ಡಿಲ್ಲದಿದ್ದರೂ ಹೋಗಲಿ, ನಾಕುಮಂದೀ ಕಡಿಂದ ಹೊಗಳಿಕ್ಯಾದರೂ ಸಿಕ್ಕೀತೋ ಇಲ್ಲೋ! ಇವೆಲ್ಲಾ ಯೋಚಸಿ ಆಗಾಗ ನನ್ನ ತಲೀ ಒಳಗ ಲಾಗಾಹಾಕ ತೊಡಗತಾವ. ಆಗ ಕೈಯೊಳಗ ಲೆಕ್ಕಣಿಕೀ ತಗೊಂಡವನು ಗರಾಗರಾ ಅಂತ ಏನಾದರೂ ಒಂದು ಕಥೀ ಗೀಚಿ ಒಗೀತಿರತೀನಿ.

ಈಚೀಚಿಗೆ ಕಥೀ ಬರಕೊಡ್ರಿ ಅಂಬೂ ಸಂಪಾದಕರ ಉಪದ್ರವ ನನಗ ತಪೀದಷ್ಟಾಗೇದ. ಎಷ್ಟು ಜನರಿಗಂತಾರೇ ಬರಕೊಡಬೇಕು! ಈ ಪಿಡುಗಿನಿಂದ ತಪೀಕಾಗೂ ಹಂಚಿಕೀನು ನನಗ ಹೊಳೀವೊಲ್ಲದಾಗೇದ. ಬಹಳ ದಿನ ಯೋಚಿಸಿ ಯೋಚಿಸಿ, ಇದೊಂದು ಉಪಾಯ ಮಾಡೀನಿ. ಅದೇನಂತೀರಾ? ಈಗ ಇಲ್ಲೆ ಕಥೀ ಅಂತ ಹೆಸರಿಟ್ಟು ಬರದೀದೇನಲ್ಲಾ.. ಇದು ಕಥೀನೇ ಅಲ್ಲಾ; ನಡೆದು ಹೋದದ್ದೊಂದು ಸಂಗತಿ! ಇದನ್ನೋದಿ, "ಇದೇನು ಕಥೀನ್ರೀ! ನಮ್ಮೂರಾಗ ದಿನಾ ಇಂಥಾ ಸಂಗತಿ ಬೇಕಾದಷ್ಟು ನಡೀತಾವ; ಒಂದು ಪ್ರೇಮಿಲ್ಲಾ-ಪ್ರೀತಿಲ್ಲಾ; ಯಾತಕ್ಕ ಹಾಕತೀರಿ ಇಂಥಾ ಅಳಬುರಕ ಲೇಖಕರ ಕಥೆಗಳನ್ನ!" ಅಂತ- ಸಂಪಾದಕರ ಕಡೆಗೆ-ನಾಲ್ಕ್ಯಾರು ಜನ ವಾಚಕರು ಪತ್ರ ಬರೆದರ ಸಾಕು, ನಾನು ಬದುಕಿಕೊಂಡೆ! ಕೊನೀಗೆ ಈ ಒಬ್ಬ ಸಂಪಾದಕರ ಕಾಟಾದರೂ ಕಡಿಮಿ ಆಗಬಹುದು. ಇದನ್ನೋದಿದ ವಾಚಕರು ಕತೆಗಾರಗ "ಆನಂದಕೊಂದ" ಅಂತ ಹೊಸಾ ಬೈಗಳ ಬಿರುದು ಕೊಟ್ಟರೂ ನನಗೇನೂ ದುಃಖವಿಲ್ಲಾ!

## ಇನ್ನ ಕಥೀಗಾರಂಭಾತು!

ಇದನ್ನ ಸಂಪಾದಕರು ಓದಿದರೂ ಅಡ್ಡೀಯಿಲ್ಲಾ. ಅಯ್ಯೋ! ಇದೇನು! ನಾನು ಇಲ್ಲೆ ಹೀಂಗ ಬರದಿರೋದನ್ನ ನೋಡಿ 'ಈ ಮೊದಲೇನು ಬರದಾನ ನೋಡೂನು' ಅಂಬೂ ಬುದ್ಧಿ ಆದೀತೇನು ಮತ್ತ ಸಂಪಾದಕರಿಗೆ! ಈ ಮಾತನ್ನ ತಗದು ಬಿಡಲೇನು?....ಇರಲಿ ಬಿಡ್ರಿ; ಇದ್ದುಕೊಳ್ಳಿ! ಈ ಮಾತಿನ ಮ್ಯಾಲಾದರೂ ಅವರ ಕಣ್ಣು ಬೀಳೂದು ಅಷ್ಟರೊಳಗಃ ಆದ!

ಈಗ ಇಪ್ಪತ್ತೈದು ವರ್ಷದ ಹಿಂದೆ, ನಾನು ಒಂಬತ್ತೋ ಹತ್ತೋ

ವರ್ಷ-ವರ್ಷ ಇದ್ದ. ಆಗಿನ ಬಾಡರ ಜಾನಪ್ಪನ ದೌಲು ಏನ ಹೇಳಲಿ! ಅವನ ನಯನಸುಖದ ಅರಿವೀ ಜಳೀ ಪೈರಾಣೀನು, ಕೆಂಪು ಮಖಮಲ್ಲಿನ ಜಾಕೀಟೀನು, ಕೋಯಿಮತ್ತೂರಿನ ಜರದ ರೇಶಿಮಿಾ ರುಮಾಲೀನು, ಜಾನಪೀಲಾ ಗಿರಣೀ ಗಂಜೀ ಧೋತರೀನು, ಒಂದಕ್ಕಿಂತ ಒಂದು ನೋಡೂ ಹಾಂಗ ಇದ್ದೂ. ಕಾಲೊಳಗಿನ ಚಿತ್ತಾರದ ಕಾಲಮರಿಯಂತೂ ಹೆಜ್ಜೀ ಕಿತ್ತಿಟ್ಟರ 'ಜರ್, ಜರ್' ಅಂತ ಜರಗುಡತಿದ್ದೂ.

ನಾವು ಊರಗೌಡರು-ಬೇಕಾದಷ್ಟು ತೋಟಪಟ್ಟಿ ಇದ್ದವರು. ನಮ್ಮಂಥಾ ನಾವೂ ಒಂದೊಂದು ದಿನ ಕಾಯಿ-ಪಲ್ಲೆ ಇಲ್ಲದs ಉಂಡೇವು; ಆದರ ಜಾನಪ್ಪನ ಊಟ ಕಾಯಿ-ಪಲ್ಲೆ ಇಲ್ಲದs ಒಂದು ದಿನಾನೂ ಆಗೂ ಹಾಂಗಿಲ್ಲ. ಊರೊಳಗೆಲ್ಲಾ ರೈತರ ಮನಿಗಳs ಹೆಚ್ಚು. ಬೆಳವಲನಾಡಿನ ರೈತರ ದಿನದ ಆಹಾರ ಗೊತ್ತs ಅದs ಅಲ್ಲಾ! ಜೋಳದ ರೊಟ್ಟಿ, ಜೋಳದ ನುಚ್ಚು! ಹಬ್ಬಾ ಹುಣ್ಣಿವೀ ಕೂಡಾ ಅವರು ಅಕ್ಕೀ ಅನ್ನದ ಮಾರೀ ಕಾಣೋದು ಅಪರೂಪ. ನೆನಪಾದ ಕೈಲೆ ಒಂದು ವಿನೋದದ ಮಾತು ಹೇಳಿಬಿಡತೀನಿ:- 'ಲಚಮಣ್ಣಾ' ಅಂತ ಒಬ್ಬ ನಮ್ಮ-ಹೊಲಾ ಮಾಡಿದ ರೈತ ಇದ್ದ. ಅಂವಾ ನಮ್ಮ ತಂದೆಯವರಿಗೆ "ಯಾವದಾದರೂ ಖಟ್ಲೀ ದೊಳಗ ನನ್ನ ಸಾಕ್ಷಿದಾರನ್ನ ಮಾಡಿ, ಕಚೇರಿಗೆ ಕಳಸರೀ ಗೌಡರ!" ಅಂತ ಆಗಾಗ ಹೇಳಿಕೋತಿದ್ದ. 'ಸಾಕ್ಷೀದಾರ ಆಗೂ ಉಬ್ಬು ಯಾಕೋ ನಿನಗ-ಲಚಮಣ್ಣಾ?' ಅಂತ ಒಂದ ಸಾರೆ ನಮ್ಮ ತಾಯಿ ಕೇಳಿದರು.

"ಯಾಕಂದ್ರ ಏನ್ರಿ ಯವ್ವಾ! ಕಚೇರಿಗ್ಹೋಗಿ ಬನ್ನಾಗ್ರs ಬಿಸಿ ಬಿಸಿ ನೆಲ್ಲಕ್ಕೀ ಬಾನಾ ಉಡದ ಒದೂಣಲಾ" ಅಂತ ಲಚಮಣ್ಣಾ ನಗನಗತs ಹೇಳಿದ. ಹೇಳೂ ಕಾರಣಂದರ ಇಷ್ಟs; ಅಕ್ಕೀ ಅನ್ನದ ಸಲುವಾಗಿ, ಕೆಲಸಾ ಬಗಸೀ ಬಿಟ್ಟು, ನಾಲ್ಕೈದು ಹರದಾರಿ ಹಾದೀ ನಡೆದು ಹೋಗ ಲಿಕ್ಕೆ ಸಿದ್ಧರೀರೂ ಅಂಥಾ ಸ್ಥಿತಿ ನಮ್ಮೂರ ರೈತರದು.

ಜಾನಪ್ಪನ ದಿನದ ಊಟಕ್ಕ ಎರಡೂ ಹೊತ್ತೂ ಬಿಸಿ ಬಿಸೀ ಅಕ್ಕೀ ಬಾನ ಆಗಲಿಕ್ಕೇ ಬೇಕು. "ನೀವು ಬರೇ ಜ್ವಾಳದ ಕೂಳು ತಿಂದು ಹ್ಯಾಂಗಿರತೀರೋ ಏನೋಪ್ಪಾ! ನಮ್ಮ ಕಡಿಂದಂತೂ ಜೀವ ಹ್ಯಾಂಗೂ ಆಗಾಕಿಲ್ಲ" ಅಂತ ಜಾನಪ್ಪ ಒಕ್ಕಲಿಗರಿಗೆ ಅಣಕದ ಧನಿಯೊಳಗ ಮಾತಾಡ

ತಿರೂದನ್ನ, ನಾನು ನಾಲ್ಕಾರು ಸಲ ಕೇಳಿದ್ದೆ. ಜಾನಪ್ಪ ಹೀಂಗ ಮಾತಾಡಿದಾಗೆಲ್ಲಾ ಒಕ್ಕಲಿಗರ ಕಡಿಂದ ಒಂದೇ ಉತ್ತರ ದೊರೀತಿತ್ತು:

“ನೀ ಏನಪ್ಪಾ! ದಿನಾ ಹೊತ್ತುಮುಣುಗತ್ತೈತೀ ಅನ್ನೋದರೊಳಗ ಒಂದು ನೇಗೀ ಇಳಪತೀ, ದಿನಾಗಲೂ ಹೊಸಾ ಹೊಸಾ ದುಡ್ಡಿನ ನೋರಾ ಕೇಳತೀ; ನಿನಗೇನು ? ಅಕ್ಕೀಬಾನಾನೂ ಸಿಕ್ಕೀತು, ಸಕ್ಕರೀ ಶಾವಿಗೀನೂ ಸಿಕ್ಕೀತು. ಬಾರಕೋಲು ಬೆನ್ನಮ್ಯಾಗ ಹಾಕಿಕೊಂಡು ಬಸವಣ್ಣನ ಹಿಂದ ತಿರಗ್ಯಾಡೂ ಒಕ್ಕಲಗ್ಯಾರು ನಾವು: ನಮಗ್ಯಾಕ ಹೆಚ್ಚಿಂದು ಬೇಕು ? ನಮ್ಮ ಹುಳ್ಯಾನುಚ್ಚು ಉಳ್ಳೀಗಡ್ಡಿಗೆ ಆಶೀ ಆದರ ಸಾಕಪ್ಪಾ! ಅದೇನೋ ಅಂತಾರಲ್ಲಾ ಬಡವಗ್ಯಾಕ ಬೇಕು ಹೆಡಗಿ ಜಾತ್ರಿ?–ಅಂತ.” ಈ ಉತ್ತರದಿಂದ ಜಾನಪ್ಪಗ ತಲೀಮ್ಯಾಲ ತನಗ ಕೋಡು ಮೂಡಿದ್ಯಾಂಗ ಅನಸತಿತ್ತು. ಅಹಂಕಾರದಿಂದ ಮೈಯುಬ್ಬತಿತ್ತು. ಬಿಂಕದ ನಗೀ ಬಾಯಾಗ ಇರತಿತ್ತು.

ಇನ್ನೊಂದು ಹೆಚ್ಚಿನ ಮಾತೂ ಅಂದರ, ನಮ್ಮೂರಿಗೆ ಮೊದಲು ಚಹಾ ತಂದಾಂವ ಜಾನಪ್ಪನೇ. ಮಾಲಿನ ಖರೀದಿಗೆ, ಸೀರೀ ಮಾಲಕ್ಕ ಅಂತ ಪ್ಯಾಟೀ ಊರಿಗೆ ಮ್ಯಾಲೆ ಮ್ಯಾಲ ಹೋಗತಿದ್ದ; ಅಲ್ಲೀ ಮಂದಿ ಇರೂ ಹಾಂಗೇ ತಾನೂ ಇದ್ದು, ತಾನೂ ಪ್ಯಾಟೀ ಊರಾಂವಾ–ಅಂತ ಅನಿಸಿಗೋಬೇಕಂತ ಜಾನಪ್ಪನ ಮನಸು; ಪ್ಯಾಟೀ ಊರ ಮಂದಿ ಚಹಾ ಕುಡೀತಿದ್ರು; ಅದನ್ನೂ ತಂದನೇ ತನ್ನ ಮನ್ಯಾಗ !

ಇನ್ನೂ ಹೊಸಾ ಹರೇ ಜಾನಪ್ಪಗ; ಹೆಂಡ್ತೀನೂ ಅಂಥಾ ಬಿಂಜೀರ ಹೆಣಮಗಳೇ ಸಿಕ್ಕಿದ್ದಳು. ಮನೀ ಕೆಲಸಾ ಎಲ್ಲಾ ನೀಗಿಸಿಕೊಂಡು, ಗಂಡಗ ದಿನಕ್ಕೊಂದು ಸಂದರಿಕೀ ಒದಗಿಸಿಕೊಡತಿದ್ದಳು. ಹರಿಯೂ ನೀರಿಗೆ ಇಳುಕಲ ನೆಲಾ ಸಿಕ್ಕ್ಯಾಂಗಾಗಿತ್ತು.. ಜಾನಪ್ಪನ ಸಂಸಾರ ಅಂದರ! ಗಂಡ ಹೆಂಡ್ತಿ ಇಬ್ಬರೂ ದುಡಿಯುವರು; ದಿನಕ್ಕೊಂದು ಸೀರಿಯ ನೇಗಿ ಇಳೀತಿತ್ತು; ನೇಗಿಗೆ ಒಂದೂವರಿ ಎರಡರಂತೆ ಬೆಳ್ಳಗಿನ ಬೆಳ್ಳೀ ರಾಜನ ಮಾರೀ ರೂಪಾಯಿ ಕೈಯಾಗ ಬಂದು ಬೀಳತಿತ್ತು. ಊರೊಳಗಿನ ರೈತರಿಗೆ ಬೀಜಕ್ಕ, ಬಿಜ್ಜಡಿಗೆ ಅಂತ ಯಾರಿಗಾದರೂ ನಾಕೆಂಟು ರೂಪಾಯಿ ಕೈಗಡ–ಸಾಲ ಅಡಗಾಣಿ ಸಿದರ — ಜಾನಪ್ಪನಲ್ಲೇ ಸಿಗತಿದ್ದೂ.

ನಮ್ಮ ಊರೊಳಗ ಒಂದು ಜಾತ್ರ್ಯಾಗಲಿ, ಆಟಾಗಲಿ, ಮೋಜಾಗಲಿ-ಅದರಾಗ ಹಿರೇ ಹುದ್ದರಿ ಅಂದರ ಜಾನಪ್ಪನಽ! ನಮ್ಮ ತಂದಿ ಕೂಡಾ ಊರೊಳಗಿನ ಎಲ್ಲಾ ರೈತರಿಗಿಂತಾ ಜಾನಪ್ಪಗನಽ ಹೆಚ್ಚಿಗೆ ಗೌರವಾ ತೋರಿಸತಿದ್ದರು. ಹಳ್ಳಿಯ ತರುಣ ಜನಾ ಸೇರಿ ಆಗಾಗ ಬಯಲಾಟಾ ಮಾಡತಿದ್ದರು; ಅದರೊಳಗೆಲ್ಲಾ ಮುಖ್ಯಪಾತ್ರ ಜಾನಪ್ಪಂದಽ. ಆಟಕ್ಕ ಬೇಕಾಗುವ ಕೆಲಕೆಲವು ಪದಗಳನ್ನ ಜಾನಪ್ಪ ತಾನಽ ರಚಿಸಿಬಿಡತಿದ್ದ. ನಾನು ಚಿಕ್ಕವನಿದ್ದಾಗ, ಜಾನಪ್ಪ ರಚಿಸಿದ ಎಷ್ಟೋ ಹಾಡು ನನಗ ಪಾಠಾಗಿದ್ದೂ. ಈಗ ಎಲ್ಲಾ ಮರೆತು ಹೋಗ್ಯಾವ; ಆದರ ಒಂದು ಹಾಡು ಮಾತ್ರ ನಾನು ಮ್ಯಾಲಿಂದ ಮ್ಯಾಲ ಹಾಡಿಕೋತಽ ಇರತೀನಿ; ಅಂತಲೇ ಆದರ ಒಂದೆರಡು ನುಡಿ—ಈಗ ಇಪ್ಪತ್ತೈದು ವರ್ಷಾದರೂ—ನೆನಪು ಉಳದದ. ಕೊನೀತನಕಾನೂ ಅದನ್ನ ನಾನೇನೂ ಮರೀಲಿಕ್ಕಿಲ್ಲಾ ಅಂತ ನನಗ ಅನಸತದ. ಜಾನಪ್ಪನ ಆ ಹಾಡು ಕೇಳಬೇಕಂತ ಇಷ್ಟ ಇದ್ದರ ಹೇಳಿ ಬಿಡತೀನಿಲ್ಲೆ ನೋಡ್ರಿ! ಬಯಲಾಟದೊಳಗಿನ ನಾಯಕ, ನಾಯಿಕೆಯು ಕೂಡ ಮಾತಾಡುವಾಗ ಅನ್ನೊ ಹಾಡು :

ನಗನಗತಽ ನಡದಿಯೆಲ್ಲೆ ನಾರೀ– ವೈಯಾರೀ |
ಮಿಂಚೀನ ಗೊಂಬೀ ತೂರೀ | ನಗನಗತ || ಪಲ್ಲ ||

ಕಣ್ಣನೋಟ ಕಾಮನ ಬಿಲ್ಲಾ
ಕೆನ್ನಿಯೆರಡು ಕನಡೀ ಹಳ್ಳಾ ||
ತುದಿಜರದ ಕುಬಸ ನಾ–ಜೂ–ಕಾ |
ಎದಿಮ್ಯಾಗಿನ ಸೆರಗಿನ ಝೋಕಾ |
ಎದಿಗಿರದ್ಬಾಂಗಾದಿತು ಬಾಕಾ |
ಊರವಶಿ ರಂಬಿ ಮೇ–ನ–ಕಾ |
ಇಲ್ಲ ಯಾರು ನಿನ್ನ ಸರಿ ತೂ–ಕಾ |
ಮಾತಾಡ ನಿಂತು ಜರಾ ನೋ–ಕಾ |
ಮೋಹಕಂದಽ ಗಿಣೀಯೇ ಮಾ–ಯದ ಮಣಿಯೇ || ೧ ||

ನಗನಗತಽ ನಡದಿಯೆಲ್ಲೆ ನಾರಿ....

ಇಳೀಬಿಸಲ ಯಾಳೇದೊಳಗ |
ಹೊಳಿನೀರಿಗೆ ನೀ ಹೊಂಟಾಗ |
ಅಂದೊಮ್ಮೇ ಮೊದಲ ನೋಡೀ |
ನನ ಕಣ್ಣೂ ಮನಸೂ ಕೂಡೀ |
ನಿನ ಕಡಿಗೇ ಬಂದೂ ಓಡೀ |
ಮಾಡಿದಿಯು ಮಾಟಾ ಮೋಡೀ |
ಕಣು-ಮನಸಿಗೆ ಹಾಕಿದೆ ಬೇಡೀ |
ಎಂಥಾಕೇ ನೀ ಕಿಡಿಗೇಡೀ |
ಕಡಿಗಣ್ಣು ಬಾಣಾ | ಹೊಡಿವೂದು ಪ್ರಾಣಾ || ೨ ||
ನಗನಗತ ನಡದೆಯಲ್ಲೆ ನಾರಿ....

ಹಳ್ಳಿಯ ಕವಿಯ ಹಾಡು ಇದು; ನೋಡ್ರಿ ನಗಬ್ಯಾಡ್ರಿ ಮತ್ತ! ನಿಮಗೆಲ್ಲಾ ಇದು ಹ್ಯಾಂಗ ಅನಸ್ತದೋ ಏನೋ, ನನಗ ಮಾತ್ರ ಒಳ್ಳೊಳ್ಳೇ ಕಾವ್ಯದೊಳಗಿನ ಒಳ್ಳೊಳ್ಳೇ ಭಾಗ ಓದೋ ಮುಂದ ಯಾವ ರೀತೀ ಆನಂದ ಅನಿಸ್ತಿರತದೋ ಅಂಥಾದೇ ಆನಂದ ಈ ಹಾಡು ಅನ್ನೂವಾಗಲೂ ಅನಸತಿರತದ. ಅದಕ್ಕಂತ ಈ ಹಾಡನ್ನ ನಾನು ಆಗಾಗ ಹಾಡಿಕೋಳತಾ ಇರೋದು !

ಹೆಮ್ಮೆಯೇನೂ ಕಮ್ಮಿ ಇರಲಿಲ್ಲ ಜಾನಪ್ಪಗ: ಯಾರ ದಾಕ್ಷಿಣ್ಯಾನೂ ಇರಲಿಲ್ಲ ಅಂವಗ. ಕೆಲಸ ಕೊಟ್ಟ ಜನರು ಬಂದು " ನಮ್ಮದಷ್ಟು ನೇಗೀ ಕೆಲಸಾ ಬ್ಯಾಗನ ತೀರಿಸಿಕೊಡೋ ಜಾನಪ್ಪಣ್ಣಾ! " ಅಂತ ಎಷ್ಟೆಷ್ಟೋ ದೈನ್ಯ-ವಿನಯಗಳಿಂದ ಹೇಳಿಕೊಳತಿದ್ರು. ಅವರ ಜೋಡೀ ಚೆನ್ನಾಗಿ ಮಾತಾಡಿದರ ಆಡಿದ; ಇಲ್ಲದಿದ್ದರ " ಹೋಗೋ, ಹೊಸಾ ಅರಿವೀ ಎಂದ ಕಂಡಿದ್ದಿರಿ ! ಎಲ್ಲ್ಯಾರ ಕೌದೀ ರಗಟ್ಯಾಗ ಬೀಳೋ ಮುಳಗೋಳು ನೀವೆಲ್ಲಾ! " ಅಂತ ಗದ್ದರಿಸಿ ಬಿಡತಿದ್ದ, ಒಂದಾಂವ ಎಂಥಾ ದೊಡ್ಡ ಮನಿಸ್ಯಾನು ಇರಲಿ; ಜಾನಪ್ಪ ಅಂದದ್ದು ಅನಿಸಿಕೊಂಡು, ವಿಷಾದದ ನಗೀ ನಗತ ಹೋಗಬೇಕಾಗತಿತ್ತು.

ಒಮ್ಮೆ ದೀಪಾವಳಿಯೊಳಗ "ಆಕಾಶದೀಪದ ಬುಟ್ಟಿ ಬೇಕು.."ಅಂತ ನಾನು ಹಟಾಮಾಡಿದೆ. ತಂದೆಯವರು " ಹೋಗು, ಜಾಡರ ಜಾನಪ್ಪನ್ನ

ಕರಕೊಂಡು ಬಾ ! ನಾ ಬರೂದಕ್ಕ ಹೇಳಿದ್ದೀನಿ- ಅಂತ ಹೇಳು ! ಅವನ ಕಡಿಂದಽ ಮಾಡಿಸಿಕೊಡತೀನಿ” ಅಂತ ಹೇಳಿದರು. ನಾ ಓಡತೋಡತಽ ಹೋಗಿ ‘ ನಮ್ಮ ತಂದಿ ಕರೀತಾರ ಬಾ ’ ಅಂತ ಹೇಳಿದರ ಜಾನಪ್ಪ ಏನು ಹೇಳಬೇಕು ? “ ಹೋಗ್ಹೋಗ್ರೀ, ಕರಿಸಿದಾಗ ಬರಾಕ ನಾ ಏನು ಪಾಲೀ ಕಾರಾ ಅಂತ ತಿಳಕೊಂಡಾರೇನು . . ನಿಮ್ಮಪ್ಪ? ನಮಗೇನು ಕೆಲಸಾ-ಬಗಸೀ ಇಲ್ಲಾ ಅಂತ ತಿಳದ್ದೀರೇನು ? ” ಅಂತ ಬೆದರಿಸಿ ಕಳಿಸಿಬಿಟ್ಟ. ನಾನು ಮನೀಗೆ ಬಂದು ಜಾನಪ್ಪ ಅಂದದ್ದನ್ನೆಲ್ಲಾ ತಂದೆಗೆ ಹೇಳಿದೆ. ನನಗ ಚೆನ್ನಾಗಿ ನೆನಪದಽ: ಆಗ ನಮ್ಮ ತಂದೆಯವರ ಮಾರೀಮ್ಯಾಲಿನ ಕಳೀ ಇಳೀತಾದರೂ ಎಳೆದುತಂದ ಮುಗುಳನಗೀ ನಗತಾನಗತಾ ಅಂದುಬಿಟ್ಟರು: “ ಭಾಳ ಸೊಕ್ಕಿನ ಮುಂಡೇಗಂಡ ಅಂವ; ಸೆರೇಗಿರೇ ಕುಡೀತಾನೋ ಏನೋ ! ತಿಳದಾಗೊಂದು ರೀತಿ; ತಿಳೀದಾಗೊಂದು ರೀತಿ ! ”

* * *

ಮುಂದೆ ಶಿಕ್ಷಣ, ನೌಕರೀ ಅಂತ ನಾನು ನಮ್ಮ ಹಳ್ಳೀನಽ ಬಿಡಬೇಕಾತು. ನಡುನಡುವ ಎಂದಾದರೂ ಒಂದೆರಡು ದಿನ ಹಳ್ಳಿಗೆ ಹೋದಾಗ, ಜಾನಪ್ಪನ್ನ ನೋಡತಿದ್ದೆ. ಆಗ ಆತನ ಮುಂದಾಳುತನ ಕಡಿಮಿಯಾಗಿರದಿದ್ದರೂ ಉಡಿಗಿತೊಡಿಗಿಯ ಬೆಡಗು ಮಾತ್ರ ಕಡಿಮಿ ಆದ್ಹಾಂಗ ಕಾಣತಿತ್ತು. ನಾನು ಅವನ್ನೆಲ್ಲಾ ವಯಸ್ಸಿನ ಮ್ಯಾಲ ಆರೋಪಿಸಿ, ಆದ ಆಶ್ಚರ್ಯಕ್ಕ ಸಮಾಧಾನ ಹೇಳಿಕೋತಿದ್ದೆ. ಇತ್ತೀಚೆಗೆ ಏಳೆಂಟು ವರ್ಷದಿಂದಲೂ ಹಳ್ಳಿಯೊಳಗಿನ ಮನೀನಽ ತಗದುಬಿಟ್ಟದ್ದರಿಂದ, ನನಗ ನಮ್ಮೂರಿಗೆ ಹೋಗೂ ಪ್ರಸಂಗನಽ ಬಂದಿಲ್ಲ; ಅಂತಽ ಜಾನಪ್ಪನನ್ನೂ ನೋಡಿರಲಿಲ್ಲ.

* * *

ಮೊನ್ನೆ ಸಂಜೀ ಐದುಘಂಟೆ ಆಗಿರಬಹುದು. ಹಳ್ಳಿಗಾಡಿನವರ ಹಾಂಗ ಕಾಣೂ ಒಬ್ಬ ಮುದುಕ, ಮುದುಕಿ ನಮ್ಮ ಮನೀಗೆ ಬಂದರು. ನಾನು ಮುಂದಿನ ಪಡಸಾಲೀ ಒಳಗಽ ಕೂತಿದ್ದೆ. ಮುದುಕ ಬಂದವನಽ ನನ್ನ ಮುಂದ ಉದ್ದಕಽ ಬಿದ್ದು, ನಮಸ್ಕಾರಮಾಡಿ ಎದ್ದುನಿಂತ. ನಾನು ಗುರುತಿಲ್ಲದ ನೋಟದಿಂದ, ಬಂದಿರೂ ಮುದಕಾ ಮುದಕೀ ಕಡೇ ನೋಡಲಿಕ್ಕೆ ಹತ್ತಿದೆ. ಮುದುಕ ದೈನ್ಯದಿಂದ ನನ್ನಕಡೇ ನೋಡತಽ ಹೇಳಿದ:—

“ ಯಾಕ್ರೀ ಯಪ್ಪಾ ! ಗುರುತು ಸಿಗವೊಲ್ಲದೇನ್ರಿ ? ನಾನು ನಿಮ್ಮ ಜಾಡರ-ಜಾನಪ್ಪಾ ಅಲ್ಲೇನ್ರಿ ? ”

“ ಓ ! ನೀನು ಜಾನಪ್ಪ ಅಲ್ಲ....! ಏನೋ, ಒಮ್ಮಿಗೇಲೇ ನನಗ ಗುರುತು ಹತ್ತಲಿಲ್ಲ ಬಿಡು. ಹೀಂಗ್ಯಾಕಾಗೇದೀ ? ಇಲ್ಲೇನು ಕಾರಣ ಬಂದೀದಿ ? ”

ಕೇಳುಕೇಳುತಿರುವಾಗಲೇ ಅವನ ಕಡೆಗೆ ಒಂದೇ ಸವನೇ ನೋಡುತಿದ್ದೆ. ‘ ನಾನು ಹಿಂದಕ್ಕ ನೋಡಿದ್ದ ಜಾನಪ್ಪನೇ ಇಂವ ? ’ ಅಂತ ನನಗ ನಾನೇ ಎಷ್ಟೋಸಾರೆ ಕೇಳಿಕೊಂಡೆ. ಈಗಿನ ಜಾನಪ್ಪನ ವೇಷ ಹೂಣಕಾಲ ತನಕಾನೇ ಉಟುಕೊಂಡಿರೋದೊಂದು ಕೊಳಕು ಘೋತರ ; ಹರಕ್ಕರಕಾದದ್ದೊಂದು ಪೈರಣ : ಉಟ್ಟಿದ್ದ ಘೋತರದಂಥಾದೊಂದನ್ನೇ ತಲೀಗೆ ಸುತಿಕೊಂಡಾನ. ಹುಚ್ಚ ನಾಯಿ ಕಡಿದವರ್ಹಾಂಗ ತಲೀ ಗಡ್ಡ ಬೆಳಿಸ್ಯಾನ. ಅವನ ಹೆಂಡ್ತೀ ಮೈಮ್ಯಾಲಿನ ಸೀರೀ ನೋಡಿದರಂತೂ ಹೊಟ್ಟ ತುಂಬೋ ಕಲ್ಲೀಹಾಂಗ ಕಾಣಿಸ್ತಿತ್ತು. ನಾನು ಚಿಕ್ಕತನದೊಳಗ ನೋಡಿದ ಅವಳ ಬೆಡಗು-ಬಿನ್ನಾಣ ಅವಳನ್ನ ಬಿಟ್ಟು ಹೋಗಿ ಬಹಳ ದಿವಸ ಆದ್ಹಾಂಗ ಕಾಣಸತಿತ್ತು. ಮುಖಾ ಎಲ್ಲಾ ಬಣ್ಣಗೆಟ್ಟು ಸುಕ್ಕುಗಟ್ಟಿ ಹೋಗಿತ್ತು.

ನಾನು ಕೇಳಿದ ಮಾತುಗಳಿಗೆ ಉತ್ತರಾ ಕೊಡಬೇಕಂದರ ಜಾನಪ್ಪಗ ಸಾಧ್ಯ ಆಗಲಿಲ್ಲ. ಕಣ್ಣೀರು ಸುರಿಸತಾ ಹಾಂಗೇ ನಿಂತುಕೊಂಡಿದ್ದ. ನಾನೇ ಮತ್ತೆ ಕೇಳಿದೆ:

“ ಇದೇನೋ, ಹೀಂಗ್ಯಾಕೋ ಜಾನಪ್ಪಾ ನಿನ್ನ ಪರಿಸ್ಥಿತಿ ? ”

ಜಾನಪ್ಪನ ಕುತಿಗೀ ಸಿರಾ ಬಿಗಿದು ಬಂದೂ. ಪ್ರಯತ್ನಪಟ್ಟು ಮಾತನಾಡಿದ: “ ಹೊಟ್ಟೀ ತುಂಬಿಕೊಳ್ಳಾಕ ಅಂತ ಈ ಊರಿಗೆ ಬಂದೀ ದೀವಿ ಗೌಡರ ! ” ಮುಂದೆ ನಮ್ಮಿಬ್ಬರೊಳಗೂ ಸಂಭಾಷಣ ಹೀಂಗ ನಡೀತು:

“ ಇಲ್ಲಿಗ್ಯಾಕೋ ಬರೂದೂ ಹೊಟ್ಟೀತುಂಬಿಕೋಳಿಕ್ಕೆ ? ನಿನ್ನ ಮಕ್ಕಳಿಬ್ಬರೂ ಎಲ್ಲಿದ್ದಾರ ? ”

“ಅವರಿಬ್ಬರೂ ಹೋಗಿ ಗೋಕಾಂಪೀ ಗಿರಣ್ಯಾಗ ಸೇರಿಕೊಂಡಾರ್ರಿ!”

" ಗಿರಣ್ಯಾಗ್ಯಾಕ ? ಮುಸ್ಯಾಗ ಮಗ್ಗ ಇಲ್ಲೇನು ? "

" ಮಗ್ಗಾ ತೊಗೊಂಡು ಏನ ಮಾಡೂದಂತಿ ಯಪ್ಪಾ ! ಮಗ್ಗ ತಿರಿಗಿ ಹುಳಾ ಹತ್ತಿ ಹ್ವಾದೂ ; ಊರೀ ಹಚ್ಚಾಕ ಸುದ್ಧಾ ಬರೂಹಾಂಗಿಲ್ಲ. "

" ಈಗ ಸೀರೀ ನೇಯೂದು ಬಿಟ್ಟು ಬಿಟ್ಟೀದೀ ಏನು ? "

" ಯಾವ ದ್ವಾಪಾರವಾಗಿನ ಮಾತು ಕೇಳತೀರಿ ಗೌಡರ ! ಗಿರಣ್ಯಾಗ ನೇದ ಅಗ್ಗದ ಸೀರಿ ಪ್ಯಾಟ್ಯಾಗೆಲ್ಲಾ ತುಂಬಿಬಿಟ್ಟೊ. ಕಣ್ಣಿಗೇನೋ ಹಸಾ, ಬೆಲೀ ಮಾತ್ರ ತುಸಾ! ಹೀಂಗಿರುವಾಗ ಅವನ್ನ ಬಿಟ್ಟು ನಮ್ಮ ಹಳ್ಳೀ ಊರಿನ ಕೈಮಗ್ಗದ ಸೀರೀ ಯಾರು ತೊಗೊಂಡಾರು ಯಪ್ಪಾ ? "

" ಹಾಂಗಾದರ-ಸೀರೀ ನೇಯೂ ಕೆಲಸಾ ಬಿಟ್ಟು ಬಿಟ್ಟೀದೀ ಅನ್ನು ! "

" ಅದನ್ನ ಬಿಟ್ಟು ಬಾಳದಿನಾ ಆತರಿ. ಪುಣ್ಯೇವಂತ ಗಾಂಧೀ ಮಾರಾಜನ ಚಳೂಳಿಂದ, ಇಷ್ಟು ದಿನಾ ಕೊಡೀ ಅರಿವ್ಯಾದರೂ ನೇಯಾಕ ಸಿಗತಿತ್ತು; ಈಗ ಅದೂ ಎಲ್ಲಾ ಕಡಿಮಿ ಆಗಿ ಹೋತು. ಸೀರಿ ಇಲ್ಲಾ ; ಗಿರಣೀ ನೂಲು ತಗೊಂಡು ಬಿಳೀನೇಗಿನಾದರೂ ಹೂಡಬೇಕಂದರ, ಅದೂ ಯಾವಾರ ಮೈಮ್ಯಾಗಃ ಯಪ್ಪಾ ! ನಾಕು ರುಪಾಯಿಗೆ ಒಂದ ಗಂಟು ಗಿರಣೀನೂಲು ಒದಕ್ತೈತಿ. ಹಾಸುಮಾಡಿ ನೇದರ, ಎರಡು ಹೊರೀ ಧೋತರ ಆಗತಾವ. ಪ್ಯಾಟ್ಯಾಗ ಅವನ್ನ ಮಾರಾಕ ಒಯ್ದರ, ದೀಡರೂಪಾಯಿಗೊಂದು ಹೊರೀ ಸುದ್ಧಾ ಯಾರೂ ಕೇಳೋದಿಲ್ಲ. ರಾಯರಃ, ಹಿರಿಹಿರ್ಯಾರಿಂದ ನಡಕೊಂಡು ಬಂದ ನಮ್ಮ ಉದ್ದಿಮಿ ಎಲ್ಲಾ ಹಾಳಾಗಿ ಹೋತಿರಿ! ಮಗ್ಗಾಗಿಗ್ಗಾ ಹೊರೀಕಟ್ಟಿ ಮೂಲ್ಯಾಗ ಒಗಿಯೂ ಪರಸಂಗ ಬಂದ ಬಿಟ್ಟೈತಿರಿ. ಅಂತಃ ಹುಡುಗೂರು ಕೆಲಸಾ ಹುಡಕತಃ ಗಿರಣಿಗೆ ಹ್ವಾದರು. ನಾವಿಬ್ಬರೂ ಇಲ್ಲಿಗೆ ಹೊಂಟಬಂದೀವಿ ನೋಡ್ರಿ . . " ಮಾತಿನ ಮುಗಿತಾಯದ ಕೂಡಾನಃ ಜಾನಪ್ಪನ ಕಣ್ಣಿಂದಃ ನೀರು ತುಳಿಕಿದೂ.

ಜಾನಪ್ಪನ ಮಾತು ಕೇಳಿ, ಅವನ ಸ್ಥಿತಿಗತಿ ನೋಡಿ, ನನ್ನ ಹೃದಯ ನಿಟ್ಟುಸಿರೊಂದನ್ನ ಹೊರಗ ಹಾಕಿತು. ಕಳವಳವೊಂದನ್ನಃ ತುಂಬಿ ಕೊಂಡಿರೋ ಕಣ್ಣುಗಳೆರಡೂ ಆ ಗಂಡಾ ಹೆಂಡ್ತೀ ಕಡಿಗೆ ಎಂವೀಯಿಕ್ಕದಃ ನೋಡಲಿಕ್ಕೆ ಹತ್ತಿದೂ. ನನಗಾಗ ಏನು ಮಾತಾಡಬೇಕು ಅನ್ನೋದು

ತಿಳೀದ್ಹಾಂಗಾತು, ಉಕ್ಕಿಬರುತಿರೋ ದುಃಖಾನ ಹತ್ತಿಕ್ಕಿಕೊಳತಾ ಜಾನಪ್ಪನು ಮತ್ತೆ ಮಾತಾಡಿದ:

“ ರಾಯರು ಯಾರಲ್ಲ್ಯಾದರೂ ನಮಗ ಕೆಲಸಾ ಕೊಡಿಸರೀ. . . . ! ಒಬ್ಬರ ಮನ್ಯಾಗ ಸೆಗಣೀ ಬಳದಾದರೂ ಬದಿಕಿಕೊಂಡು ಇರತೇವ್ರು. . . . ! ಎಷ್ಟು ದಿನಾ ಅಂತ ಉಪ್ವಾಸಾ ವನವಾಸಾ ಸೋಸೂಣು. . ರಾಯರಽ ? ”

ಜಾನಪ್ಪನ ಕಣ್ಣೀರು ಹೊರಚೆಲ್ಲಿತು. ತಲಿಗೆ ಸುತ್ತಿರೂ ಧೋತರದ ಸೆರಗಿನಿಂದ ಕಣ್ಣು ಒರಸಿಕೊಂಡ. ಅವನ ಹೆಂಡ್ತಿ ಅಂತೂ ಬಿಕ್ಕಿ ಬಿಕ್ಕಿ ಅಳಲಿಕ್ಕೆ ಹತ್ತಿದ್ಲು. ನನ್ನ ಮನಸಿನೊಳಗ ವಿಚಾರದ ಮೋಡ ಓಡ್ಯಾಡಲಿಕ್ಕೆ ಆರಂಭ ಮಾಡಿದೂ :

“ಅಯ್ಯೋ, ನಾ ಈಗ ಏನು ಮಾಡಬೇಕು ! ನನಗಾದರೂ ಕೈತುಂಬಾ ಸಂಬಳ ಸಿಗತಿದ್ದರ ಇವರಿಬ್ಬರನೂ ನಮ್ಮ ಮನ್ಯಾಗಽ ಇಟ್ಟುಕೊಂಡು ಬಿಡತಿದ್ದೆ; ಆದರ ನಮ್ಮ ಮನ್ಯಾಗ ನೋಡಿದರ, ಸಂಪಾದಿಸಾಂವ ನಾ ಒಬ್ಬ : ನನ್ನ ಮ್ಯಾಲ ಅವಲಂಬಿಸಿರೋ ಅವರು ಏಳೆಂಟು ಜನ ! ನಮಗೂ ಆಗಾಗ ಹೆಚ್ಚಿನ ಏಕಾದಶೀ ಮಾಡೋ ಸಂದರ್ಭ ಇರತಿರುವಾಗ ಇವರಿಬ್ಬರನ್ನೂ ಕಟಿಗೊಳ್ಳೋ ಬಗೀ ಹ್ಯಾಂಗ. . . . ! ಹಾಂಗಾದರ ಒಂದು ಕಾಲಕ್ಕ ನಮ್ಮ ಹಳ್ಳಿಗೆ ಹಳ್ಳೀನಽ ಅರಸನ್ಹಾಂಗ ಆಳತಿರೋ ಜಾನಪ್ಪನ್ನ, ಎರಡನೇಯವರ ಮನ್ಯಾಗ ಊಳಗಾ ಸೋಸಲಿಕ್ಕೆ ಹಚ್ಚಬೇಕಽ ? ಪಾಪ ! ಮುಪ್ಪಿನ ಕಾಲದೊಳಗ ಎಂಥಾ ವ್ಯಾಳ್ಯಾ ಬಂತು ಜಾನಪ್ಪಗ. . ”

ಜಾನಪ್ಪ, ನಿಂಗಮ್ಮ ಕರುಣಾದ ಮೂರ್ತೀಽ ಹಾಂಗ ಸುಮ್ಮನಽ ನಿಂತಲ್ಲೇ ನಿಂತಿದ್ದರು. ನಾನು ಮುಂದಲೀ ಮ್ಯಾಲ ಕೈಯಿಟುಗೊಂಡು ಸುಮ್ಮನಽ ಕೂತುಗೊಂಡಿದ್ದೆ. ಏನು ಮಾತಾಡಬೇಕು. . . . ಅನ್ನೋದಽ ಗೊತ್ತಾಗವೊಲ್ಲದಾಗಿತ್ತು. ಮನಸಿನ ಯಾವದೋ ಒಂದು ಪದರು ಮಾತ್ರ ಅಂದಿನ—ಇಂದಿನ ಜಾಡರ ಜಾನಪ್ಪನ ಪರಿಸ್ಥಿತೀನ ತೂಗಿ ತೂಗಿ ನೋಡತಿತ್ತು!